

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜುಲೈ 3 ಶುಕ್ರವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 78 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ಬಿಚ್ಚು ನುಡಿ


ವಿಕ್ರಂ ಮುತ್ತಣ್ಣ

ಜನ 'ಭ್ರಷ್ಟಾಚಾರ' ಮನ್ನಿಸಿದಂತಿದೆ...!

■ಪುಟ–4

ಸಾರಿಗೆ ನೌಕರರ ವೇತನ ಪರಿಷ್ಕರಣೆ; ಈ ತಿಂಗಳಿಂದಲೇ ಖಾತೆಗೆ ಜಮೆ!

ಬೆಂಗಳೂರು, ಜು.2– ರಾಜ್ಯ ಸರ್ಕಾರ, ಸಾರಿಗೆ ನೌಕರರಿಗೆ ಕೊನೆಗೂ ವೇತನ ಹೆಚ್ಚಳ ಮಾಡಿದೆ.



4 ಸಾರಿಗೆ ನಿಗಮಗಳಾದ ಕೆಎಸ್ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ ಮತ್ತು ಕೆಕೆಆರ್‌ಟಿಸಿ ನೌಕರರ ಮೂಲ ವೇತನವನ್ನು 12.5%ರಷ್ಟು ಹೆಚ್ಚಿಸಿದ್ದು, ಈ ತಿಂಗಳಿನಿಂದಲೇ ಸಾರಿಗೆ ■6ನೇ ಪುಟಕ್ಕೆ

ಪ್ರಜಾಸೇವೆ ಕಾರ್ಯಾರಂಭ

ಕಲಬುರಗಿಯಲ್ಲಿ ಜವಳಿ, ದೇವನಹಳ್ಳಿಯಲ್ಲಿ ಏರೋ ಪಾರ್ಕ್ ಸ್ಥಾಪನೆಗೆ ಸಚಿವ ಸಂಪುಟ ಅಸ್ತು

ಬೆಂಗಳೂರು, ಜು.2– ಸಾರ್ವಜನಿಕರ ಅಹವಾಲುಗಳನ್ನು ಒಂದೇ ಸೂರಿನಡಿ ತ್ವರಿತವಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಮಹತ್ತರ ಹೆಜ್ಜೆಯಿಟ್ಟ ರಾಜ್ಯ ಸರ್ಕಾರ, ಜನರ ಕಷ್ಟ ಆಲಿಸಲು ಹೊಸದಾಗಿ 'ಪ್ರಜಾಸೇವೆ' ಇಲಾಖೆಯನ್ನು ಆರಂಭಿಸಿದೆ.

ಇಂದು ವಿಧಾನಸೌಧದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ, ಪ್ರಜಾಸೇವೆ ಇಲಾಖೆ ಆರಂಭ, ಕಲಬುರಗಿಯಲ್ಲಿ ಜವಳಿ ಪಾರ್ಕ್ ಸ್ಥಾಪನೆ ಹಾಗೂ ದೇವನಹಳ್ಳಿಯಲ್ಲಿ ಏರೋ ಪಾರ್ಕ್ ಸ್ಥಾಪನೆಗೆ ಒಪ್ಪಿಗೆ ನೀಡಲಾಗಿದೆ.

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಸಿಎಂ ಶಿವಕುಮಾರ್, ಇನ್ನುಂದೆ ಸಾರ್ವಜನಿಕರು ತಮ್ಮ ಸಮಸ್ಯೆಗಳು, ದೂರುಗಳು ಅಥವಾ ಪ್ರತಿಭಟನೆಯ ಅರ್ಜಿಗಳನ್ನು ಹಿಡಿದು ಅಲ್ಲಿ–ಇಲ್ಲಿ ಅಲೆಯುವ ಅಗತ್ಯವಿಲ್ಲ. ಜನರ ಕಷ್ಟ ಆಲಿಸಲು ಸರ್ಕಾರ ಹೊಸದಾಗಿ 'ಪ್ರಜಾಸೇವೆ' ವ್ಯವಸ್ಥೆಯನ್ನು ತಂದಿದ್ದು, ಒಬ್ಬ



ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡುತ್ತಿರುವುದು.

ಸಚಿವರಿಗೆ ಇದರ ಸಂಪೂರ್ಣ ಜವಾಬ್ದಾರಿ ವಹಿಸಲಾಗುತ್ತಿದೆ ಎಂದರು. ಪ್ರತಿ ಜಿಲ್ಲಾ ಉಸ್ತುವಾರಿ ಸಚಿವರು ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ತಿಂಗಳಿಗೆ ಕಡ್ಡಾಯವಾಗಿ ಎರಡು ದಿನ ಈ ಪ್ರಜಾಸೇವೆ ಅಭಿಯಾನ ನಡೆಸಬೇಕೆಂದು ಸಿಎಂ ಆದೇಶಿಸಿದ್ದಾರೆ.

ಜಲಾಶಯ ತುಂಬುವವರೆಗೆ ಬೆಳೆ ಬೆಳೆಯಬೇಡಿ: ಇನ್ನು ರಾಜ್ಯದಲ್ಲಿ ತೀವ್ರ ಬರ ಇದೆ. ನೀರು ಮತ್ತು ವಿದ್ಯುತ್‌ಗೆ ಅಭಾವ ಇದೆ. ವಿದ್ಯುತ್ ಅಭಾವ ತಪ್ಪಿಸಲು ಪರ್ಯಾಯದತ್ತ ಗಮನ ಹರಿಸಬೇಕಿದೆ. ಬರಪೀಡಿತ ಪ್ರದೇಶಗಳಿಗೆ ನಾನು ಭೇಟಿ ನೀಡುತ್ತೇನೆ. ರಾಜ್ಯದ ಜಲಾಶಯಗಳಿಗೆ ಒಳಹರಿವು ಪ್ರಮಾಣ ಕಡಿಮೆ ಇದೆ. ಹೀಗಾಗಿ ರೈತರು ಜಲಾಶಯ ತುಂಬುವವರೆಗೆ ಬೆಳೆ ಬೆಳೆಯಲು ಹೋಗಬೇಡಿ. ಈ ಬಾರಿ ಇಡೀ ದೇಶದಲ್ಲಿಯೇ ಭೀಕರ ಬರಗಾಲ ಇದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಕೂಡ ಸೂಚನೆ ಕೊಟ್ಟಿದ್ದಾರೆ ಎಂದು ಹೇಳಿದರು. ಬೆಂಗಳೂರಿನಲ್ಲಿ ಒಸಿ ಮತ್ತು ಸಿಸಿ ವಿಚಾರದಲ್ಲಿ ಕೋರ್ಟ್ ವಿನಾಯಿತಿ ನೀಡಿದ ಬೆನ್ನಲ್ಲೇ, ಕಟ್ಟಡ ಕಟ್ಟಿದವರು ಅರ್ಜಿ ಸಲ್ಲಿಸಲು ಆಗಸ್ಟ್ 15ರವರೆಗೆ ಕಾಲಾವಕಾಶ ವಿಸ್ತರಿಸಲಾಗಿದೆ. ■6ನೇ ಪುಟಕ್ಕೆ

ಮಾಗಡಿ ಬಳಿ ಕಲ್ಲು ಕ್ವಾರಿಯಲ್ಲಿ ಬಂಡೆ ಕುಸಿತ: ಎಂಟು ಮಂದಿ ಸಾವು



ಬಂಡೆ ಕುಸಿದು 8 ಮಂದಿ ಬಲಿಯಾದ ಸ್ಥಳದ ಭೀಕರ ದೃಶ್ಯ.

ಬೆಂಗಳೂರು, ಜು.2(ಕೆಎಂಶಿ)– ನಗರದ ಹೊರವಲಯದ ಮಾಗಡಿ ರಸ್ತೆ ಬಳಿಯ ಮಾದಾಪಟ್ಟಣದ ಕಲ್ಲು ಕ್ವಾರಿಯಲ್ಲಿ ಬಂಡೆ ಕುಸಿದು 8 ಕಾರ್ಮಿಕರು ಮೃತಪಟ್ಟ ಘಟನೆ ಸಂಭವಿಸಿದೆ. ಎರಡು ಹಂತಗಳಲ್ಲಿ ನಡೆಯುತ್ತಿದ್ದ ಕಲ್ಲು ಗಣಿಗಾರಿಕೆಯಲ್ಲಿ ಮೇಲಿನಿಂದ ಬಂಡೆ ಕುಸಿದು, ಸ್ಥಳದಲ್ಲೇ 8 ಮಂದಿ ಅಸು ನೀಗಿದ್ದು, ಮತ್ತೊಬ್ಬರು ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ, 4 ಮಂದಿ ತೀವ್ರವಾಗಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಾವೇರಿ ಕ್ರಷರ್‌ನಲ್ಲಿ ಈ ದುರಂತ ಸಂಭವಿಸಿದ್ದು ಒಟ್ಟು 16 ಕಾರ್ಮಿಕರು ಕೆಲಸ ಮಾಡುತ್ತಿದ್ದು, ಅವರೆಲ್ಲರೂ ಅಲ್ಲಿಯೇ ವಾಸ ಮಾಡುತ್ತಿದ್ದರು.

ಮೇಲಿನಿಂದ ಬಂಡೆ ಉರುಳಿದ ರಭಸಕ್ಕೆ 8 ಮಂದಿ ಸಿಲುಕಿ ಅಪ್ಪಚ್ಚಿಯಾಗಿದ್ದು, ಮೂರು ಟ್ರ್ಯಾಕ್ಟರ್‌ಗಳು ನುಚ್ಚುನೂರಾಗಿವೆ. ಇವರಲ್ಲಿ ಕೆಲವರಿಗೆ ಗಂಭೀರ ಗಾಯಗಳಾಗಿ ಆಸ್ಪತ್ರೆಯ ತುರ್ತು ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆ ಮಾಹಿತಿ ಲಭ್ಯವಾಗುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ■6ನೇ ಪುಟಕ್ಕೆ


ಮುಂಜಾನೆ ಮಂಡ್ಯ ಬಳಿ ಗುಂಡಾರಿಸಿ ದರೋಡೆ ಯತ್ನ; ಸಂಜೆ ವೇಳೆಗೆ ನಂಜನಗೂಡು ಬಳಿ ದರೋಡೆ!

- ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಟ್ರಕ್ ಡ್ರೈವರ್ ಮೇಲೆ ಗುಂಡು ಹಾರಿಸಿದ ಮುಸುಕುಧಾರಿಗಳು
- ನಂಜನಗೂಡು ಬಳಿ ಕೇರಳದ ತಲಚೇರಿಯವರ ಅಡ್ಡಗಟ್ಟಿ ಕಾರಿನೊಂದಿಗೆ ನಗದು ದರೋಡೆ

ಮೈಸೂರು/ಮಂಡ್ಯ: ಹೆದ್ದಾರಿಗಳಲ್ಲಿ ದರೋಡೆಕೋರರು ಹಗಲು–ರಾತ್ರಿಯೆನ್ನದೆ ದಾಳಿ ನಡೆಸುತ್ತಿದ್ದಾರೆ. ಗುರುವಾರ ಮುಂಜಾನೆ ಮಂಡ್ಯ ಬಳಿ ಟ್ರಕ್ ಮೇಲೆ ಗುಂಡು ಹಾರಿಸಿ ದರೋಡೆಗೆ ಯತ್ನಿಸಿದ್ದರೆ, ಸಂಜೆ ವೇಳೆಗೆ ನಂಜನಗೂಡು ಬಳಿ ಕಾರು ಸಮೇತ ಲಕ್ಷಾಂತರ ರೂ. ದೋಚಿ ಪರಾರಿಯಾಗಿದ್ದಾರೆ.

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ವಾಣಿಜ್ಯ ಸರಕು ಸಾಗಣೆಯ ಟ್ರಕ್ ಮೇಲೆ ಗುಂಡಿನ ದಾಳಿ ನಡೆಸಿ, ದರೋಡೆಗೆ ಯತ್ನ ನಡೆಸಿದ್ದು, ಮೈಸೂರು–ಊಟಿ ಹೆದ್ದಾರಿಯಲ್ಲಿ ಕೇರಳ ಮೂಲದವರ ಮೇಲೆ ದಾಳಿ ಮಾಡಿ, ದರೋಡೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಈ ಎರಡು ಪ್ರತ್ಯೇಕ ಘಟನೆಗಳಲ್ಲೂ ಐವರು ದರೋಡೆಕೋರರ ಗುಂಪು ಭಾಗಿಯಾಗಿದೆ.


ಕಾರು ಸಹಿತ ದರೋಡೆ: ಕೇರಳದ ತಲಚೇರಿ ನಿವಾಸಿಗಳಾದ ಲತೀಫ್(55) ಮತ್ತು ಅನಿಲ್(24) ಮೈಸೂರಿನಿಂದ ತಮ್ಮ ಮಾರುತಿ ಸುಜುಕಿ ಸಿಯಾಜ್ ಕಾರಿನಲ್ಲಿ ಗುರುವಾರ ಸಂಜೆ ವಾಪಸ್ಸಾಗುತ್ತಿದ್ದ ವೇಳೆ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿ, ನಂಜನಗೂಡು ತಾಲೂಕಿನ ಸಿಂಧುವಳ್ಳಿಪುರ ಗ್ರಾಮದ ಬಳಿ ಕಾರೊಂದು ಹಿಂದಿನಿಂದ ಡಿಕ್ಕಿ ಹೊಡೆದಿದೆ. ಈ ವೇಳೆ ಏನಾಯಿತೆಂದು ನೋಡಲು ಲತೀಫ್ ಹಾಗೂ ಅನಿಲ್ ಕಾರು ನಿಲ್ಲಿಸಿದ್ದಾರೆ. ಅಷ್ಟರಲ್ಲೇ ಹಿಂದಿನಿಂದ ಡಿಕ್ಕಿ ಹೊಡೆದ ಕಾರಿನಿಂದಿಳಿದ ಐವರು ಖದೀಮರು, ಲತೀಫ್ ■6ನೇ ಪುಟಕ್ಕೆ



ಶಂಕರ್ ಎಂಬಾತ ಚಲಾಯಿಸುತ್ತಿದ್ದ ವಾಹನದ ಮೇಲೆ ಗುಂಡಿನ ದಾಳಿ ಆಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಈ ಬಗ್ಗೆ ಖಚಿತ ಮಾಹಿತಿ ಇಲ್ಲ. ಈ ವಿಚಾರವಾಗಿ ಮಾಹಿತಿ ಪಡೆಯಲು ಶಂಕರ್‌ಗೆ ಘಟನೆ ನಡೆದಿದೆ ಎನ್ನಲಾದ ಪೊಲೀಸ್ ಠಾಣಾ ವ್ಯಾಪ್ತಿಗೆ ಬಂದು ವಿವರಣೆ ನೀಡುವಂತೆ ಸೂಚಿಸಲಾಗಿದೆ. ಆದರೆ, ಆತ ಬರುವುದಿಲ್ಲ ಎಂದು ಹೇಳಿ, ಫೋನ್ ಸಹ ಸ್ವಿಚ್ ಆಫ್ ಮಾಡಿಕೊಂಡಿದ್ದಾರೆ. ಘಟನೆ ನಡೆದಿರುವುದು ನಿಜವೇ ಆಗಿದ್ದರೆ ಅವರು ಬಂದು ಹೇಳಿಕೆ ಕೊಡಲೇಬೇಕಾಗುತ್ತದೆ. ಇದು ಸಣ್ಣ ವಿಚಾರವಲ್ಲ, ತುಂಬಾ ಗಂಭೀರ ವಿಚಾರ. ಬರಲೇಬೇಕೆಂದು ಸೂಚನೆ ನೀಡಿದ್ದೇನೆ. ಅಲ್ಲದೆ ಆತನನ್ನು ಕರೆ ತರಲು ಪೊಲೀಸರನ್ನು ಸಹ ಕಳುಹಿಸಿದ್ದು, ಆತ ಬಂದು ವಿವರಣೆ ನೀಡಿದ ಬಳಿಕ ಪ್ರಕರಣದ ಸತ್ಯಾಸತ್ಯತೆ ತಿಳಿಯಲಿದೆ.


-ಡಾ.ವಿ.ಜೆ.ಶೋಭಾರಾಣಿ, ಮಂಡ್ಯ ಎಸ್ಪಿ

ಸಿಎಂ ದೆಹಲಿ ಪ್ರವಾಸ ಮುಂದೂಡಿಕೆ



ಬೆಂಗಳೂರು, ಜು.2(ಕೆಎಂಶಿ)–ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಸ್ವದೇಶಕ್ಕೆ ಮರಳುವುದು ವಿಳಂಬವಾಗುವ ಹಿನ್ನೆಲೆಯಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ತಮ್ಮ ದೆಹಲಿ ಪ್ರವಾಸ ಮುಂದೂಡಿದ್ದಾರೆ. ವಿಧಾನ ಮಂಡಲದ ಮಳೆಗಾಲದ ಅಧಿವೇಶನಕ್ಕೂ ಮುನ್ನ ಸಂಪುಟ ವಿಸ್ತರಿಸಿ, 18 ಮಂದಿ ಸೇರ್ಪಡೆ ಮಾಡಿಕೊಳ್ಳಲು ವರಿಷ್ಠರ ಅನುಮತಿಗಾಗಿ ಮುಖ್ಯಮಂತ್ರಿ ಗುರುವಾರ ಸಂಜೆ ದೆಹಲಿಗೆ ತೆರಳಬೇಕಿತ್ತು. ರಾಹುಲ್‌ಗಾಂಧಿ ಲಂಡನ್ ಪ್ರವಾಸದಿಂದ ಜು.5ಕ್ಕೆ ಹಿಂತಿರುಗಲಿದ್ದು, ಮುರುದಿನ ದೆಹಲಿಗೆ ತೆರಳಲು ಮುಖ್ಯಮಂತ್ರಿ ನಿರ್ಧರಿಸಿದ್ದಾರೆ.





ಮಳೆ ಅಭಾವದ ಹಿನ್ನೆಲೆ

ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ 117 ಕೋಟಿ ಬಿಡುಗಡೆ

- ಕುಡಿಯುವ ನೀರಿನ ಸಮಸ್ಯೆಗೆ 24 ಗಂಟೆಯಲ್ಲಿ ಪರಿಹಾರ
- ಅಗತ್ಯ ಬಿದ್ದರೆ ಮಾತ್ರವೇ ಬೋರ್‌ವೆಲ್ ಕೊರೆಸಲು ನಿರ್ಧಾರ

ಬೆಂಗಳೂರು, ಜು.2– ರಾಜ್ಯದಲ್ಲಿ ಈ ಬಾರಿ ಎಲ್ ನಿ ನೋ ಪರಿಣಾಮದಿಂದ ಮಳೆಯ ಕೊರತೆಯಾಗಿದೆ. ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಎದುರಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರ ಮುಂಗಡವಾಗಿ 117 ಕೋಟಿ ರೂ. ಬಿಡುಗಡೆ ಮಾಡಿದೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ.ಖಂಡ್ರೆ ನೀರು ಪೂರೈಕೆಗೆ ಹಣದ ಕೊರತೆ ಇಲ್ಲ ಎಂದು ಹೇಳಿದರು



ಈಶ್ವರ ಬಿ.ಖಂಡ್ರೆ


ಈಗಾಗಲೇ ಸುಮಾರು 85 ಕೋಟಿ ರೂಪಾಯಿಗಳಿಗೆ ಕ್ರಿಯಾ ಯೋಜನೆ ರೂಪಿಸಲಾಗಿದೆ. 30 ಕೋಟಿ ರೂ. ವೆಚ್ಚ ಮಾಡಲಾಗಿದ್ದು, ನೀರಿನ ಸಮಸ್ಯೆ ಇರುವ ಗ್ರಾಮಗಳಲ್ಲಿ ಕುಡಿಯುವ ■6ನೇ ಪುಟಕ್ಕೆ

ಮತ್ತೆ ಫೀಲ್ಡ್‌ಗಿಳಿದ ಆರ್‌ಎಸ್‌ಎಸ್

ಜು.6ರಿಂದ 10 ದಿನ ಬೆಳಗಾವಿಯಲ್ಲಿ ಪ್ರಮುಖ ಸ್ವಯಂ ಸೇವಕರ ಸಭೆ

- ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ತರುವ ಶಪಥ
- ಗೌಪ್ಯ ಕಾರ್ಯತಂತ್ರ; ಬಿಜೆಪಿ ಮುಖಂಡರಿಗಿಲ್ಲಾ ಆಹ್ವಾನ

ಬೆಂಗಳೂರು, ಜು.2(ಕೆಎಂಶಿ)– ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರಲೇಬೇಕೆಂದು ಪಣ ತೊಟ್ಟಿರುವ ಆರ್‌ಎಸ್‌ಎಸ್ ತನ್ನ ಪ್ರಮುಖ ಸ್ವಯಂ ಸೇವಕರ ಸಭೆಯನ್ನು ಜುಲೈ 6ರಿಂದ 10 ದಿನಗಳ ಕಾಲ ಆಯೋಜಿಸಿದೆ.



ಮೋಹನ್ ಭಾಗವತ್

ಸರ ಸಂಘ ಸಂಚಾಲಕ ಮೋಹನ್ ಭಾಗವತ್ ಸಭೆ ನೇತೃತ್ವ ವಹಿಸಲಿದ್ದು, ಇತರ ಪ್ರಮುಖರಾದ ಸರ ಕಾರ್ಯವಾಹಕ ದತ್ತಾತ್ರೇಯ ಹೊಸಬಾಳೆ, ಸಹ ಕಾರ್ಯವಾಹಕರಾದ ಡಾ. ಕೃಷ್ಣಗೋಪಾಲ್, ಸಿ.ಆರ್. ಮುಕುಂದ್, ಅರುಣ್ ಕುಮಾರ್, ರಾಮದತ್ತ, ಅಲೋಕ್ ಕುಮಾರ್, ಅತುಲ್ ಲಿಮಯೇ ಜೊತೆಗೆ ಅಖಿಲ ಭಾರತೀಯ ಕಾರ್ಯವಿಭಾಗದ ಪ್ರಮುಖರು, ಕಾರ್ಯಕಾರಿ ಮಂಡಳಿ ■6ನೇ ಪುಟಕ್ಕೆ

ಚಾಮುಂಡಿಬೆಟ್ಟದಲ್ಲಿ ಪ್ರಸಾದ್ ಯೋಜನೆ ಕಾಮಗಾರಿ ಸ್ಥಗಿತ; ಪವಿತ್ರ ಕ್ಷೇತ್ರದ ಅವಲಕ್ಷಣಕ್ಕೆ ಭಕ್ತರ ಬೇಸರ

- ಕಾಮಗಾರಿ ಸ್ಥಳದ ಸುತ್ತ ತಡೆಗೋಡೆ ನಿರ್ಮಾಣ
- ಯಾರೂ ಅದರತ್ತ ಸುಳಿಯದಂತೆ ನಿರ್ಬಂಧ
- ತಡೆಯಾಜ್ಞೆ ಪ್ರಶ್ನಿಸಿದ ಅರ್ಜಿ ವಿಚಾರಣೆ ಆರಂಭವೇ ಆಗಿಲ್ಲ
- ನ್ಯಾಯಾಲಯಕ್ಕೆ ವಸ್ತುಸ್ಥಿತಿ ಮನವರಿಕೆ ಮಾಡುವುದು ಅತ್ಯವಶ್ಯ

ಮೈಸೂರು, ಜು.2(ಬಿಎಲ್‌ಯು)– ಹೈಕೋರ್ಟ್ ನೀಡಿರುವ ಮಧ್ಯಂತರ ತಡೆ ಆದೇಶದಿಂದ ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ 47 ಕೋಟಿ ವೆಚ್ಚದಲ್ಲಿ ಕೈಗೊಂಡಿದ್ದ ಪ್ರಸಾದ್ ಯೋಜನೆಯ ಕಾಮಗಾರಿಗಳು ಸ್ಥಗಿತಗೊಂಡಿವೆ. ಕಾಮಗಾರಿ ಸ್ಥಳದತ್ತ ಯಾರೂ ಸುಳಿಯದಂತೆ ಸುತ್ತ ಕಬ್ಬಿಣದ ಶೀಟ್ ಹಾಗೂ ಬ್ಯಾರಿಕೇಡ್‌ಗಳನ್ನು ಅಳವಡಿಸಿದ್ದು, ಅವ್ಯವಸ್ಥೆ ತಾಂಡವಾಡುತ್ತಿದೆ. ಅಲ್ಲದೆ ಚಾಮುಂಡಿ ಬೆಟ್ಟಕ್ಕೆ ಪ್ರತಿ ದಿನ ಆಗಮಿಸುವ ದೇಶ–ವಿದೇಶದ ಭಕ್ತರು, ಪ್ರವಾಸಿಗರಲ್ಲಿ ಈ ಸ್ಥಳಗಳು ಪ್ರಶ್ನಾರ್ಥಕವಾಗಿವೆ.

ಕೇಂದ್ರ ಸರ್ಕಾರದ ಪ್ರಸಾದ್ ಯೋಜನೆಯಡಿ ಚಾಮುಂಡಿಬೆಟ್ಟದ ದೇವಸ್ಥಾನದ ಸಮೀಪ ಕ್ಯೂ ಮಂಟಪ, ಮಹಿಷಾಸುರ ಪ್ರತಿಮೆ ಸಮೀಪ ಮಲ್ಟಿ ಪರ್ಪಸ್ ಸೆಂಟರ್, ಪಾರಂಪರಿಕ ಶೈಲಿಯ ಪ್ರವೇಶ ದ್ವಾರ, ಶೌಚಾಲಯ, ಚಪ್ಪಲಿ ಸ್ಟ್ಯಾಂಡ್, ವೀವಿಂಗ್ ಟವರ್ ಹಾಗೂ ಚಾಮುಂಡಿ ಬೆಟ್ಟದ ಮೆಟ್ಟಿಲುಗಳ ನವೀಕರಣ ಕಾಮಗಾರಿ ಆರಂಭಿಸಲಾಗಿತ್ತು. ಇತಿಹಾಸ ಪ್ರಸಿದ್ಧ ಚಾಮುಂಡಿಬೆಟ್ಟಕ್ಕೆ ಆಧುನಿಕತೆಯ ಸ್ಪರ್ಶ ನೀಡಲು ಪ್ರಸಾದ್ ಯೋಜನೆಯಲ್ಲಿ ಕೈಗೊಂಡ ಕಾಮಗಾರಿಗಳು ಭರದಿಂದ ಸಾಗಿದ್ದವು. ■6ನೇ ಪುಟಕ್ಕೆ

ಚಾಮುಂಡಿಬೆಟ್ಟದಲ್ಲಿ ಪ್ರಸಾದ್ ಯೋಜನೆಗೆ ತಡೆ ಆದೇಶ ರದ್ದು ಮಾಡುವಂತೆ ಹೈಕೋರ್ಟ್‌ಗೆ ಮನವಿ ಮಾಡಲಾಗಿದೆ. ಸರ್ಕಾರದ ಪರವಾಗಿ ಪ್ರವಾಸೋದ್ಯಮ ಇಲಾಖೆಯ ಜಂಟಿ ಆಯುಕ್ತರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಕಳೆದ ತಿಂಗಳು ನ್ಯಾಯಾಲಯಕ್ಕೆ ರಜಾ ಇದ್ದ ಹಿನ್ನೆಲೆಯಲ್ಲಿ ವಿಚಾರಣೆ ಆರಂಭವಾಗಲಿಲ್ಲ. ಈಗ ನ್ಯಾಯಾಲಯದ ಕಲಾಪ ಆರಂಭ ಆಗಿರುವುದರಿಂದ ಶೀಘ್ರ ವಿಚಾರಣೆ ನಡೆಯಲಿದೆ ಎಂಬ ವಿಶ್ವಾಸವಿದೆ.

- ಎಂ.ಜೆ.ರೂಪ, ಕಾರ್ಯದರ್ಶಿ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ.



ಮೈಸೂರಿನ ಚಾಮುಂಡಿಬೆಟ್ಟದ ವ್ಯೂ ಪಾಯಿಂಟ್ ಬಳಿ ಪ್ರಸಾದ್ ಯೋಜನೆಯಡಿ ಕೈಗೊಂಡ ಕಾಮಗಾರಿ ಸ್ಥಗಿತಗೊಂಡಿರುವ ಹಿನ್ನೆಲೆಯಲ್ಲಿ ಸುರಕ್ಷತೆ ದೃಷ್ಟಿಯಿಂದ ಕಬ್ಬಿಣದ ಶೀಟ್‌ನಿಂದ ತಡೆಗೋಡೆ ನಿರ್ಮಾಣ ಮಾಡಲಾಗಿದೆ.

ಆಷಾಢ ಶುಕ್ರವಾರದಂದು ಈ ಸ್ಥಳ ಅಲಭ್ಯ

ಆಷಾಢ ಶುಕ್ರವಾರಗಳಂದು ಚಾಮುಂಡಿಬೆಟ್ಟಕ್ಕೆ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ಈ ಹಿನ್ನೆಲೆಯಲ್ಲಿ ಪೊಲೀಸರು ದೇವಸ್ಥಾನದ ಸುತ್ತಲಿನ ಜಾಗದಲ್ಲಿ ಭಕ್ತರು ಸರದಿ ಸಾಲಿನಲ್ಲಿ ನಿಲ್ಲಲು ವ್ಯವಸ್ಥೆ ಮಾಡುತ್ತಾರೆ. ಆದರೆ ಕಾಮಗಾರಿ ಸ್ಥಗಿತಗೊಂಡಿರುವ ಕ್ಯೂ ಮಂಟಪದ ಸುತ್ತ ಕಬ್ಬಿಣದ ಶೀಟ್‌ಗಳಿಂದ ತಡೆಗೋಡೆ ನಿರ್ಮಿಸಿರುವುದರಿಂದ ಆ ಸ್ಥಳ ಈಗ ಬಳಕೆಗೆ ಅಲಭ್ಯ. ಇದರಿಂದ ಭಕ್ತರು ಸರಾಗವಾಗಿ ದೇವಸ್ಥಾನಕ್ಕೆ ಹೋಗಲು ಅನಾನುಕೂಲವಾಗಲಿದೆ. ಅಲ್ಲದೆ ಅಕ್ಟೋಬರ್ 8ರಂದು ವಿಶ್ವ ವಿಖ್ಯಾತ ಮೈಸೂರು ದಸರಾ ಉದ್ಘಾಟನೆ ಇದೆ. ಈಗ ನಿರ್ಮಾಣವಾಗುತ್ತಿದ್ದ ಕ್ಯೂ ಮಂಟಪದ ಸ್ಥಳದಲ್ಲೆ ದಸರಾ ಉದ್ಘಾಟನಾ ವೇದಿಕೆ ನಿರ್ಮಾಣ ಮಾಡಲಾಗುತ್ತಿತ್ತು. ಆದರೆ ಈ ವರ್ಷ ಆ ಸ್ಥಳ ಲಭ್ಯತೆ ಇಲ್ಲದಿರುವುದರಿಂದ ಉದ್ಘಾಟನಾ ವೇದಿಕೆಗೆ ಯಾವ ಸ್ಥಳವನ್ನು ಜಿಲ್ಲಾಡಳಿತ ಆಯ್ಕೆ ಮಾಡುತ್ತದೆ ಎಂಬ ಕುತೂಹಲವಿದೆ.



ಮುಡಾ ಆಯುಕ್ತರಾಗಿದ್ದ ದಿನೇಶ್‌ಕುಮಾರ್‌ಗೆ ಜಾಮೀನು



ಜಿ.ಟಿ.ದಿನೇಶ್‌ಕುಮಾರ್

ಬೆಂಗಳೂರು, ಜು.2(ಬಿಎಲ್‌ಯು)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನಡೆದಿರುವ ಕೋಟ್ಯಾಂತರ ರೂಪಾಯಿ ಹಗರಣದಲ್ಲಿ ಇಡಿ (ಜಾರಿ ನಿರ್ದೇಶನಾಲಯ) ಯಿಂದ ಬಂಧಿತರಾಗಿರುವ ಅಂದಿನ ಪ್ರಾಧಿಕಾರದ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಅವರಿಗೆ ಹೈಕೋರ್ಟ್ ಹಲವು ಷರತ್ತಿನೊಂದಿಗೆ ಜಾಮೀನು ನೀಡಿದೆ.

ದಿನೇಶ್‌ಕುಮಾರ್ ಅವರನ್ನು ಇಡಿಯವರು 2025, ಸೆಪ್ಟೆಂಬರ್ 17ರಂದು ಬೆಂಗಳೂರಿನಲ್ಲಿ ಬಂಧಿಸಿದ್ದರು. ದಿನೇಶ್ ಕುಮಾರ್ ವಿರುದ್ಧ ಲೋಕಾಯುಕ್ತ ಕೂಡ ತನಿಖೆ ನಡೆಸುತ್ತಿದೆ. ಲೋಕಾಯುಕ್ತರು ದಾಖಲಿಸಿದ್ದ ಪ್ರಕರಣದಲ್ಲಿ ದಿನೇಶ್ ಕುಮಾರ್ ಅವರಿಗೆ ಜಾಮೀನು ದೊರೆತಿತ್ತು. ಆದರೆ ಇಡಿ ದಾಖಲಿಸಿದ್ದ ಪ್ರಕರಣದಲ್ಲಿ ಜಾಮೀನು ದೊರೆತಿರಲಿಲ್ಲ.

ಇದರಿಂದ ದಿನೇಶ್‌ಕುಮಾರ್ ಕಳೆದ 9 ತಿಂಗಳಿಂದ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ಬಂಧಿಯಾಗಿದ್ದರು. ಅವರ ಜಾಮೀನು ಅರ್ಜಿಯನ್ನು ಸೆಷನ್ ಕೋರ್ಟ್ ತಿರಸ್ಕರಿಸಿದ್ದ ಹಿನ್ನೆಲೆಯಲ್ಲಿ ಹೈಕೋರ್ಟ್ ಮೊರೆ ಹೋಗಿದ್ದರು. ಈಗ ಉಚ್ಚ ನ್ಯಾಯಾಲಯ ದಿನೇಶ್ ಕುಮಾರ್ ಅವರಿಗೆ ಜಾಮೀನು ಮಂಜೂರು ಮಾಡಿದೆ.

ಜಾಮೀನು ನೀಡುವಂತೆ ದಿನೇಶ್ ಕುಮಾರ್ ಸಲ್ಲಿಸಿದ್ದ ಅರ್ಜಿ ಬಗ್ಗೆ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಹಲವು ಷರತ್ತು ವಿಧಿಸಿ, ಜಾಮೀನು ಮಂಜೂರು ಮಾಡಿದ್ದಾರೆ. ಐದು ಲಕ್ಷ ರೂಪಾಯಿ ವೈಯಕ್ತಿಕ ಬಾಂಡ್, ಇಬ್ಬರು ಶ್ಯೂರಿಟಿ ನೀಡಬೇಕು ಎಂದು ನ್ಯಾಯಾಲಯ ಷರತ್ತು ವಿಧಿಸಿದೆ.

ಅಲ್ಲದೆ ಆರೋಪಿ ಸಾಕ್ಷಿಗಳ ಮೇಲೆ ಯಾವುದೇ ರೀತಿಯ ಬೆದರಿಕೆ ಇರುವ ಪ್ರಭಾವ ಬೀರಬಾರದು. ಅಲ್ಲದೆ ಸಾಕ್ಷ್ಯ ನಾಶಪಡಿಸುವ ಪ್ರಯತ್ನ ಮಾಡಬಾರದು. ನ್ಯಾಯಾಲಯದಲ್ಲಿ ವಿಚಾರಣೆಗೆ ತಪ್ಪದೆ ಹಾಜರಾಗಬೇಕು ಎಂದು ಷರತ್ತು ವಿಧಿಸಲಾಗಿದೆ. ಸದ್ಯ ದಿನೇಶ್‌ಕುಮಾರ್ ಅವರನ್ನು ಸರ್ಕಾರ ಅಮಾನತು ಮಾಡಿದೆ.

ಮೈಸೂರಿನ ನೆಕ್ಸಸ್ ಮಾಲ್‌ನಲ್ಲಿ ಅಗ್ನಿ ಅವಘಡ ಅಣಕು ಪ್ರದರ್ಶನ

ನಾಲ್ಕು ಅಗ್ನಿಶಾಮಕ ವಾಹನ, ಎರಡು ಅಗ್ನಿ ದ್ವಿಚಕ್ರ ವಾಹನ ಬಳಕೆ







ಮೈಸೂರಿನ ನೆಕ್ಸಸ್ ಮಾಲ್‌ನಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ಪೂರ್ಣ ಪ್ರಮಾಣದ ಅಗ್ನಿ ಅವಘಡದ ಅಣಕು ಪ್ರದರ್ಶನ ನಡೆಸಲಾಯಿತು.

ಮೈಸೂರು, ಜು.2(ಜಿಎ)–ಪೊಲೀಸ್ ಮಹಾನಿರ್ದೇಶಕರ (ಅಗ್ನಿಶಾಮಕ ಮತ್ತು ತುರ್ತು ಸೇವೆಗಳು) ನಿರ್ದೇಶನದಂತೆ, ನಗರದ ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ) ಸಮೀಪದ ನೆಕ್ಸಸ್ ಮಾಲ್‌ನಲ್ಲಿ ಗುರುವಾರ ಬೆಳಿಗ್ಗೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ಪೂರ್ಣ ಪ್ರಮಾಣದ ಅಗ್ನಿ ಅವಘಡದ ಅಣಕು ಪ್ರದರ್ಶನ (ಮಾಕ್ ಫೈರ್ ಡ್ರಿಲ್) ಯಶಸ್ವಿಯಾಗಿ ನಡೆಸಲಾಯಿತು.

ತುರ್ತು ಪರಿಸ್ಥಿತಿಗಳಲ್ಲಿ ಇಲಾಖೆಯ ಕಾರ್ಯಕ್ಷಮತೆ ಹಾಗೂ ತುರ್ತು ಸ್ಪಂದನಾ ವ್ಯವಸ್ಥೆಯನ್ನು ಪರೀಕ್ಷಿಸುವುದು, ಸಾರ್ವಜನಿಕರಿಗೆ ಸುರಕ್ಷಿತ ಸ್ಥಳಾಂತರದ ಬಗ್ಗೆ ಅರಿವು ಮೂಡಿಸುವುದು, ಸ್ಪ್ರಿಂಕ್ಲರ್ ವ್ಯವಸ್ಥೆ, ತುರ್ತು ಬೆಳಕು, ಸಾರ್ವಜನಿಕ ಘೋಷಣಾ ವ್ಯವಸ್ಥೆ, ಹೊಗೆ ಪತ್ತೆ ಸಾಧನಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸುವುದು, ಸ್ಥಳಾಂತರ ಯೋಜನೆಯಲ್ಲಿರುವ ಲೋಪಗಳನ್ನು ಗುರುತಿಸುವುದು ಹಾಗೂ ಸಾರ್ವಜನಿಕರಲ್ಲಿ ಆತಂಕವನ್ನು ಕಡಿಮೆ ಮಾಡಿ ಆತ್ಮ ವಿಶ್ವಾಸ ಬೆಳೆಸುವುದು ಈ ಅಣಕು ಪ್ರದರ್ಶನದ ಮುಖ್ಯ ಉದ್ದೇಶವಾಗಿತ್ತು.

ಈ ವೇಳೆ ನಾಲ್ಕು ಅಗ್ನಿಶಾಮಕ ವಾಹನಗಳು ಹಾಗೂ ಎರಡು ಅಗ್ನಿ ದ್ವಿಚಕ್ರ ವಾಹನಗಳನ್ನು ಬಳಸಲಾಯಿತು. ಮಾಲ್‌ನ ಮೊದಲ ಮಹಡಿಯಲ್ಲಿ ಕೃತಕವಾಗಿ ಬೆಂಕಿ ಕಾಣಿಸಿಕೊಂಡಿರುವ ಸನ್ನಿವೇಶವನ್ನು ಸೃಷ್ಟಿಸಿ, ಅಗ್ನಿಶಾಮಕ ಸಿಬ್ಬಂದಿ ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸುವುದು, ಗಾಯಾಳುಗಳ ರಕ್ಷಣೆ, ಬೆಂಕಿ ನಂದಿಸುವ ಕಾರ್ಯಾಚರಣೆ ಸೇರಿದಂತೆ ವಿವಿಧ ತುರ್ತು ಕ್ರಮಗಳನ್ನು ಪ್ರದರ್ಶಿಸಿದರು.

ಗಾಯಗೊಂಡಿರುವಂತೆ ತೋರಿಸಲಾದ ವ್ಯಕ್ತಿಗಳನ್ನು ಸ್ಟ್ರೆಚರ್‌ಗಳ ಮೂಲಕ ಹೊರ ತೆಗೆದು ಆಂಬುಲೆನ್ಸ್‌ಗಳಲ್ಲಿ ಆಸ್ಪತ್ರೆಗೆ ಸಾಗಿಸುವ ಪ್ರಾತ್ಯಕ್ಷಿಕೆಯನ್ನು ಸಹ ನಡೆಸಲಾಯಿತು. ಎಲ್ಲರನ್ನು ಸುರಕ್ಷಿತವಾಗಿ ಸ್ಥಳಾಂತರಿಸಿದ ಬಳಿಕ, ಯಾರೂ ಒಳಗೆ ಉಳಿದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಿಬ್ಬಂದಿ ತಲೆ ಎಣಿಕೆ ನಡೆಸಿದರು. ಬೆಳಿಗ್ಗೆ 9.20ಕ್ಕೆ ಆರಂಭವಾದ ಈ ಅಣಕು ಪ್ರದರ್ಶನ ಸುಮಾರು 10.30ಕ್ಕೆ ಮುಕ್ತಾಯಗೊಂಡಿತು. ಈ ಅಭ್ಯಾಸದಲ್ಲಿ 40 ಮಂದಿ ಅಗ್ನಿಶಾಮಕ ಸಿಬ್ಬಂದಿ, 10 ಮಂದಿ ಅಗ್ನಿಶಾಮಕ ಅಧಿಕಾರಿಗಳು ಹಾಗೂ ನೆಕ್ಸಸ್ ಮಾಲ್‌ನ 250ಕ್ಕೂ ಹೆಚ್ಚು ಸಿಬ್ಬಂದಿ ಭಾಗವಹಿಸಿದ್ದರು.


ಈ ಸಂದರ್ಭದಲ್ಲಿ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ರಂಗನಾಥ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳಾದ ಕೆ.ಪಿ.ಗುರುರಾಜ್, ಕೆ.ಸಿ.ರಮೇಶ್, ಕೆ.ಜಿ.ರಾಜು ಇನ್ನಿತರರು ಉಪಸ್ಥಿತರಿದ್ದರು.

'ಮೈಸೂರು ಮಿತ್ರ'ನ ಸರಣಿ ಲೇಖನ ಗುಚ್ಛ 'ನಮ್ಮ ಮೈಸೂರಿನ ಅಸಾಮಾನ್ಯರು' ನಾಳೆಯಿಂದ ಆಕಾಶವಾಣಿಯಲ್ಲಿ



ಮೈಸೂರು, ಜು. 2–ಈ ಹಿಂದೆ ಒಂದು ವರ್ಷಕ್ಕೂ ಹೆಚ್ಚು ಕಾಲ 'ಮೈಸೂರು ಮಿತ್ರ'ದಲ್ಲಿ ಸರಣಿ ಲೇಖನಗಳಾಗಿ ಪ್ರಕಟವಾದ ಹಿರಿಯ ಪತ್ರಕರ್ತ ಗೌರಿ ಸತ್ಯ ಅವರ ಜನಪ್ರಿಯ 'ನಮ್ಮ ಮೈಸೂರಿನ ಅಸಾಮಾನ್ಯರು' ಈಗ ಮೈಸೂರು ಆಕಾಶವಾಣಿಯಲ್ಲೂ ಪ್ರಸಾರ ಗೊಳ್ಳಲಿದೆ. ನಾಳೆಯಿಂದ ಪ್ರತಿ ಶುಕ್ರವಾರ 'ಮೈಸೂರಿನ ಮರೆಯಲಾಗದ ಮಹನೀಯರು' ಉದ್ಘೋಷದೊಂದಿಗೆ ಈ ಪ್ರಸಾರಮಾಲಿಕೆ ಪ್ರಾರಂಭವಾಗಲಿದ್ದು ಅದು ಬೆಳಿಗ್ಗೆ 6.35ಕ್ಕೆ ಪ್ರಸಾರಗೊಂಡು ಮತ್ತೆ ಸಂಜೆ 6.10ಕ್ಕೆ ಮರುಪ್ರಸಾರವಾಗಲಿದೆ. ಸದ್ವಿದ್ಯಾ ಪಾಠಶಾಲೆಯ ಸ್ಥಾಪಕರೂ ಅಂದಿಗೆ ಪ್ರಸಿದ್ಧ ಸಂಸ್ಕೃತ ವಿದ್ವಾಂಸ–ಗುರುಗಳೂ ಆಗಿದ್ದ ಪೆರಿಯಸ್ವಾಮಿ ತಿರುಮಲಾಚಾರ್ಯ ಅವರನ್ನು ಕುರಿತಂತೆ ಮೊದಲಿಗೆ ನಾಳೆ (ಶುಕ್ರವಾರ) ಪ್ರಸಾರ ಮಾಡಲಾಗುವುದು.

ಚಿನ್ನದ ಪದಕ ವಿಜೇತ ಜಮ್ಮಡ ಪ್ರೀತ್ ಅಪ್ಪಯ್ಯಗೆ ಅಭಿನಂದನಾ ಸಮಾರಂಭ



ಜಮ್ಮಡ ಪ್ರೀತ್ ಅಪ್ಪಯ್ಯ

ಮೈಸೂರು,ಜು.2–ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಇತ್ತೀಚೆಗೆ ಬೆಂಗಳೂರು ವಿಶ್ವವಿದ್ಯಾಲಯದ ಶೂಟಿಂಗ್ ರೇಂಜ್‌ನಲ್ಲಿ ಭಾರತೀಯ ಕ್ರೀಡಾ ಪ್ರಾಧಿಕಾರದ ಸಹಯೋಗದಲ್ಲಿ ಕರ್ನಾಟಕ ರಾಜ್ಯ ರೈಫಲ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ 14ನೇ ಕರ್ನಾಟಕ ರಾಜ್ಯ ಶೂಟಿಂಗ್ಸ್ ಸ್ಪರ್ಧೆ ಮತ್ತು ಚಾಂಪಿಯನ್ ಶಿಪ್‌ನಲ್ಲಿ 2026ರಲ್ಲಿ ಮೈಸೂರು ಬನ್ನಿ ಮಂಟಪದ ನಿವಾಸಿ ಹಾಗೂ ಮೈಸೂರು ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿಯ ಜಮ್ಮಡ ಪ್ರೀತ್ ಅಪ್ಪಯ್ಯ ಎರಡು ಚಿನ್ನದ ಪದಕ ಜಯಗಳಿಸಿರುವ ಹಿನ್ನೆಲೆಯಲ್ಲಿ ಅವರಿಗೆ ಅಭಿನಂದನಾ ಸಮಾರಂಭವನ್ನು ಅಪೂರ್ವ ಹೋಟೆಲ್ ಸಭಾಂಗಣದಲ್ಲಿ ಜು.3ರಂದು ಸಂಜೆ 5:30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ತಿಳಿಸಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ಲಕ್ಷ್ಮಿಪುರಂ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ರವಿಶಂಕರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ, ವಾಣಿಜ್ಯ–ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಹಿರಿಯ ಸಮಾಜ ಸೇವಕ ರಘುರಾಂ ವಾಜಪಾಯಿ, ವಿಶೇಷ ಚೇತನ ಅಂತರಾಷ್ಟ್ರೀಯ ಕ್ರೀಡಾಪಟು ಅಲೋಕ್ ಜೈನ್ ಭಾಗವಹಿಸಲಿದ್ದಾರೆ.

ಆತ್ಮೀಯ ಸ್ವಾಗತ...



ನಂಜನಗೂಡು ತಾಲೂಕಿನ ದೇವನೂರು ಶ್ರೀ ಗುರು ಮಲ್ಲೇಶ್ವರ ಪುಣ್ಯ ಆರಾಧನೆ ಕಾರ್ಯಕ್ರಮಕ್ಕೆ ಆಗಮಿಸಿದ ಶಿಕಾರಿಪುರ ಕ್ಷೇತ್ರದ ಶಾಸಕರೂ ಆದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಕೀಲ ಎಸ್.ಅರುಣ್‌ಕುಮಾರ್ ಅವರನ್ನು ತಾಲೂಕಿನ ಮಾದಿಗ ಸಮುದಾಯದ ವತಿಯಿಂದ ಭಾರೀ ಗಾತ್ರದ ಹೂವಿನ ಹಾರ ಹಾಕಿ ಸ್ವಾಗತಿಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಯುವ ಮುಖಂಡ ಸ್ವಾಮಿ (ಆಯಲ್), ಯುವ ಮೋರ್ಚಾ ಜಿಲ್ಲಾ ಮಾಜಿ ಪ್ರಧಾನ ಕಾರ್ಯದರ್ಶಿ ಮಧುರಾಜ್, ಜೈ ಕುಮಾರ್, ಕುಮಾರ್, ಶ್ರೀನಿವಾಸ್, ಪ್ರದೀಪ್, ಬಾಲು, ಚಿನ್ನಪ್ಪ, ಸೋಮಯ್ಯ, ಲೋಕೇಶ್, ಸಿದ್ಧಾರ್ಥ್, ನಾಗಣ್ಣ, ಮಾದಪ್ಪ, ಸುದೀಪ್, ಚುಪಿ, ಪ್ರಾಣೇಶ, ಉಲ್ಲಾಸ್, ಕುಮಾರ್, ದಿನೇಶ್, ಪುನಿ, ಮನು ಹಾಗೂ ಸಮುದಾಯದ ಯುವ ಮುಖಂಡರು ಇದ್ದರು.

ಇಂದು ರೋಟರಿ ಮೈಸೂರು ಉತ್ತರ ಪದವಿ ಪ್ರದಾನ

ಮೈಸೂರು, ಜು.2– 'ರೋಟರಿ ಮೈಸೂರು ಉತ್ತರ'ದ ಪದವಿ ಪ್ರದಾನ ಸಮಾರಂಭವು ಶುಕ್ರವಾರ(ಜು.3) ಸಂಜೆ 6ಕ್ಕೆ ಕೆಆರ್‌ಎಸ್ ರಸ್ತೆಯ ಆರ್ಕೋರ್ ಹೋಟೆಲ್‌ನಲ್ಲಿ ನಡೆಯಲಿದೆ. ರೋಟರಿ ಮೈಸೂರು ಉತ್ತರದ 2026–27ನೇ ಸಾಲಿನ ಅಧ್ಯಕ್ಷ ರೊ.ಎ.ಪಿ.ವಿರೂಪಾಕ್ಷ, ಕಾರ್ಯದರ್ಶಿ ರೊ.ಬಿ.ಆರ್.ಶಿವಕುಮಾರ್ ಹಾಗೂ ತಂಡಕ್ಕೆ ಅಂತಾರಾಷ್ಟ್ರೀಯ ಜಿಲ್ಲೆ–3180ರ ಪಿಡಿಜಿ ರೊ.ಡಾ.ಭರತೇಶ್ ಆದಿರಾಜ್ ಅವರು ಪದವಿ ಪ್ರದಾನ ಮಾಡಲಿದ್ದಾರೆ.

ನಿಯೋಜಿತ ಜಿಲ್ಲಾ ಗವರ್ನರ್(2027–28) ರೊ.ಯಶಸ್ವಿ ಎಸ್.ಸೋಮಶೇಖರ್, ವಲಯ 8ರ ಸಹಾಯಕ ಗವರ್ನರ್ ರೊ.ಪಿ.ಕಿರಣ್‌ಕುಮಾರ್, ವಲಯ ಸೇನಾನಿ ರೊ.ಎಂ.ಜೆ.ಸ್ವಾಮಿ, ಕಳೆದ ಸಾಲಿನ ಅಧ್ಯಕ್ಷ ರೊ.ಎಂ.ಚಂದ್ರಶೇಖರ್ ಭಾಗವಹಿಸಲಿದ್ದಾರೆ.

ನಿಧನ

ಪುದಿಯೊಕ್ಕಡ ಬಿ.ಮಾದಪ್ಪ



ಮೈಸೂರು, ಜು. 2– ಮೈಸೂರಿನ ಸಿದ್ಧಾರ್ಥನಗರದ ಸುಗುಣ ಮಾರ್ಗ, ನಂ. 1054/16 ನಿವಾಸಿ ಹಾಗೂ ಶ್ರೀ ಕಾವೇರಿ ಕೊಡವ ಅಸೋಸಿಯೇಷನ್, ಮೈಸೂರು ಈಸ್ಟ್‌ನ ಮಾಜಿ ಅಧ್ಯಕ್ಷರೂ ಆದ ಪುದಿಯೊಕ್ಕಡ ಬಿ.ಮಾದಪ್ಪ (97) ಗುರುವಾರ ಬೆಳಗ್ಗೆ ನಿಧನರಾದರು. ಮೂಲತಃ ಕೊಡಗು ಜಿಲ್ಲೆ, ಮೂರ್ನಾಡಿನ ಕಿಗಾಲಿ ಗ್ರಾಮದವರಾದ ಇವರು ಪತ್ನಿ ಪೊನ್ನಕ್ಕಿ, ಪುತ್ರರಾದ ಪಿ.ಎಂ. ಪೊನ್ನು ಮುತ್ತಪ್ಪ, ಪಿ.ಎಂ.ಪ್ರವೀಣ್ ಚೆಂಗಪ್ಪ ಸೇರಿದಂತೆ ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಇಂದು ಸಂಜೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ನ್ಯಾಯಾಲಯಕ್ಕೆ ಮತ್ತೆ 'ಬಾಂಬ್' ಬೆದರಿಕೆ

●ನ್ಯಾಯಾಲಯದ ಆವರಣದಲ್ಲಿ ಆತಂಕ ನಿರ್ಮಾಣ ●ತೀವ್ರ ತಪಾಸಣೆ ಬಳಿಕ 'ಹುಸಿ ಬೆದರಿಕೆ' ಖಾತರಿ ●ಎಂದಿನಂತೆ ಮುಂದುವರೆದ ಕೋರ್ಟ್ ಕಾರ್ಯ ಕಲಾಪ



ಮೈಸೂರಿನ ನ್ಯಾಯಾಲಯದ ಆವರಣದಲ್ಲಿ ಬಾಂಬ್ ನಿಷ್ಕ್ರಿಯ ದಳ, ಶ್ವಾನದಳದ ಸಿಬ್ಬಂದಿ ಪರಿಶೀಲಿಸುತ್ತಿರುವುದು.

ಮೈಸೂರು,ಜು.2(ಎಂಟಿವೈ)– ನ್ಯಾಯಾಲಯದ ಕಟ್ಟಡದಲ್ಲಿ ಆರ್‌ಡಿಎಕ್ಸ್ ಹಾಗೂ ವಿಷಾನಿಲದ ಬಾಂಬ್ ಸ್ಫೋಟಿಸುವುದಾಗಿ ಕಿಡಿಗೇಡಿಗಳು ಕಳುಹಿಸಿದ್ದ ಇ–ಮೇಲ್ ಸಂದೇಶದಿಂದಾಗಿ ಮೈಸೂರಿನ ನ್ಯಾಯಾಲಯದ ಆವರಣದಲ್ಲಿ ಇಂದು ಕೆಲ ಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಬಾಂಬ್ ನಿಷ್ಕ್ರಿಯ ದಳ ವ್ಯಾಪಕ ತಪಾಸಣೆ ಬಳಿಕ ಪರಿಸ್ಥಿತಿ ತಿಳಿಗೊಂಡಿತು.

ಮೈಸೂರಿನ ನ್ಯಾಯಾಲಯದ ಕಚೇರಿಗೆ ಕಿಡಿಗೇಡಿಗಳು ಸ್ಯಾಟಲೈಟ್ ಸಂಪರ್ಕದ ಸ್ಯಾಟನಿಕ್ ಮೇಲ್ ಮೂಲಕ ಮುಂಜಾನೆ 1.59ರಲ್ಲಿ ಮೇಲ್ ಸಂದೇಶವೊಂದನ್ನು ಕಳುಹಿಸಿದ್ದು, ನ್ಯಾಯಾಲಯದಲ್ಲಿ 13 ವಿಷ ಮತ್ತು ಆರ್‌ಡಿಎಕ್ಸ್ ಬಾಂಬ್ ಇಟ್ಟಿದ್ದು, ಅವುಗಳನ್ನು ಮಧ್ಯಾಹ್ನ 1.15ರಿಂದ 3 ಗಂಟೆಯೊಳಗೆ ಸ್ಫೋಟಿಸುವುದಾಗಿ ಬೆದರಿಕೆ ಸಂದೇಶ ಕಳುಹಿಸಿದ್ದಾನೆ. ಇಂದು ಬೆಳಗ್ಗೆ ನ್ಯಾಯಾಲಯದ ಕಚೇರಿ ಸಿಬ್ಬಂದಿ ಇದನ್ನು ಗಮನಿಸಿ, ಜಿಲ್ಲಾ ಪ್ರದಾನ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಉಷಾರಾಣಿ ಅವರ ಗಮನಕ್ಕೆ ತಂದಿದ್ದಾರೆ. ನ್ಯಾಯಾಧೀಶರು ಕೂಡಲೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ ಬಾಂಬ್ ನಿಷ್ಕ್ರಿಯ ದಳ, ಶ್ವಾನದಳ ಬೆಳಗ್ಗೆ 7.30ರಿಂದ ತೀವ್ರ ಶೋಧ ನಡೆಸಿದರೂ ಅನುಮಾನಾಸ್ಪದ ಯಾವುದೇ ವಸ್ತುವೂ ಪತ್ತೆಯಾಗದ ಹಿನ್ನೆಲೆಯಲ್ಲಿ ಇದೊಂದು ಹುಸಿ ಬೆದರಿಕೆ ಸಂದೇಶ ಎಂಬುದು ದೃಢಪಟ್ಟಿದೆ.

ಇಂಚಿಂಚೂ ಹುಡುಕಾಟ: ಮೈಸೂರಿನ ಚಾಮರಾಜಪುರಂ ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿರುವ ನ್ಯಾಯಾಲಯದ ಕಟ್ಟಡ ಹಾಗೂ ಜಯನಗರದ ಮಳಲವಾಡಿಯಲ್ಲಿನ ಕೌಟುಂಬಿಕ ನ್ಯಾಯಾಲಯದ ಕಟ್ಟಡದಲ್ಲಿ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ನ್ಯಾಯಾಲಯದ ಆವರಣ, ನ್ಯಾಯಪೀಠದ ಆವರಣ, ಕಚೇರಿ ಕೊಠಡಿ, ಕಟ್ಟಡದ ಪ್ರಾಂಗಣ, ಪಾರ್ಕಿಂಗ್ ಸ್ಥಳ, ಗ್ರಂಥಾಲಯ, ಸಭಾಂಗಣ, ಕ್ಯಾಂಟೀನ್ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಶೋಧ ನಡೆಸಿದರು. ನ್ಯಾಯಾಲಯದ ಕಲಾಪ ಆರಂಭವಾಗುವ ಮೊದಲೇ ಎರಡೂ ಕಟ್ಟಡವನ್ನು ತೀವ್ರ ತಪಾಸಣೆ ನಡೆಸಿದ್ದರಿಂದ ಇಂದು ನ್ಯಾಯಾಲಯಕ್ಕೆ ನ್ಯಾಯಾಧೀಶರು, ವಕೀಲರು, ಕರ್ತವ್ಯನಿರತ ಪೊಲೀಸರು, ಕಕ್ಷಿದಾರರು, ವಿಚಾರಣೆಗೆ ಬಂದಿದ್ದವರನ್ನು ಎಂದಿನಂತೆ ನ್ಯಾಯಾಲಯ ಆವರಣ ಪ್ರವೇಶಿಸಲು ಅವಕಾಶ ಮಾಡಿಕೊಡಲಾಯಿತು. ಎಂದಿನಂತೆ ಬೆಳಗ್ಗಿನಿಂದ ಸಂಜೆವರೆಗೆ ಕಲಾಪ ಮುಂದುವರೆಯಿತು.

ಈ ಹಿಂದೆಯೂ ಕರೆ ಬಂದಿತ್ತು: ಮೈಸೂರು ನ್ಯಾಯಾಲಯಕ್ಕೆ ಜ.5ರಂದು ಹುಸಿ ಬಾಂಬ್ ಕರೆ ಬಂದಿತ್ತು. ಹಾಗಾಗಿ ನ್ಯಾಯಾಧೀಶರು, ವಕೀಲರು, ಕಕ್ಷಿದಾರರು ಸೇರಿದಂತೆ ನ್ಯಾಯಾಲಯದಲ್ಲಿದ್ದ ಎಲ್ಲರೂ ಕಟ್ಟಡದ ಹೊರಗೆ ಬಂದಿದ್ದರು. ತೀವ್ರ ಶೋಧದ ಬಳಿಕ ಅದು ಹುಸಿ ಕರೆ ಎಂಬುದು ಸ್ಪಷ್ಟವಾಗಿತ್ತು. 2016ರ ಆ.1ರಂದು ನ್ಯಾಯಾಲಯದ ಕಟ್ಟಡದ ಹಿಂಭಾಗದ ಶೌಚಾಲಯದಲ್ಲಿ ಕುಕ್ಕರ್ ಬಾಂಬ್ ಸ್ಫೋಟಗೊಂಡಿತ್ತು. ಈ ಹಿನ್ನೆಲೆಯಲ್ಲಿ ಮುಂಜಾನೆ ಬಂದಿದ್ದ ಬಾಂಬ್ ಬೆದರಿಕೆ ಇ–ಮೇಲ್ ಸಂದೇಶವನ್ನು ಗಂಭೀರವಾಗಿ ಪರಿಗಣಿಸಿ, ಶೋಧ ನಡೆಸಲಾಯಿತು.

ತನಿಖೆ ಆರಂಭ: ಇತ್ತೀಚಿನ ದಿನಗಳಲ್ಲಿ ರಾಜ್ಯಾದ್ಯಂತ ಬಾಂಬ್ ಬೆದರಿಕೆ ಕರೆ ಪ್ರಕರಣಗಳು ಹೆಚ್ಚಾಗುತ್ತಿದೆ. ಕಳೆದ ವಾರ ಮೈಸೂರಿನ ಎರಡು ಹೋಟೆಲ್‌ಗಳಿಗೆ ಇದೇ ರೀತಿ ಕರೆ ಬಂದಿತ್ತು. ಇಂದು ನ್ಯಾಯಾಲಯದ ಕಟ್ಟಡಕ್ಕೆ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಬೆದರಿಕೆ ಸಂದೇಶ ಬಂದಿರುವ ಮೇಲ್ ಸ್ಯಾಟಲೈಟ್ ಮೇಲ್‌ನಿಂದ ಬಂದಿದ್ದು, ಅದನ್ನು ಪತ್ತೆ ಮಾಡಲು ವಿವಿಧ ಆಯಾಮದಲ್ಲಿ ತನಿಖೆ ಆರಂಭಿಸಲಾಗಿದೆ.

ಎಲ್ಲರಿಗೂ ಸಮಸ್ಯೆಯಾಗುತ್ತದೆ

"ಮೈಸೂರು ಮಾತ್ರವಲ್ಲದೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ನ್ಯಾಯಾಲಯಗಳಿಗೂ ಬೆದರಿಕೆ ಸಂದೇಶ ಬಂದಿದೆ. ಪದೇ ಪದೆ ಈ ರೀತಿ ಬೆದರಿಕೆ ಸಂದೇಶ ಬರುತ್ತಿದೆ. ಕಿಡಿಗೇಡಿಗಳಿಂದ ಕಕ್ಷಿದಾರರಿಗೆ ತೊಂದರೆಯಾಗುತ್ತಿದೆ. ಕಲಾಪಕ್ಕೆ ನ್ಯಾಯಾಧೀಶರು, ವಕೀಲರು ಬಂದರೂ ಬಾಂಬ್ ಬೆದರಿಕೆಯಿಂದಾಗಿ ಕೆಲವೊಮ್ಮೆ ಕಲಾಪ ಸ್ಥಗಿತಗೊಳಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕಿಡಿಗೇಡಿಗಳನ್ನು ಪತ್ತೆ ಮಾಡಿ ಕಠಿಣ ಕ್ರಮ ಕೈಗೊಳ್ಳಬೇಕು. ಬೆದರಿಕೆ ಸಂದೇಶವನ್ನು ನಿರ್ಲಕ್ಷ್ಯಿಸುವುದಕ್ಕೂ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಗಂಭೀರವಾಗಿ ಪರಿಗಣಿಸಿ, ತಪಾಸಣೆ ನಡೆಸಲಾಗಿದೆ. ಆದರೂ ಕಲಾಪಗಳು ಎಂದಿನಂತೆ ನಡೆದಿದೆ.

-ಎಸ್.ಲೋಕೇಶ್,

ಅಧ್ಯಕ್ಷರು, ಮೈಸೂರು ಜಿಲ್ಲಾ ವಕೀಲರ ಸಂಘ

ತೋಳ ಬಂತು ತೋಳ ಎಂದು ನಿರ್ಲಕ್ಷಿಸಬೇಡಿ

ಕಿಡಿಗೇಡಿಗಳು ಕಳುಹಿಸಿರುವ ಬಾಂಬ್ ಸ್ಫೋಟ ಬೆದರಿಕೆ ಸಂದೇಶಕ್ಕೆ 'ತೋಳ ಬಂತು ತೋಳ' ಎಂಬ ಕಥೆಯಂತೆ ಬಾಂಬ್ ಬೆದರಿಕೆ ಸಂದೇಶ ನಿರ್ಲಕ್ಷ್ಯಿಸಬೇಡಿ'. ಸ್ಫೋಟದಿಂದ ಅಮಾಯಕರು ಬಲಿಯಾಗುತ್ತಾರೆ. ಮೈಸೂರನ್ನೇ ಗುರಿಯಾಗಿಸಿಕೊಂಡಿದ್ದಕ್ಕೆ ಕ್ಷಮೆ ಇರಲಿ' ಎಂದು ಉಲ್ಲೇಖಿಸಲಾಗಿದೆ.

ಡಿಪ್ಲೋಮಾ ಪ್ರವೇಶಾತಿಗೆ ಅರ್ಜಿ ಆಹ್ವಾನ


ಮೈಸೂರು,ಜು.2– ಎರಡು ವರ್ಷಗಳ ಐಟಿಐ, ಪಿಯುಸಿ (ವಿಜ್ಞಾನ, ತಾಂತ್ರಿಕ ವಿಷಯಗಳು)ಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಂದ 2026–27 ನೇ ಸಾಲಿನ ಲ್ಯಾಟರಲ್ ಎಂಟ್ರಿ ಸ್ಕೀಂ ಮೂಲಕ 2ನೇ ವರ್ಷದ ಡಿಪ್ಲೋಮಾ ಕೋರ್ಸ್ ಪ್ರವೇಶಾತಿಗೆ ತಾಂತ್ರಿಕ ಶಿಕ್ಷಣ ಇಲಾಖೆ ಅರ್ಜಿ ಆಹ್ವಾನಿಸಿದೆ.

ಇಂಜಿನಿಯರಿಂಗ್ ವಿಭಾಗಗಳಾದ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಶನ್ ಇಂಜಿನಿಯರಿಂಗ್, ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಮೆಕಾನಿಕಲ್ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಜು.11ರೊಳಗೆ, ಮೈಸೂರಿನ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್‌ಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ದೂ: 0821–2958582, ತಾಂತ್ರಿಕ ಶಿಕ್ಷಣ ಇಲಾಖೆ ವೆಬ್‌ಸೈಟ್: dtek.karnataka.gov.in ಅಥವಾ dtetech.karnataka.gov.in ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಇಂದು ಜವಳಿ ರಫ್ತುದಾರರಿಗಾಗಿ ಕಾರ್ಯಾಗಾರ

ಮೈಸೂರು ಜು.2– ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜವಳಿ ರಫ್ತುದಾರರಿಗೆ ಒಂದು ದಿನದ ಕಾರ್ಯಾಗಾರವನ್ನು ಜು.3ರಂದು ಬೆಳಿಗ್ಗೆ 10 ಗಂಟೆಗೆ ಮೈಸೂರು ಜಿಪಂ ಕಚೇರಿ ಪ್ರಾಂಗಣದಲ್ಲಿರುವ ಅಬ್ದುಲ್ ನಜೀರ್‌ಸಾಬ್ ಸಭಾಂಗಣ ದಲ್ಲಿ ಆಯೋಜಿಸಲಾಗುತ್ತಿದೆ. ಸದರಿ ಕಾರ್ಯಾಗಾರಕ್ಕೆ ರಫ್ತು ಉದ್ಯಮದಲ್ಲಿ ಆಸಕ್ತಿ ಹೊಂದಿರುವ ಉದ್ದಿಮೆದಾರರು ಕಾರ್ಯಾಗಾರದಲ್ಲಿ ಭಾಗವಹಿಸಿ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

03.07.2026 ಶುಕ್ರವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2026ರಿಂದ 05.07.2026ವರೆಗೆ, ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಡಯಾಬಿಟಿಕ್ ನ್ಯೂರೋಪತಿ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ.

■ **ಅನ್ನಪೂರ್ಣ ನೇತ್ರ ಆಸ್ಪತ್ರೆ :** ರಾಷ್ಟ್ರೀಯ ವೈದ್ಯರ ದಿನಾಚರಣೆಯ ಅಂಗವಾಗಿ ಸಾರ್ವಜನಿಕರಿಗಾಗಿ ಉಚಿತ ನೇತ್ರ ತಪಾಸಣಾ ಶಿಬಿರ, ಸ್ಥಳ: ಅನ್ನಪೂರ್ಣ ನೇತ್ರ ಆಸ್ಪತ್ರೆ, ಶಾರದಾದೇವಿನಗರ, ಬೆಳಗ್ಗೆ 10 ರಿಂದ.

■ **ಕರ್ನಾಟಕ ಸರ್ಕಾರ ಕೈಮಗ್ಗ ಮತ್ತು ಜವಳಿ ಇಲಾಖೆ :** ಜಿಲ್ಲಾ ಮಟ್ಟದ ಆಂತರಿಕ ಸಲಹಾ ಕಾರ್ಯಾಗಾರ, ಅಧ್ಯಕ್ಷತೆ : ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಮುಖ್ಯ ಅತಿಥಿಗಳು : ಜವಳಿ ಅಭಿವೃದ್ಧಿ ಆಯುಕ್ತ ಎ.ಬಿ. ಬಸವರಾಜು, ಅತಿಥಿಗಳು : ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್. ಉಕೇಶ್ ಕುಮಾರ್, ಕೇಂದ್ರ ರೇಷ್ಮೆ ಮಂಡಳಿ ನಿರ್ದೇಶಕ ಪಿ.ಎಸ್. ಗಿರೀಶ್, ಜಿಲ್ಲಾ ಕೈಗಾರಿಕಾ ಕೇಂದ್ರ ಜಂಟಿ ನಿರ್ದೇಶಕ ಟಿ. ದಿನೇಶ, ಮೈಸೂರು ಚೇಂಬರ್ ಆಫ್ ವಾಣಿಜ್ಯ ಮತ್ತು ಕೈಗಾರಿಕೆಗಳು ಅಧ್ಯಕ್ಷ ಕೆ.ಬಿ. ಲಿಂಗರಾಜು, ಕೈಮಗ್ಗ ಮತ್ತು ಜವಳಿ ಇಲಾಖೆ ಉಪನಿರ್ದೇಶಕ ಬಿ.ಎಸ್. ಸೋಮಶೇಖರ್, ಸ್ಥಳ: ಅಬ್ದುಲ್ ನಜೀರ್‌ಸಾಬ್ ಸಭಾಂಗಣ, ಜಿಪಂ ಕಟ್ಟಡ, ಚಾಮರಾಜಪುರಂ, ಬೆಳಗ್ಗೆ 10.30ಕ್ಕೆ.

■ **ಕೇವಲಿನ್ ಚಾರಿಟೆಬಲ್ ಟ್ರಸ್ಟ್ :** ಸಮಾವೇಶಾತ್ಮಕ ಕರೋಕೆ ಕಾರ್ಯಕ್ರಮ, ಸ್ಥಳ: ಕಿರುರಂಗ ಮಂದಿರ, ರಂಗಾಯಣ ಆವರಣ, ಸಂಜೆ 5 ರಿಂದ.

■ **ರೋಟರಿ ಮೈಸೂರು ಉತ್ತರ :** ಪದವಿ ಪ್ರದಾನ ಸಮಾರಂಭ, ಪದವಿ ಪ್ರದಾನ : ರೊ. ಡಾ. ಭರತೇಶ್ ಆದಿರಾಜ್, ಪದವಿ ಸ್ವೀಕಾರ : ರೋಟರಿ ಮೈಸೂರು ಉತ್ತರ ಅಧ್ಯಕ್ಷ ರೊ. ವಿರೂಪಾಕ್ಷ, ಮುಖ್ಯ ಅತಿಥಿಗಳು : ರೊ. ಯಶಸ್ವಿ ಸೋಮಶೇಖರ್, ಪಿ. ಕಿರಣ್‌ಕುಮಾರ್, ಎಂ.ಜೆ. ಸ್ವಾಮಿ, ಸ್ಥಳ: ಆರ್ಕೋರ್ ಹೋಟೆಲ್, ಮೇಟಗಳ್ಳಿ ರಿಂಗ್ ರಸ್ತೆ, ಸಂಜೆ 6ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ : 6.10 ಗೀತಾರಾಧನ, 6.30 ಚಿಂತನ–ಡಾ. ಡಿ. ಸತೀಶ್ಚಂದ್ರ, 6.35 ಮತ್ತು ಸಂಜೆ 6.10 ಮೈಸೂರಿನ ಮರೆಯಲಾಗದ ಮಹನೀಯರು, ಪ್ರಸ್ತುತಿ : ಗೌರಿಸತ್ಯ, 6.40 ಪದಸಂಸ್ಕೃತಿ –ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಠ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ 'ಕಾಡುಕಲಿಸುವ ಪಾಠ', ಪ್ರಾಯೋಜಕರು Prabha Super Specialty Eye Clinic, Bengaluru & Vittala Institute of Ophthalmology, Bengaluru. ಪ್ರಸ್ತುತಿ–ಟಿ. ಎಸ್. ಗೋಪಾಲ್, 8.30 ಕನ್ನಡ ಚಿತ್ರಗೀತೆಗಳು, 9.00 ಯೋಗವಾಣಿ–ನಿತ್ಯಯೋಗ ಕುರಿತ ಬಾನುಲಿ ಸರಣಿ ಒತ್ತಡ ನಿರ್ವಹಣೆ ಮತ್ತು ಯೋಗ ಕುರಿತು ಮೈಸೂರು ತಾಲ್ಲೂಕು ಮಾದಹಳ್ಳಿಯ ಅರ್ಕಧಾಮದ ಸಂಸ್ಥಾಪಕರು ಮತ್ತು ನಿರ್ದೇಶಕರಾದ ಶ್ರೀನಿವಾಸ್ ಅರ್ಕ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವ ಮೂರ್ತಿ, 9.30 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಕಾಮನ ಬಿಲ್ಲು' ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ: ಜಿ. ಎನ್. ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ –ಕೃಪಾಕರ ಸೇನಾನಿ ಅವರ "ಕೆನ್ನಾಯಿಯ ಜಾಡಿನಲಿ' ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ ಶಾಂತಕುಮಾರ್, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಮತ್ತು ಸಂಜೆ 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ–ಸಖೀ ಸಂವಾದ, ವಿಷಯ– ನಿಮ್ಮ ಜೀವನದ ಆದರ್ಶ ಮಹಿಳೆ ಯಾರು? ಯಾಕೆ?, ಪ್ರಸ್ತುತಿ–ಕೀರ್ತನಾ.ವಿ ಹಾಗೂ ರಂಜಿತಾ .ಜೆ. ಶಾಸ್ತ್ರಿ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ–ಹಲೋ ಕೃಷಿರಂಗ, ಪ್ರಾಯೋಜಿತ ನೇರ ಫೋನ್ –ಇನ್ ಕಾರ್ಯಕ್ರಮ, ಪ್ರಾಯೋಜಕರು–ಕೃಷಿ ಇಲಾಖೆ, ವಿಷಯ –ಬೆಳೆ ವಿಮೆ ಯೋಜನೆ, ಭಾಗವಹಿಸುತ್ತಾರೆ–ಎಚ್. ಬಿ. ಶೋಭಾ, ಜಂಟಿ ಕೃಷಿ ನಿರ್ದೇಶಕರು, 7.20 ಸಂಶೋಧನಾ ಸಾರ / ಕೃಷಿಲೋಕ, 7.45 ಕನ್ನಡದಲ್ಲಿ ಭಾಷಣ, 8.00 ವಿಜ್ಞಾನ ಭಾರತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ತತ್ವ ಸಂಚಾರ–ಜನಪದ ಗಾಯಕರ ತತ್ವಗಾಯನ, 10.30 ಸವಿನೆನಪು

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ, ಕರ್ನಾಟಕ ಚಾಪ್ಟರ್ ಆಫ್ ದಿ ಇಂಡಿಯನ್ ಅಸೋಸಿಯೇಷನ್ ಆಫ್ ಪ್ಯಾಥೋಲಜಿಸ್ಟ್ ಅಂಡ್ ಮೈಕ್ರೋಬಯೋಲಜಿಸ್ಟ್ :** ಕ್ಯಾಪ್‌ಕಾನ್–2026 ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಾಧ್ಯಾಪಕ ಡಾ. ಸುರೇಶ್ ಹನಗವಾಡಿ, ಅಧ್ಯಕ್ಷತೆ : ಸಮಕುಲಾಧಿಪತಿ ಡಾ. ಬಿ. ಸುರೇಶ್, ಗೌರವ ಅತಿಥಿಗಳು : ಪ್ರಿನ್ಸಿಪಾಲ್ ಡಾ. ಡಿ. ನಾರಾಯಣಪ್ಪ, ಅಧ್ಯಕ್ಷ ಡಾ. ಕೆ.ವಿ. ಸಂತೋಷ್, ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಕಾರ್ಯದರ್ಶಿ ಡಾ. ಆದಿತ್ಯಾ ಅಗ್ನಿಹೋತ್ರಿ, ವೈದ್ಯಕೀಯ ನಿರ್ದೇಶಕ ಡಾ.ಸಿ.ಪಿ. ಮಧು, ಖಜಾಂಚಿ ಡಾ. ತೇಜಸ್ವಿ ಕೃಷ್ಣಮೂರ್ತಿ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಸಂಜೆ 4.15ಕ್ಕೆ.





ರೋಟರಿ ಮೈಸೂರು ಸ್ಟಾರ್ಸ್ ಕ್ಲಬ್‌ನ 2026-27ನೇ ಸಾಲಿಗೆ ನೂತನ ಅಧ್ಯಕ್ಷರಾಗಿ ರೋ. ಪಿಹೆಚ್‌ಎಫ್ ಜೆ. ಸ್ಟೀಫನ್ ಸುಜಿತ್ ಹಾಗೂ ಕಾರ್ಯದರ್ಶಿಯಾಗಿ ರೋ. ಬಿ.ಎಸ್. ಕಾಶಿನಾಥ್ ಆಯ್ಕೆಯಾಗಿದ್ದಾರೆ.
ಪ್ರಕಟಣೆ : ರೋಟರಿ ಕ್ಲಬ್ ಆಫ್ ಮೈಸೂರ್ ಸ್ಟಾರ್ಸ್



ಎರಡನೇ ವರ್ಷದ ಪುಣ್ಯಸ್ಮರಣೆ



ಶ್ರೀ ವೆಂಕಟಾಚಲರವರು
ಮಾಜಿ ಮೈಸೂರು ಮಹಾನಗರ ಪಾಲಿಕೆ ಸದಸ್ಯರು
ನಿಧನ: 03.07.2024
ಪತ್ನಿ - ಲಕ್ಷ್ಮಮ್ಮ ಹಾಗೂ ಕುಟುಂಬವರ್ಗದವರು

14ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 14 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಹೃದಯದಲ್ಲಿದೆ ನೀವು ತೋರಿದ ಪ್ರೀತಿ ಅಜರಾಮರ ನಿಮ್ಮ ದಿವ್ಯ ಆತ್ಮಕ್ಕೆ ಚಿರ ಶಾಂತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಶ್ರೀಮತಿ ಮಹದೇವಮ್ಮ
ನಿಧನ: 3-7-2012

ದುಃಖತಪ್ತರು:
ಜಯಮ್ಮ, ಸಂತೋಷ್ ಕುಮಾರ್, ಸುಮಿತ್ರ, ಕುಮಾರ, ಹೇಮಪ್ರಭ, ಶಮಂತ್, ಕುಟುಂಬವರ್ಗದವರು
ಮಹದೇಶ್ವರ ಬಡಾವಣೆ (ಮೈಸೂರು), ಮೊ: 9945973735

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಯಜಮಾನ್ ಜವರೇಗೌಡ ರವರು

ಇವರು ದಿ: 24-06-2026 ನೇ ಬುಧವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿ: 04-07-2026ನೇ ಶನಿವಾರ ಬೆಳಿಗ್ಗೆ 10.30 ಗಂಟೆಗೆ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ನಮ್ಮ ಸ್ವಗೃಹ : ಮೈಸೂರು-ಬನ್ನೂರು ಮುಖ್ಯ ರಸ್ತೆ (ಹಲಗಯ್ಯನಹುಂಡಿ) ಕಿಂಗ್‌ಸಿಟಿಯಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನ ಎಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು: ಶ್ರೀಮತಿ ಪುಟ್ಟಮ್ಮ, ಧರ್ಮಪತ್ನಿ ಶ್ರೀಮತಿ ಜಯಮ್ಮ, ಗಂಡುಮಕ್ಕಳಾದ ಶ್ರೀ ಮಂಜು, ಶ್ರೀ ಈರೇಗೌಡ(ಅಂಜು), ಮೃತ ಹೆಣ್ಣುಮಗಳಾದ ಶ್ರೀಮತಿ ಶ್ವೇತ ಮತ್ತು ಶ್ರೀ ಸಿದ್ದೇಶ್, ಮೃತರ ಸಹೋದರ, ಸಹೋದರಿಯರು, ಲೇಟ್ ಕೆಂಚೇಗೌಡರ ಕುಟುಂಬವರ್ಗದವರು, ಸ್ನೇಹಿತರು ಹಾಗೂ ಕೊಕ್ಕರೆಹುಂಡಿ ಗ್ರಾಮಸ್ಥರು

ಭೋಜನ: ಮಧ್ಯಾಹ್ನ 12:30 ಗಂಟೆಗೆ
ಹರಿಕಥೆ : ರಾತ್ರಿ : 9.00 ಗಂಟೆಗೆ : ಬದನವಾಳು ಶ್ರೀ ಬಿ. ಚಂದ್ರಶೇಖರ್ ಶಾಸ್ತ್ರಿ ಮತ್ತು ತಂಡದವರಿಂದ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕೃಷ್ಣರಾಜನಗರ
ದೂರವಾಣಿ ಸಂಖ್ಯೆ: 08223-262228
ಇ-ಮೇಲ್ ವಿಳಾಸ: eepred.krn09@yahoo.com
ಕ್ರಮಾಂಕ:/ಕಾಇಂ/ಪಂರಾಇಂವಿ/ಕೃರಾನ/ಟೆ.ಪ್ರ/ಜೆ.ಇ/2026-27
ದಿನಾಂಕ:30.06.2026

ಟೆಂಡರ್ ಪ್ರಕಟಣೆ ("ಕೆ.ಪಿ.ಪಿ.ಪಿ" ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕೆ.ಆರ್.ನಗರ ಇವರು ಕೆಡಬ್ಲ್ಯೂ-1 **(Standard Tender Document)** ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕೆ.ಪಿ.ಪಿ.ಪಿ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2025-26 ನೇ ಸಾಲಿನ 4059-80-051-0-52-386 ಸಾಮಾನ್ಯ (ಆರಾಧನ)ಯೋಜನೆಯಡಿ ಮತ್ತು 2025-26ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (ಸಿ.ಎಂ.ಐ.ಡಿ.ಪಿ) ಯಡಿಯಲ್ಲಿನ ಕಾಮಗಾರಿಗಳಿಗೆ ಐಟಂವಾರು ಇ-ಟೆಂಡರ್ ಆಹ್ವಾನಿಸಲಾಗಿದೆ. 1) ಟೆಂಡರ್ ಫಾರಂ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ: 30.06.2026 ರಿಂದ 14.07.2026 ರವರೆಗೆ 2) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ:14.07.2026 ಸಮಯ 17:00:00 3) ಬಿಡ್ ತೆರೆಯುವ ದಿನಾಂಕ: 15.07.2026 ಸಮಯ 17:30:00.

1) General Works: 26574/call-2, 26575 /call-2
2) Category 2 A Works: 27182

ಕೆ.ಪಿ.ಪಿ.ಪಿ ವೆಬ್‌ಸೈಟ್ ಟೆಂಡರಿನ ವಿವರಗಳನ್ನು ಈ ಕಛೇರಿಯ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕೆ.ಆರ್.ನಗರ ಇವರ ಕಛೇರಿಯನ್ನು ಸಂಪರ್ಕಿಸುವುದು ಮತ್ತು ಕೆ.ಪಿ.ಪಿ.ಪಿ ವೆಬ್ ಸೈಟ್ (WWW.Kppp.karnataka.gov.in) ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿಸಂಖ್ಯೆ 08223-262228ಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರಿಂದ ಪಡೆಯಬಹುದು ಅಥವಾ helpdesk ದೂರವಾಣಿ ಸಂಖ್ಯೆ 080-25501216, 25501227 ಇವರನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
DIPR/DDMYS/400/KSMCA/264/2026-27



ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ಕಾಣಿಸಿರುವ ಅನುಸೂಚಿ ಸ್ವತ್ತು, ಸದರಿ ಸ್ವತ್ತಿನ ಮಾಲೀಕರಾದ ಮೈಸೂರು ಸಿಟಿ, ವಿಜಯನಗರ 4ನೇ ಹಂತ, 2ನೇ ಫೇಸ್, ಬಡಾವಣೆ, ನಿವೇಶನ ಸಂಖ್ಯೆ 6268 ರಲ್ಲಿ ವಾಸವಾಗಿರುವ ಲೇಟ್ ಕೆ.ಎನ್. ಚೆಟ್ಟಿ ರವರ ಮಗನಾದ ಸುಮಾರು 79 ವರ್ಷ ವಯಸ್ಸಿನ ಶ್ರೀ ಕೆ.ಎನ್.ಬಾಬು ಮತ್ತು ಇವರ ಪತ್ನಿಯಾದ ಸುಮಾರು 76 ವರ್ಷ ವಯಸ್ಸಿನ ಶ್ರೀಮತಿ. ಬಿ.ಪಿ ಜಯಲಕ್ಷ್ಮಿ ಇವರ ಸ್ವಾಧೀನಾನುಭವದಲ್ಲಿರುತ್ತಾರೆ. ಅನುಸೂಚಿ ಸ್ವತ್ತಿಗೆ ಸಂಬಂಧಪಟ್ಟಂತೆ, ಆದಾಗ್ಯೂ ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತಿನ ಮೂಲ ಮಾಲೀಕರಾದ ಅಂಕಯ್ಯ ಇವರ ಹೆಸರಿನಲ್ಲಿರುವ ಮೈಸೂರು ಸಿಟಿ, ವಿಜಯನಗರ 4ನೇ ಹಂತ, 2ನೇ ಫೇಸ್, ಬಡಾವಣೆ, ನಿವೇಶನ ಸಂಖ್ಯೆ 6268ರಲ್ಲಿ ಅಳತೆ 9x12 ಮೀಟರಳುಳ್ಳ ಸ್ವತ್ತಿನ ದಿನಾಂಕ: 13/08/1994 ರ ಮೂಲ ಮಂಜೂರಾತಿ ಪತ್ರ, ದಿನಾಂಕ: 12/06/1996 ರ ಸ್ವಾಧೀನ ಪತ್ರ, ದಿನಾಂಕ: 12/07/1996ರ ನಿವೇಶನ ಖಾತಾ ಮತ್ತು ಕಂದಾಯ ಪತ್ರ ಹಾಗೂ ಶ್ರೀ. ಎಸ್ ಗುರುಪ್ರಸಾದ್ ರವರ ಹೆಸರಿನಲ್ಲಿರುವ ದಿನಾಂಕ: 28/11/2011ರ ಖಾತಾ ವರ್ಗಾವಣೆ ಪತ್ರ ಮತ್ತು ಶ್ರೀಮತಿ ಟಿ.ಎಸ್. ಸುಧಾಮಣಿ ರವರ ಹೆಸರಿನಲ್ಲಿರುವ ದಿನಾಂಕ: 17/03/2014ರ ಖಾತಾ ವರ್ಗಾವಣೆ ಮತ್ತು ಶ್ರೀ ರುದ್ರೇಶ್ ಕುಮಾರ್ ಹಾಗೂ ಶ್ರೀ ವಿಶಾಖ್ ಎನ್ ರವರ ಹೆಸರಿನಲ್ಲಿರುವ ದಿನಾಂಕ: 23/08/2021ರ ಖಾತಾ ವರ್ಗಾವಣೆ ಪತ್ರ, ಅನುಸೂಚಿ ಸ್ವತ್ತಿಗೆ ಸಂಬಂಧಿಸಿದ ಮೇಲೆ ತಿಳಿಸಿರುವ ಅಸಲುಪತ್ರಗಳನ್ನು, ನನ್ನ ಕಕ್ಷಿದಾರರು ಮನೆಯನ್ನು ಬದಲಾಯಿಸುವ ಸಮಯದಲ್ಲಿ ಅವರಿಗೆ ಅರಿವಿಲ್ಲದೆ ಹಾಗೇ ಎಲ್ಲಿಯೋ ಕಳೆದು ಹೋಗಿರುತ್ತದೆ. ಮೇಲ್ಕಂಡ ಅಸಲುಪತ್ರಗಳು ಕಳೆದು ಹೋಗಿರುವ ಬಗ್ಗೆ ನನ್ನ ಕಕ್ಷಿದಾರರು ಮೈಸೂರ್ ಸಿಟಿ ಪೋಲಿಸ್ ಇಲಾಖೆಗೆ ದೂರನ್ನು ನೀಡಿರುವುದು ಸರಿಯಷ್ಟೇ ಸದರಿ ದೂರಿಗೆ ಸಂಬಂಧಿಸಿದಂತೆ ಲಾಸ್ಟ್ ರಿಪೋರ್ಟ್ ಸಂಖ್ಯೆ: 2245343/2026 ದಿನಾಂಕ: 09/06/2026 ದಾಖಲಿಸಿರುತ್ತಾರೆ. ಆದಾಗಿ ಮೇಲ್ಕಂಡ ತಿಳಿಸಿರುವ ಅಸಲು ಪತ್ರಗಳು ಯಾರಿಗಾದರೂ ಸಿಕ್ಕಿದ್ದಲ್ಲಿ, ಅಂಥಹವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕ ಪ್ರಕಟಣೆಯಾದ 7 (ಏಳು) ದಿನಗಳ ಒಳಗೆ ಕೆಳಕಂಡ ನನ್ನ ಕಛೇರಿಯಲ್ಲಿ ಸಂಪರ್ಕಿಸಿ ಸದರಿ ಅಸಲು ದಾಖಲಾತಿಗಳನ್ನು ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ, ದಿನಾಂಕ: 13/08/1994 ರ ಮೂಲ ಮಂಜೂರಾತಿ ಪತ್ರ, ದಿನಾಂಕ: 12/06/1996ರ ಸ್ವಾಧೀನ ಪತ್ರ, ದಿನಾಂಕ: 12/07/1996ರ ನಿವೇಶನ ಖಾತಾ ಮತ್ತು ಕಂದಾಯ ಪತ್ರ ಹಾಗೂ ಶ್ರೀ. ಎಸ್ ಗುರುಪ್ರಸಾದ್ ರವರ ಹೆಸರಿನಲ್ಲಿರುವ ದಿನಾಂಕ: 28/11/2011ರ ಖಾತಾ ವರ್ಗಾವಣೆ ಪತ್ರ ಮತ್ತು ಶ್ರೀಮತಿ ಟಿ.ಎಸ್. ಸುಧಾಮಣಿ ರವರ ಹೆಸರಿನಲ್ಲಿರುವ ದಿನಾಂಕ: 17/03/2014 ರ ಖಾತಾ ವರ್ಗಾವಣೆ ಮತ್ತು ಶ್ರೀ ರುದ್ರೇಶ್ ಕುಮಾರ್ ಹಾಗೂ ಶ್ರೀ ವಿಶಾಖ್ ಎನ್ ರವರ ಹೆಸರಿನಲ್ಲಿರುವ ದಿನಾಂಕ: 23/08/2021ರ ಖಾತಾ ವರ್ಗಾವಣೆ ಪತ್ರ, ಅನುಸೂಚಿ ಸ್ವತ್ತಿಗೆ ಸಂಬಂಧಿಸಿದ ಮೇಲೆ ತಿಳಿಸಿರುವ ಅಸಲು ದಾಖಲಾತಿ ಪತ್ರಗಳು ಇರುವುದಿಲ್ಲಾ ಎಂದು ಪರಿಗಣಿಸಿ ಮೇಲ್ಕಂಡ ದಾಖಲೆಗಳ ನಕಲನ್ನು ತಮ್ಮ ಮುಂದಿನ ವ್ಯವಹಾರಗಳಿಗೆ ಉಪಯೋಗಿಸಿಕೊಳ್ಳಲಿರುವರೆಂದು ಈ ಮೂಲಕ ತಿಳಿಯಪಡಿಸಲಿಚ್ಛಿಸುತ್ತಾರೆ.

ಅನುಸೂಚಿ

ಮೈಸೂರು ಸಿಟಿ, ದೇವರಾಜ ಮೊಹಲ್ಲ, ವಿಜಯನಗರ, 4ನೇ ಹಂತ, 2ನೇ ಫೇಸ್ ಬಡಾವಣೆ, ನಿವೇಶನ ಸಂಖ್ಯೆ: 6268. ಸ್ವತ್ತಿನ ಸಂಖ್ಯೆ 7503183844. ಇದರಲ್ಲಿ ಕಟ್ಟಿರುವ ಮನೆ ನಂ. 6268 ರ ಸ್ವತ್ತಿಗೆ ಚಕ್ಕುಬಂದಿ:- ಪೂರ್ವಕ್ಕೆ : 30 ಅಡಿ ರಸ್ತೆ, ಪಶ್ಚಿಮಕ್ಕೆ : 6253 ನೇ ನಂಬರ್ ಸ್ವತ್ತು, ಉತ್ತರಕ್ಕೆ : 6267 ನೇ ನಂಬರ್ ಸ್ವತ್ತು, ದಕ್ಷಿಣಕ್ಕೆ : 6269 ನೇ ನಂಬರ್ ಸ್ವತ್ತು, ಈ ಮಧ್ಯೆ ಇರುವ ಪೂರ್ವ ಪಶ್ಚಿಮ: 12.00 ಮೀಟರ್ ದಕ್ಷಿಣೋತ್ತರ: 9.00 ಮೀಟರ್. ಒಟ್ಟು 108.00 ಚದರ ಮೀಟರ್ ಉಳ್ಳ ಪೂರ್ತಾ ನಿವೇಶನ ಮತ್ತು ಈ ಇದರಲ್ಲಿ ಕಟ್ಟಿರುವ 66.50 ಚದರ ಮೀಟರ್ ನೆಲ ಮಹಡಿ, 66.50 ಚದರ ಮೀಟರ್ ಮೊದಲ ಮಹಡಿ, ಒಟ್ಟು ವಿಸ್ತೀರ್ಣ 133.00 ಚದರ ಮೀಟರ್ ಆರ್.ಸಿ.ಸಿ ವೆಟ್ರಿಫೈಡ್ ಟೈಲ್ ಫ್ಲೋರಿಂಗ್‌ನಿಂದ ಕೂಡಿದ ವಾಸದ ಮನೆ, ನೀರು, ವಿದ್ಯುತ್ ಹಾಗೂ ಸ್ಯಾನಿಟರಿ ಸೌಲಭ್ಯವುಳ್ಳ ಸ್ವತ್ತು ಈ ಸ್ಥಿರ ಸ್ವತ್ತಿನ ಶುದ್ಧ ಕ್ರಯಪತ್ರಕ್ಕೆ ಒಳಪಟ್ಟ ಸ್ವತ್ತಾಗಿರುತ್ತದೆ.

ಸಹಿ/- ಕಾರ್ಯಪ್ಪ ಓ.ಜೆ, ವಕೀಲರು, ಅಸ್ಸ ಲಾ ಪಿ-15, 1ನೇ ಮಹಡಿ, ನಾಗರಿಕ ವೇದಿಕೆ ಸಂಕೀರ್ಣ, ವಿಶ್ವಮಾನವ ಜೋಡಿ ರಸ್ತೆ, ಕುವೆಂಪುನಗರ, ಮೈಸೂರು-570023, ದೂರವಾಣಿ : 8951142769

ನಗರಸಭಾ ಕಾರ್ಯಾಲಯ, ಚಾಮರಾಜನಗರ

ದೂ.ಸಂ.: 08226-222035 ಫ್ಯಾಕ್ಸ್ ನಂ. : 08226-222566
ಇಮೇಲ್ ವಿಳಾಸ: ka.chamarajanagara.cmc@gmail.com
ವೆಬ್‌ಸೈಟ್ ವಿಳಾಸ: www.chamarajanagaracity.mrc.gov.in

ನಂ. ನ.ಸ.ಚಾ/ತಾಂ.ಶಾ/ಸ.ಕಾ.ಅ/ಪಿ.ಆರ್08/2026-27 ದಿನಾಂಕ: 30-06-2026

:-ಟೆಂಡರ್ ಪ್ರಕಟಣೆ:-
(ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)

15ನೇ ಹಣಕಾಸು ಯೋಜನೆಯ ಸಾಮಾನ್ಯ ಮೂಲ ಅನುದಾನ ಮತ್ತು ನಗರಸಭಾ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000 ಪ್ರಕಾರ ಆಕ್ಟ್ 2000 ನಿಯಮದಂತೆ **KW1** ರ ಪ್ರಕಾರ ದ್ವಿ ಲೋಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಪೋರ್ಟಲ್:- **http://kppp.karnataka.gov.in** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಕ್ರ.ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಟೆಂಡರ್‌ಗೆ ಇಟ್ಟ ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ / ರೂ (ರೂ.ಗಳಲ್ಲಿ)
1	DMA/2026-27/RD/WORK_INDENT57243 / CALL-3	5.40	415186.70	10380.00
2	DMA/2025-26/RD/WORK_INDENT55669 / CALL-3	1.80	146032.16	3650.00
3	DMA/2025-26/OW/WORK_INDENT54181 / CALL-3	5.40	453623.45	11340.00
4	DMA/2025-26/WS/WORK_INDENT56897 / CALL-3	1.91	161656.18	4041.00
5	DMA/2026-27/WS/WORK_INDENT60439	4.75	356818.50	8920.00
6	DMA/2026-27/WS/WORK_INDENT60440	4.22	402357.20	10059.00
7	DMA/2026-27/WS/WORK_INDENT60443	4.83	409272.78	20464.00

1. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:15.07.2026, ಸಂಜೆ 5.30 ಗಂಟೆಯವರೆಗೆ, ತಾಂತ್ರಿಕ ಬಿಡ್‌ನ್ನು ದಿನಾಂಕ: 17.07.2026 ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.
2. ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು http://kppp.karnataka.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು.

ಸಹಿ/-
(ಶ್ರೀ ಪರಶುರಾಮ ಎಂ ಚಲವಾದಿ)
ಪೌರಾಯುಕ್ತರು
ನಗರಸಭೆ, ಚಾಮರಾಜನಗರ

ಸಹಿ/-(ಶ್ರೀಮತಿ ಶ್ರೀ ರೂಪ)
ಮಾನ್ಯ ಆಡಳಿತಾಧಿಕಾರಿಗಳು, ನಗರಸಭೆ,
ಚಾಮರಾಜನಗರ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು,
ಚಾಮರಾಜನಗರ ಜಿಲ್ಲೆ.

ಸಂ:ವಾಸಾಸಂಇ:ಚಾನಗರ:210:2026-27



ಹಸಿರು ನಮ್ಮ ಉಸಿರು

Ph: 08276-282037
ಸೋಮವಾರಪೇಟೆ ಪಟ್ಟಣ ಪಂಚಾಯತಿ ಕಾರ್ಯಾಲಯ
ಸೋಮವಾರಪೇಟೆ-571236, ಕೊಡಗು ಜಿಲ್ಲೆ.
mail Id:itstaff_ulb_somwarpet@yahoo.com
Website:www.somwarpettown.gov.in/

ಸಂ.ಪ.ಪಂ ಸೋ/ಕಿ.ಆ.ನಿ/ಪ್ಲಾ.ತ್ಯಾ.ವಿ/01/2026-27 ದಿನಾಂಕ: 2-7-2026

ಕೋಟೇಷನ್ ಪ್ರಕಟಣೆ

ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ ಸೋಮವಾರಪೇಟೆರವರು ಸೋಮವಾರಪೇಟೆ ಪಟ್ಟಣ ಪಂಚಾಯತಿ ವ್ಯಾಪ್ತಿಯ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಸಂಗ್ರಹವಾಗುವ ಈ ಕೆಳಕಂಡ ವರ್ಗಗಳ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ವಿಲೇ ಮಾಡಲು ಅಧಿಕೃತ ಪ್ಲಾಸ್ಟಿಕ್ ತ್ಯಾಜ್ಯ ಸಂಸ್ಕಾರಕರಿಂದ/ ಇ.ಪಿ.ಆರ್. ನೋಂದಾಯಿತ ರಿಂದ ಕೋಟೇಷನ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅಧಿಕೃತ ಪ್ಲಾಸ್ಟಿಕ್ ತ್ಯಾಜ್ಯ ಸಂಸ್ಕಾರಕರು/ ಇ.ಪಿ.ಆರ್. ನೋಂದಾಯಿತರು ತಮ್ಮ ದರವನ್ನು ನಮೂದಿಸಿ ಮುಚ್ಚಿದ ಲಕೋಟೆಯಲ್ಲಿ ತಮ್ಮ ಪ್ರಸ್ತಾವನೆಯನ್ನು ದಿನಾಂಕ: 09-07-2026ರ ಸಂಜೆ 4.00 ಗಂಟೆಯ ಒಳಗಾಗಿ ಮುಖ್ಯಾಧಿಕಾರಿ ಪಟ್ಟಣ ಪಂಚಾಯಿತಿ ಸೋಮವಾರಪೇಟೆ ಇವರ ಹೆಸರಿಗೆ ಖುದ್ದಾಗಿ ಅಥವಾ ಅಂಚೆಯ ಮುಖಾಂತರ ಸಲ್ಲಿಸಬಹುದಾಗಿದೆ. ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ನಿರ್ದಿಷ್ಟ ಮಾಹಿತಿ ಹಾಗೂ ದಾಖಲೆಗಳ ವಿವರಗಳನ್ನು ಕಛೇರಿಯ ಆರೋಗ್ಯ ಶಾಖೆಗೆ ಸಂಪರ್ಕಿಸಿ ಸಹಾಯ ಪಡೆಯಬಹುದಾಗಿದೆ.

ಕೋಟೇಷನ್‌ಗೆ ಸಲ್ಲಿಸಬೇಕಾದ ಪ್ಲಾಸ್ಟಿಕ್ ತ್ಯಾಜ್ಯದ ವಿಧಗಳು (ಪ್ರತಿ ಕೆಜಿಗೆ ದರ)

ಕ್ರ.ಸಂ.	ಪ್ಲಾಸ್ಟಿಕ್ ತ್ಯಾಜ್ಯದ ವಿಧಗಳು	ದರ ರೂ./ಕೆ.ಜಿ.
ವರ್ಗ - 1	Regid plastic	
ವರ್ಗ - 2	Flexible plastic package	
ವರ್ಗ - 3	Multilayer plastic	
ನಿರಾಕರಿಸಿದ ಇಂಧನ ಮೂಲ (RDF)	Refused Derived fuel (All types of non-recyclable dry material including plastics)	

ಸಹಿ/- ಮುಖ್ಯಾಧಿಕಾರಿ,
ಪಟ್ಟಣ ಪಂಚಾಯತಿ, ಸೋಮವಾರಪೇಟೆ

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ (ಗುಂಡನನ್ನು ಪರೀಕ್ಷಿಸುತ್ತಾ) : ನಿಮಗೆ ಮದುವೆ ಆಗಿದೆಯಾ?
ಗುಂಡ : ಹೂಂ, ಹುಡುಗಿ ಜೊತೆ ಆಗಿದೆ.
ಡಾಕ್ಟರ್ : ಎಲ್ಲರಿಗೂ ಹುಡುಗಿ ಜೊತೆನೇ ಮದುವೆಯಾಗೋದು.
ಗುಂಡ : ಇಲ್ಲ, ನನ್ನ ತಂಗಿಗೆ ಹುಡುಗನ ಜೊತೆ ಆಗಿದೆ.

ಮೈಸೂರು ಮಿತ್ರ
ಶುಕ್ರವಾರ, ಜುಲೈ 3, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನಮಗೇನು ಬೇಕೋ ಅದನ್ನು ಪಡೆಯುವ ಮೊದಲ ಹೆಜ್ಜೆ ಎಂದರೆ ನಮಗೆ ಬೇಡದಿರುವುದನ್ನು ಬಿಟ್ಟು ಬಿಡುವುದು. ಬೇಕು–ಬೇಡಗಳ ವಿವೇಚನೆ ಇರಲಿ.

{ ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ದೈವ ಕಾಡುವುದು ವಿಧಿಗಾಗಿ, ನೀರು ಸಮುದ್ರ ಸೇರುವುದು ನದಿಗಾಗಿ.

ನಿಮ್ಮ ಪತ್ರಗಳು

ನೇರ ದರ್ಶನ ಭಾಗ್ಯ ಕಲ್ಪಿಸಿ

ಮಾನ್ಯರೆ,

ಆಷಾಢ ಶುಕ್ರವಾರಗಳಂದು (ಮುಂದಿನ ತಿಂಗಳು ಜುಲೈ 17, 24, 31, ಆಗಸ್ಟ್ 7 ರಂದು ಆಷಾಢ ಶುಕ್ರವಾರಗಳಿವೆ) ಸಾವಿರಾರು ಭಕ್ತರು ಚಾಮುಂಡಿ ಬೆಟ್ಟಕ್ಕೆ ಮೆಟ್ಟಿಲುಗಳ ಮೂಲಕ ಆಯಾಸದಿಂದ ಹತ್ತಿ ನಂತರ ಸರದಿ ಸಾಲಿನಲ್ಲಿ ಕ್ಯೂ ನಿಂತು ಶ್ರೀ ಚಾಮುಂಡೇಶ್ವರಿ ತಾಯಿಯ ದರ್ಶನ ಮಾಡುತ್ತಾರೆ. 1101 ಮೆಟ್ಟಿಲುಗಳನ್ನು ಹತ್ತಿ ಮೊದಲೇ ಸುಸ್ತಾಗಿರುತ್ತಾರೆ. ಅದರಲ್ಲಿ ಬೇರೆ ಮತ್ತೆ ಮಳೆ, ಬಿಸಿಲು ಎನ್ನದೇ ಕಿಲೋಮೀಟರ್ ಗಟ್ಟಲೆ ಕ್ಯೂ ನಿಂತುಕೊಂಡು ಶ್ರೀ ಚಾಮುಂಡೇಶ್ವರಿ ತಾಯಿ ದರ್ಶನ ಮಾಡುತ್ತಾರೆ. ಎಷ್ಟೋ ಭಕ್ತಾದಿಗಳು ಕಷ್ಟಪಟ್ಟು ಮೆಟ್ಟಿಲುಗಳನ್ನು ಹತ್ತಿ ಕಿಲೋ ಮೀಟರ್ ಗಟ್ಟಲೆ ಜನ ಕ್ಯೂ ನಿಂತಿರುವುದನ್ನು ನೋಡಿ ನನ್ನ ಕೈಲಿ ಇಷ್ಟೊಂದು ಕ್ಯೂ ಬಳಸಿಕೊಂಡು ಒಳಕ್ಕೆ ಹೋಗೋಕೆ ಆಗಲ್ಲ ಕಣಪ್ಪ ಎಂದು ಹೊರಗಡೆ ನಿಂತುಕೊಂಡು ಕೈಮುಗಿದು ಹೊರಟು ಬಿಡುತ್ತಾರೆ. ಅಂತಹ ಭಕ್ತಾದಿಗಳಿಗೆ ನೇರ ದರ್ಶನ ವ್ಯವಸ್ಥೆ ಇದ್ದರೆ ಜಗನ್ಮಾತೆಯ ದರ್ಶನ ಮಾಡಿ ಪುನೀತರಾಗುತ್ತಾರೆ.

ತಿರುಪತಿಯಲ್ಲಿರುವಂತೆ ಚಾಮುಂಡಿ ಬೆಟ್ಟದಲ್ಲಿಯೂ ಕೂಡ ಮೆಟ್ಟಿಲುಗಳ ಮೂಲಕ ಹತ್ತಿ ಬರುವ ಭಕ್ತಾದಿಗಳಿಗೆ ನೇರ ದರ್ಶನ ವ್ಯವಸ್ಥೆ ಮಾಡಿದರೆ ಜಗನ್ಮಾತೆಯ ದರ್ಶನ ಮಾಡಿ ಪುನೀತರಾಗುತ್ತಾರೆ. ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು, ಶಾಸಕರು, ಜಿಲ್ಲಾಧಿಕಾರಿಗಳು, ಪೊಲೀಸ್ ಆಯುಕ್ತರ ಜೊತೆ ಚರ್ಚಿಸಿ ಈ ಬಾರಿಯ ಆಷಾಢ ಶುಕ್ರವಾರದಿಂದಲೇ ಜಾರಿಗೆ ಬರುವಂತೆ ಭಕ್ತಾದಿಗಳಿಗೆ ಶ್ರೀ ಚಾಮುಂಡೇಶ್ವರಿ ತಾಯಿಯ "ನೇರ ದರ್ಶನ ಭಾಗ್ಯ" ವನ್ನು ಕರುಣಿಸಬೇಕೆಂದು ಲಕ್ಷಾಂತರ ಭಕ್ತಾದಿಗಳ ಪರವಾಗಿ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರಿಗೆ ವಿಶೇಷ ಮನವಿ. ರಾಜ್ಯದ ಜನತೆಗೆ ಹಲವು ಭಾಗ್ಯಗಳನ್ನು ಕರುಣಿಸಿರುವ ಕಾಂಗ್ರೆಸ್ ಸರ್ಕಾರ ಮೆಟ್ಟಿಲುಗಳ ಮೂಲಕ ಹತ್ತಿಬರುವ ಭಕ್ತಾದಿಗಳಿಗೆ ನೇರ ದರ್ಶನ ಭಾಗ್ಯವನ್ನು ಕರುಣಿಸಲಿ.

–ಅಹಲ್ಯ .ಸಿ.ನಾ. ಚಂದ್ರ, ಜನತಾನಗರ, ಮೈಸೂರು.

ಇದೊಂದು ಸಾರ್ಥಕ ಕ್ಷಣ...



ಮಾನ್ಯರೆ,

ಬಹು ದಿನಗಳ ಕಾಲ ಕಂಡ ಕನಸೊಂದು ಕೊನೆಗೂ ನನಸಾದಾಗ ಸಿಗುವ ಆನಂದ ಮತ್ತು ತೃಪ್ತಿ ಪದಗಳಿಗೆ ನಿಲುಕದ್ದು. ಅಂತಹ ಒಂದು ಸುಂದರ ಕ್ಷಣ, ರಘು ಕೌಟಿಲ್ಯರವರು ಪ್ರಮಾಣ ವಚನ ಸ್ವೀಕಾರಿಸುತ್ತಿದ್ದಾಗ ನನಗಾಯಿತು. ಹೃದಯ ತುಂಬಿ, ಆನಂದ ಭಾಷ್ಪ ಅರಿವಿಲ್ಲದೆ ಹರಿಯಿತು. ಈ ದಿನಕ್ಕಾಗಿ ಎಷ್ಟೋ ವರ್ಷಗಳಿಂದ ಕಾದು ಕುಳಿತವನು ನಾನು.

ಹತ್ತಾರು ವರ್ಷಗಳ ಅವರ ಒಡನಾಟದಲ್ಲಿ ಅವರು ಪಟ್ಟ ನೋವು, ಅವಮಾನ, ಸೋಲು, ಹತಾಶೆಗಳನ್ನು ಕಣ್ಣಾರೆ ಕಂಡಿದ್ದೇನೆ. ಅವರ ಪರಿಶ್ರಮ ಮತ್ತು ತಾಳ್ಮೆಗೆ ಸಿಕ್ಕ ಪ್ರತಿಫಲವಿದು.

ಪ್ರತಿಯೊಬ್ಬರ ಜೀವನದಲ್ಲೂ ಒಂದು ಗುರಿ, ಒಂದು ಆಸೆ ಅಥವಾ ಒಂದು ಕನಸಿರುತ್ತದೆ. ಆ ಕನಸು ಕೇವಲ ರಾತ್ರಿ ಮಲಗಿ ಬೆಳಗಾಗುವುದರೊಳಗೆ ಬರುವಂಥದ್ದಲ್ಲ; ಹಗಲಿರುಳು ನಮ್ಮನ್ನು ಕಾಡುವ, ನಮ್ಮ ಉಸಿರಾಗಿರುವ ಒಂದು ಅದಮ್ಯ ಆಸೆ. ಅಂತಹ ಬಹು ದಿನಗಳ ಕನಸು ನನಸಾದಾಗ ಉಂಟಾಗುವ ರೋಮಾಂಚನ, ಕಣ್ಣಂಚಿನಲ್ಲಿ ಮೂಡುವ ಆನಂದಬಾಷ್ಪ ಮತ್ತು ಎದೆಯಾಳದ ನಿರಾಳತೆ ಜೀವನದ ಅತ್ಯಂತ ಶ್ರೇಷ್ಠ ಕ್ಷಣಗಳಾಗಿರುತ್ತವೆ.

ಮಹೋನ್ನತ ಸೇವಾಕಾಂಕ್ಷೆಯ ಮಹದಾಸೆ ಹೊತ್ತು ಅಧಿಕಾರದ ಗದ್ದುಗೆ ಪಡೆಯುವಲ್ಲಿ ಅವರು ಗೆದ್ದರು. ಆ ಗೆಲುವಿಗಾಗಿ ಅವರು ಜೀವನದ ಅತ್ಯಮೂಲ್ಯವಾದ ಅನೇಕ ವಸ್ತುಗಳನ್ನು ಕಳೆದುಕೊಂಡರು. ಎದೆಯಲ್ಲಿ ಎಷ್ಟೇ ನೋವುಗಳಿದ್ದರು, ನೋವಿನ ಛಾಯೆ ಮರೆಮಾಡಿ ನಗುತಲಿ ದೇವರನ್ನೇ ಮೆಚ್ಚಿಸಿದವರು.

ಅವರ ಕಠಿಣ ಪರಿಶ್ರಮ, ಅಪಾರ ತಾಳ್ಮೆ, ತ್ಯಾಗ ಮತ್ತು ಅದೆಷ್ಟೋ ಎಣಿಕೆಯೇ ಇಲ್ಲದಷ್ಟು ಸೋಲುಗಳು. ಅವರ ಕನಸಿನ ಕಡೆಗೆ ಸಾಗುವ ದಾರಿಯಲ್ಲಿ ಎದುರಿಸಿದ ನೂರಾರು ಅಡೆತಡೆಗಳು. ನಮ್ಮವರೇ ನಮಗೆ ತೋರುವ ತಾತ್ಸಾರ ಭಾವ, ಪ್ರತಿಭೆ ಇರುವವನು ಬೆಳೆದು ನಿಲ್ಲುವನೆಂಬ ಮತ್ಸರ ಭಾವ, ಇದು ನಿನ್ನಿಂದ ಸಾಧ್ಯವಿಲ್ಲ ಎಂದು ನಿರಾಸೆ ಮೂಡಿಸುವವರ ಮಧ್ಯೆ, ಅವರು ತನ್ನ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳದೆ ಮುನ್ನಡೆಯುವುದೇ ನಿಜವಾದ ಸವಾಲು ಎಂದು ತೋರಿಸಿದವರು.

ಸೋತಾಗಲೆಲ್ಲ ಮತ್ತೆ ಎದ್ದು ನಿಲ್ಲುವ ಛಲವೇ ಇಂದು ಅವರನ್ನು ಶಾಸಕ ಎಂಬ ಅಧಿಕಾರಯುತ ಸ್ಥಾನಕ್ಕೆ ತಂದು ನಿಲ್ಲಿಸಿದೆ.

ಯಾವಾಗ ನಾವು ಅಂದುಕೊಂಡ ಗುರಿಯನ್ನು ತಲುಪುತ್ತೇವೆಯೋ ಆ ಕ್ಷಣ ಇಡೀ ಪ್ರಪಂಚವೇ ನಿಂತುಹೋದಂತೆ ಭಾಸವಾಗುತ್ತದೆ. ವರ್ಷಗಳ ಕಾಲ ಪಟ್ಟ ಶ್ರಮ ಕಣ್ಣಮುಂದೆ ಬಂದು ಹೋಗುತ್ತದೆ.

ಅವರಿಗೆ ಸಿಕ್ಕ ಅಧಿಕಾರ, ಲಾಭ–ನಷ್ಟಗಳ ಲೆಕ್ಕಾಚಾರ ಏನೇ ಇರಲಿ, ಒಂದು ಕ್ಷಣ ನಾನೇ ಶಾಸಕನಾದಷ್ಟು ಆನಂದ ಹೊಂದಿದ್ದಂತು ಸುಳ್ಳಲ್ಲ.

ಶುಭವಾಗಲಿ ಸರ್

– ಚಂದ್ರು, ವಸಂತಪುರ.

ವಿದ್ಯುತ್ ಗ್ರಿಡ್ ವಿಸ್ತರಣೆಗೆ ತುರ್ತು ಕ್ರಮ

ಮಾನ್ಯರೆ,

ಇತ್ತೀಚಿನ ವರದಿಗಳ ಪ್ರಕಾರ ಕರ್ನಾಟಕದ ವಿದ್ಯುತ್ ಬೇಡಿಕೆಯು 2034–35ರ ವೇಳೆಗೆ 35,218 ಮೆಗಾವ್ಯಾಟ್‌ಗೆ ಏರಲಿದ್ದು, ಗ್ರಿಡ್ ವಿಸ್ತರಣೆ ವೇಗಗೊಳ್ಳದಿದ್ದರೆ 19,586 ದಶಲಕ್ಷ ಯೂನಿಟ್ ಕೊರತೆ ಎದುರಾಗುವ ಭೀತಿ ಇದೆ. ನಗರೀಕರಣ ಹಾಗೂ ಕೈಗಾರಿಕೀಕರಣದಿಂದ ಇಂಧನ ಬಳಕೆ ದುಪ್ಪಟ್ಟಾಗುತ್ತಿದೆ. ಕೇವಲ ವಿದ್ಯುತ್ ಉತ್ಪಾದನೆ ಹೆಚ್ಚಿಸಿದರೆ ಸಾಲದು, ಅದನ್ನು ಗ್ರಾಹಕರಿಗೆ ಸಮರ್ಪಕವಾಗಿ ತಲುಪಿಸುವ ಪ್ರಸರಣ ಜಾಲವನ್ನು ಬಲಪಡಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

ಸರ್ಕಾರವು ನವೀಕರಿಸಬಹುದಾದ ಇಂಧನ ಮೂಲಗಳನ್ನು ಗ್ರಿಡ್‌ಗೆ ಯಶಸ್ವಿಯಾಗಿ ಸಂಯೋಜಿಸಲು ಮತ್ತು ತಾಂತ್ರಿಕ ಸೋರಿಕೆಯನ್ನು ತಡೆಯಲು ಅತ್ಯಾಧುನಿಕ ಮೂಲಸೌಕರ್ಯಗಳನ್ನು ಯುದ್ಧೋಪಾದಿಯಲ್ಲಿ ಅಭಿವೃದ್ಧಿ ಪಡಿಸಬೇಕು. ಇಲ್ಲದಿದ್ದರೆ ಭವಿಷ್ಯದಲ್ಲಿ ರಾಜ್ಯವು ತೀವ್ರ ಆರ್ಥಿಕ ಹಿನ್ನಡೆ ಹಾಗೂ ಕತ್ತಲೆಯನ್ನು ಎದುರಿಸಬೇಕಾಗುತ್ತದೆ.


–ಡಾ.ಎಚ್.ಕೆ.ವಿಜಯಕುಮಾರ್, ಮೈಸೂರು.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಜನ 'ಭ್ರಷ್ಟಾಚಾರ' ಮನ್ನಿಸಿದಂತಿದೆ...!



ಇತ್ತೀಚೆಗೆ ಜಾರಿ ನಿರ್ದೇಶನಾಲಯ (ಇ.ಡಿ), ಓರ್ವ ಹೆಚ್ಚುವರಿ ಅಬಕಾರಿ ಆಯುಕ್ತರ ಮನೆ ಮೇಲೆ ದಾಳಿ ಮಾಡಿದ್ದು ಭಾರೀ ಸುದ್ದಿಯಾಯಿತು.

ಹೆಚ್ಚು ಕಡಿಮೆ ಅದೇ ಸಮಯಕ್ಕೆ ಮತ್ತೋರ್ವ ಅಧಿಕಾರಿಯ ಪತ್ನಿ, ತನ್ನ ಇನ್ಸ್ಟಾಗ್ರಾಮ್ ಪೇಜ್‌ನಲ್ಲಿ ದುಬಾರಿ ಹ್ಯಾಂಡ್ ಬ್ಯಾಗ್‌ನೊಂದಿಗೆ ಒಂದು ರೀಲ್ ಅನ್ನು ಹಾಕಿದ್ದರು. ಆ ಹ್ಯಾಂಡ್ ಬ್ಯಾಗ್ ಅಧಿಕಾರಿಯ ಅರ್ಧ ವರ್ಷದ ಸಂಬಳಕ್ಕಿಂತಲೂ ಹೆಚ್ಚು ಬೆಲೆ ಬಾಳುತ್ತಿತ್ತು.

ಆ ಒಂದು ಕ್ಷಣ ನನಗೆ, 'ಛೇ! ನಾನು ಅಂತಹ ಅಧಿಕಾರಿಯಾದರೂ ಆಗಬೇಕಿತ್ತು ಇಲ್ಲ ಅವನ ಹೆಂಡತಿಯಾಗಿ ಯಾದರೂ ಹುಟ್ಟಬೇಕಿತ್ತು' ಎಂದು ಬೇಸರದಿಂದಲ್ಲೇ ಮೆಲ್ಲಗೆ ನುಡಿದೆ.

ಪಕ್ಕದಲ್ಲಿ ಕುಳಿತಿದ್ದ ನನ್ನ ಹೆಂಡತಿ ಸಿಕ್ಕ ಇಂತಹ ಅವಕಾಶವನ್ನು ಬಿಡುವುದುಂಟೆ! 'ನಾನು ಅಂತಹವನನ್ನೇ ಮದುವೆಯಾಗಬೇಕಿತ್ತು...' ಎಂದು ನಿಟ್ಟುಸಿರು ಬಿಟ್ಟರು!

ಇನ್ನೇನು ನನ್ನ ಸ್ವಾಭಿಮಾನಕ್ಕೆ ಧಕ್ಕೆಯಾಯಿತು ಅಂದು ಕೊಳ್ಳುವಷ್ಟರಲ್ಲೇ ಮತ್ತೆ ಅವಳೇ, 'ಹಾಗಾಗಿದ್ದಲ್ಲಿ ನಾನು ಮಾನ–ಮರ್ಯಾದೆಗಳೆಲ್ಲವನ್ನು ಬಿಟ್ಟು ಇರಬೇಕಾಗುತ್ತಿತ್ತು' ಎಂದು ಸೇರಿಸಿದಳು.

> **ಯಾವಾಗ ಭ್ರಷ್ಟಾಚಾರ ಸಾಮಾಜಿಕವಾಗಿ ಹೀಯ್ಯಾಳಿಕೆಯ ವಸ್ತುವಾಗುತ್ತದೋ, ಅನ್ಯಾಯದಿಂದ ಅಕ್ರಮವಾಗಿ ಗಳಿಸಿದ ಸಂಪತ್ತು ಜನರ ತೆಗಳಿಕೆಗೆ ಪಾತ್ರವಾಗುತ್ತದೋ, ಭ್ರಷ್ಟರನ್ನು ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡಿಸುತ್ತೇವೋ ಆಗ ನಿಜವಾಗಿಯೂ ಭ್ರಷ್ಟಾಚಾರ ತೊಲಗುತ್ತದೆ. ಆವಾಗ ಯಾವ ಭ್ರಷ್ಟಾಚಾರ ನಿಗ್ರಹ ದಳದ ಅಗತ್ಯವೂ ಇರುವುದಿಲ್ಲ. ಅಲ್ಲಿವರೆಗೆ ಯಾವ ಕಾನೂನು–ಕಟ್ಟಳೆಯೂ ಈ ಭ್ರಷ್ಟರನ್ನು ಅಲುಗಾಡಿಸಲಾರದು.**
>
> **ಭ್ರಷ್ಟಾಚಾರ ಕೇವಲ ದುರಾಸೆಯಿಂದ ಬರುವುದಲ್ಲ. ಅದು ಹೆಮ್ಮರವಾಗಿ ಗಟ್ಟಿಯಾಗಿ ನಿಲ್ಲುವುದು ಅದಕ್ಕೆ ಸಾಮಾಜಿಕ ಮನ್ನಣೆ ದೊರೆತಾಗ.**

ಅವಳು ಹೇಳಿದ ಆ ಒಂದು ಮಾತು, ಇಂದು ಆತ್ಮಸಾಕ್ಷಿ ಮರೆಯಾಗುತ್ತಿರುವುದನ್ನು ದೃಢಪಡಿಸಿತು.

ಆಧುನಿಕ ಭಾರತದಲ್ಲಿ ಇಂದು ಭ್ರಷ್ಟಾಚಾರ, ನಾಚಿಕೆ, ಪಶ್ಚಾತ್ತಾಪ ಮತ್ತು ಅಪರಾಧೀ ಭಾವ ಹೀಗೆ ಎಲ್ಲ ಎಲ್ಲೆಗಳನ್ನೂ ಮೀರಿ ನಿಂತಿದೆ ಎಂಬುದು ಅತ್ಯಂತ ದುರಂತ ಸಂಗತಿ.

ಕೇವಲ ಒಂದು ದಶಕದ ಹಿಂದೆ ತಂದೆ ಅಥವಾ ಗಂಡನ ಭ್ರಷ್ಟಾಚಾರದ ಅಕ್ರಮ ಹಣವನ್ನು ಬಳಸಿ ಮಜಾ ಮಾಡುತ್ತಿದ್ದ ಹೆಂಡತಿಯಾಗಲೀ ಮಕ್ಕಳಾಗಲೀ ನಮಗೆ ಕಾಣಸಿಗುತ್ತಿರಲಿಲ್ಲ.

ಹಾಗೆಯೇ, ಹಿಂದೆ ಭ್ರಷ್ಟಾಚಾರದಿಂದ ಬಂದ ಅಕ್ರಮ ಹಣ ವನ್ನು ಬಳಸಿಕೊಂಡು ಆಡಂಬರದ ಜೀವನ ಮಾಡಲು ಜನ ಹೆದರುತ್ತಿದ್ದರು ಮತ್ತು ಮುಜುಗರಪಡುತ್ತಿದ್ದರು. ಎಲ್ಲಿ ಜನ ನಮ್ಮನ್ನು ಕೀಳಾಗಿ ನೋಡಿ ನಮ್ಮಿಂದ ದೂರ ಸರಿಯುತ್ತಾರೋ ಎಂಬ ಅಂಜಿಕೆ.

ಇಂದು ಇಂತಹ ಹಿಂಜರಿಕೆಗಳೇ ಕಾಣೆಯಾಗಿವೆ. ಈಗ ಭ್ರಷ್ಟ ಅಧಿಕಾರಿಯ ಹೆಂಡತಿ, ಮಕ್ಕಳು ಮತ್ತು ಕುಟುಂಬದವರು, ದುಬಾರಿ ಕಾರುಗಳು, ಆಭರಣಗಳು, ಬ್ರ್ಯಾಂಡೆಡ್ ಬಟ್ಟೆಗಳು, ಅದ್ದೂರಿ ಮನೆ ಮತ್ತು ವಿದೇಶ ಪ್ರಯಾಣವನ್ನು ನಿರ್ಲಜ್ಜೆಯಿಂದ ತಮ್ಮ ಸಾಮಾಜಿಕ ತಾಣಗಳಲ್ಲಿ ಇನ್ಫ್ಲುಯೆನ್ಸರ್‌ಗಳ ಹಾಗೆ ಪ್ರದರ್ಶಿಸುತ್ತಿದ್ದಾರೆ. ತಾವು ಅನ್ಯಾಯದ ಗಳಿಕೆಯನ್ನು ಹೀಗೆ ಪ್ರದರ್ಶಿಸುತ್ತಿದ್ದೇವೆ ಎಂಬ ಕನಿಷ್ಠ ನಾಚಿಕೆ ಕೂಡ ಅವರನ್ನು ಕಾಡುತ್ತಿಲ್ಲ.

ಇಂದು ರಾಜಕಾರಣಿಗಳು ಮತ್ತು ಅಧಿಕಾರಿಗಳ ನಡುವೆ ಭ್ರಷ್ಟಾಚಾರ ಎನ್ನುವುದು, ಕುಟುಂಬದ ಉದ್ಯಮವೇ ಆಗಿಬಿಟ್ಟಿದೆ. ಅಧಿಕಾರಿ ಫೈಲ್‌ಗಳಿಗೆ ಸಹಿ ಮಾಡಿದರೆ, ಮಗ ಮತ್ತು ಅಳಿಯ ಕನ್ಸಲ್ಟೆಂಟ್‌ಗಳ ಹಾಗೆ ಕೆಲಸ ಮಾಡುತ್ತಾರೆ.

ಹೆಂಡತಿ–ಮಕ್ಕಳು ಮತ್ತು ಬಂಧುಗಳು ಆ ಬೇನಾಮಿ ಸಂಪತ್ತಿನ ವಾರಸುದಾರರಾಗಿರುತ್ತಾರೆ. ಹೀಗೆ ಎಲ್ಲರೂ ಒಂದೊಂದು ಪಾತ್ರ ನಿರ್ವಹಿಸುತ್ತಾರೆ. ಹಾಗೆಯೇ ಎಲ್ಲರಿಗೂ ಅದರಲ್ಲಿ ಪಾಲಿರುತ್ತದೆ!

ಎರಡು ಸಾವಿರ ವರ್ಷಗಳ ಹಿಂದೆಯೇ ಕೌಟಿಲ್ಯ ಮನುಷ್ಯನ ದೌರ್ಬಲ್ಯಗಳನ್ನ ತನ್ನ 'ಅರ್ಥಶಾಸ್ತ್ರ'ದಲ್ಲಿ ಬರೆದು ಇಟ್ಟುಬಿಟ್ಟಿದ್ದಾನೆ.

'ಜೇನು ಕಿತ್ತವನು ಹೇಗೆ ತನ್ನ ಕೈ ನೆಕ್ಕಿಕೊಳ್ಳದೇ ಇರಲಾರನೋ, ಹಾಗೆಯೇ ಸಾರ್ವಜನಿಕ ಹಣದ ವಹಿವಾಟು ಮಾಡುವ ಸರ್ಕಾರಿ ನೌಕರ ಅದಕ್ಕೆ ಕೈಹಾಕದೇ ಇರಲಾರ' ಎಂದು.

ಆದರೆ, ಇಂದಿನ ಪರಿಸ್ಥಿತಿ ಹೇಗಾಗಿದೆಯೆಂದರೆ, ಅಧಿಕಾರದಲ್ಲಿರುವವನು ಸ್ವಲ್ಪ ಜೇನು ನೆಕ್ಕಿ ಸುಮ್ಮನಾಗುವುದಿಲ್ಲ. ಬದಲಾಗಿ ಜೇನುತುಪ್ಪದ ಇಡೀ ಜರಡಿಯನ್ನ ಖಾಲಿ ಮಾಡಿ, ಅದನ್ನು ಮತ್ತೆ ತುಂಬಿಸಲು ತೆರಿಗೆದಾರರಿಗೆ ಆಜ್ಞೆ ಮಾಡುತ್ತಿದ್ದಾರೆ.

ರಾಜಕಾರಣಿಗಳು, ಅಧಿಕಾರಿಗಳಿಗೆ ಭ್ರಷ್ಟಾಚಾರವನ್ನು ಹೇಳಿಕೊಡುತ್ತಾರೆ ಎನ್ನುವುದು ಸಾಮಾನ್ಯ ನಂಬಿಕೆ. ಆದರೆ, ಇದು ಉಲ್ಟಾ ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ ರಾಜಕಾರಣಿ

> **ಇಂದು ಇಂತಹ ಹಿಂಜರಿಕೆಗಳೇ ಕಾಣೆಯಾಗಿವೆ. ಈಗ ಭ್ರಷ್ಟ ಅಧಿಕಾರಿಯ ಹೆಂಡತಿ, ಮಕ್ಕಳು ಮತ್ತು ಕುಟುಂಬದವರು, ದುಬಾರಿ ಕಾರುಗಳು, ಆಭರಣಗಳು, ಬ್ರ್ಯಾಂಡೆಡ್ ಬಟ್ಟೆಗಳು, ಅದ್ದೂರಿ ಮನೆ ಮತ್ತು ವಿದೇಶ ಪ್ರಯಾಣವನ್ನು, ನಿರ್ಲಜ್ಜೆಯಿಂದ ತಮ್ಮ ಸಾಮಾಜಿಕ ತಾಣಗಳಲ್ಲಿ ಇನ್ಫ್ಲುಯೆನ್ಸರ್‌ಗಳ ಹಾಗೆ ಪ್ರದರ್ಶಿಸುತ್ತಿದ್ದಾರೆ. ತಾವು ಅನ್ಯಾಯದ ಗಳಿಕೆಯನ್ನು ಹೀಗೆ ಪ್ರದರ್ಶಿಸುತ್ತಿದ್ದೇವೆ ಎಂಬ ಕನಿಷ್ಠ ನಾಚಿಕೆ ಕೂಡ ಅವರನ್ನು ಕಾಡುತ್ತಿಲ್ಲ.**

> **ಭ್ರಷ್ಟಾಚಾರ ಎನ್ನುವುದು ಒಂದು ವಿಶ್ವವಿದ್ಯಾನಿಲಯವಾದರೆ, ರಾಜಕಾರಣಿಗಳು ಸಂದರ್ಶಕ ಪ್ರಾಧ್ಯಾಪಕರುಗಳು. ಅಧಿಕಾರಿಗಳು ಖಾಯಂ ಪ್ರಾಧ್ಯಾಪಕರು! ಅಲ್ಲಿಗೆ ಭ್ರಷ್ಟಾಚಾರ ಎನ್ನುವ ವ್ಯವಸ್ಥೆಯಲ್ಲಿ ಈ ಅಧಿಕಾರಿಗಳ ಪಾತ್ರ ಏನೆನ್ನುವುದು ನಮಗೆ ಅರ್ಥವಾಗುತ್ತದೆ.**

ಗಳು ಐದು ವರ್ಷಗಳಿಗೊಮ್ಮೆ ಬಂದು ಹೋಗುತ್ತಾರೆ. ಆದರೆ, ಅದೇ ವ್ಯವಸ್ಥೆಯಲ್ಲಿ ಅಧಿಕಾರಿ ದಶಕಗಟ್ಟಲೆ ಇರುತ್ತಾನೆ. ಅವನು ಎಲ್ಲ ಪಟ್ಟುಗಳನ್ನು ಕಲಿತಿರುತ್ತಾನೆ. ಅವನಿಗೆ ಎಲ್ಲ ಲೋಪ–ದೋಷಗಳು ತಿಳಿದಿರುತ್ತವೆ. ಕಾರ್ಯ ತಂತ್ರಗಳ ಅರಿವಿರುತ್ತದೆ. ರಂಗೋಲಿ ಕೆಳಗೆ ಹೇಗೆ ತೂರಬೇಕೆಂದು ಕಲಿತು ಬಿಟ್ಟಿರುತ್ತಾನೆ!

ಸರ್ಕಾರಗಳು ಬದಲಾಗುತ್ತವೆ, ಸಚಿವರುಗಳೂ ಸ್ಥಾನಪಲ್ಲಟಗೊಳ್ಳುತ್ತಾರೆ. ಆದರೆ ಫೈಲ್‌ಗಳು ಮಾತ್ರ ಸಚಿವಾಲಯದಲ್ಲಿ ಸುತ್ತು ಹಾಕುತ್ತಲೇ ಇರುತ್ತವೆ.

ಭ್ರಷ್ಟಾಚಾರ ಎನ್ನುವುದು ಒಂದು ವಿಶ್ವ ವಿದ್ಯಾನಿಲಯವಾದರೆ, ರಾಜಕಾರಣಿಗಳು ಸಂದರ್ಶಕ ಪ್ರಾಧ್ಯಾಪಕರುಗಳು. ಅಧಿಕಾರಿಗಳು ಖಾಯಂ ಪ್ರಾಧ್ಯಾಪಕರು! ಅಲ್ಲಿಗೆ ಭ್ರಷ್ಟಾಚಾರ ಎನ್ನುವ ವ್ಯವಸ್ಥೆಯಲ್ಲಿ ಈ ಅಧಿಕಾರಿಗಳ ಪಾತ್ರ ಏನನ್ನುವುದು ನಮಗೆ ಅರ್ಥವಾಗುತ್ತದೆ.

ಯಾವುದೇ ಅಧಿಕಾರಿ ಸಿಕ್ಕಿಬಿದ್ದರೂ ಅವನ ಮೇಲಿರುವ ಆಪಾದನೆ ನಿರ್ಧರಿತವಾಗಲು ಆ ಫೈಲ್ ನೂರಾರು ಅಧಿಕಾರಿಗಳ ಸಹಿಗಾಗಿ ಟೇಬಲ್‌ಯಿಂದ ಟೇಬಲ್‌ಗೆ ಹೋಗಬೇಕಾಗುತ್ತದೆ.

ಅದು ಎಷ್ಟು ಟೇಬಲ್‌ಗಳಲ್ಲಿ ಹರಿದಾಡುತ್ತದೆ ಎಂದರೆ, ಕೊನೆಯ ಸಹಿ ಆಗುವ ಹೊತ್ತಿಗೆ ಆ ಅಧಿಕಾರಿ ನಿವೃತ್ತಿ ಹೊಂದಿ, ಪಿಂಚಣಿಯೊಂದಿಗೆ ನಿರಾಳವಾಗಿ ಮನೆ ಸೇರಿಯಾಗಿರುತ್ತದೆ!

ಇದರಿಂದಾಗಿಯೇ ಭ್ರಷ್ಟಾಚಾರ ಭಯಕ್ಕಿಂತ ಹೆಚ್ಚಾಗಿ ಆತ್ಮವಿಶ್ವಾಸವನ್ನು ತುಂಬುತ್ತಿದೆ.

ಪ್ರತಿ ವರ್ಷ ಲಕ್ಷಗಟ್ಟಲೆ ಯುವ ಜನರು ನಾಗರಿಕ ಸೇವಾ ಪರೀಕ್ಷೆಗಳಿಗಾಗಿ ತಯಾರಾಗುತ್ತಾರೆ. ಎಷ್ಟೋ ಮಂದಿ ದೇಶ ಸೇವೆ ಮಾಡಬೇಕೆಂಬ ಕನಸು ಕಟ್ಟಿಕೊಂಡಿರುತ್ತಾರೆ. ಆದರೆ, ಬಹಳಷ್ಟು ಜನರಿಗೆ, ಸೇವೆಗಿಂತ ಹೆಚ್ಚಾಗಿ, ಅಧಿಕಾರ ಮತ್ತು ಹಣದ ಮೇಲೆಯೇ ಕಣ್ಣಿರುತ್ತದೆ.

ಜವಾಹರಲಾಲ್ ನೆಹರು ಒಮ್ಮೆ ಒಂದು ಮಾತು ಹೇಳಿದ್ದರು; 'ಭಾರತದಲ್ಲಿ ಕೆಲವು ಸಂಗತಿಗಳು ಇಂದು ಎದ್ದು ಕಾಣುತ್ತವೆ. ನೈತಿಕ ಅಧಃಪತನ, ಬೌದ್ಧಿಕ ದಿವಾಳಿತನಗಳು ಭಾರತೀಯ ನಾಗರಿಕ ಸೇವಾ ವಲಯದಲ್ಲಿ ಹೆಚ್ಚಾಗಿದೆ' ಎಂದಿದ್ದರು.

ಆದರೆ, ಆಗ ಸರ್ದಾರ್ ವಲ್ಲಭಭಾಯ್ ಪಟೇಲರು ನೆಹರು ಪ್ರತಿಪಾದನೆಯನ್ನ ಒಪ್ಪದೆ, ನಾಗರಿಕ ಸೇವೆಗಳು ಭಾರತಕ್ಕೆ 'ಉಕ್ಕಿನ ಚೌಕಟ್ಟು' ಇದ್ದ ಹಾಗೆ. ಅದೇ ಭಾರತದಂತಹ ಸೂಕ್ಷ್ಮ ರಾಷ್ಟ್ರವನ್ನು ಹಿಡಿದಿಟ್ಟಿರುವುದು ಎಂದಿದ್ದರು.

ಈಗ ನೋಡಿದರೆ, ಪಟೇಲರು ಹೇಳಿದ್ದು ಆಗಿನ ಭಾರತಕ್ಕೆ ಸರಿ. ಅಂದು ಭಾರತಕ್ಕೆ ಶಿಸ್ತಾದ ಆಡಳಿತಾತ್ಮಕ ಯಂತ್ರ ಬೇಕಿತ್ತು. ಆದರೆ, ಇಂದು ಉಕ್ಕಿಗೆ ತುಕ್ಕು ಹಿಡಿದಿದೆ. ಅದು ಇಡೀ ರಾಷ್ಟ್ರವನ್ನೇ ಶಿಥಿಲವಾಗಿಸುತ್ತಿದೆ.

ಹಾಗೆಂದ ಮಾತ್ರಕ್ಕೆ ಎಲ್ಲ ನಾಗರಿಕ ಸೇವಾ ಅಧಿಕಾರಿಗಳು ಭ್ರಷ್ಟರಲ್ಲ. ಆದರೆ ಪ್ರಾಮಾಣಿಕ ಅಧಿಕಾರಿಗಳ ಸಂಖ್ಯೆ ಕಡಿಮೆಯಾಗಿದೆ. ಇದು ಕಳವಳಕಾರಿ ಸಂಗತಿ.

ಯಾವಾಗ ಭ್ರಷ್ಟಾಚಾರ ಸಾಮಾಜಿಕವಾಗಿ ಹೀಯ್ಯಾಳಿಕೆಯ ವಸ್ತುವಾಗುತ್ತದೋ, ಅನ್ಯಾಯದಿಂದ ಅಕ್ರಮವಾಗಿ ಗಳಿಸಿದ ಸಂಪತ್ತು ಜನರ ತೆಗಳಿಕೆಗೆ ಪಾತ್ರವಾಗುತ್ತದೋ, ಭ್ರಷ್ಟರನ್ನು ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡಿಸುತ್ತೇವೋ ಆಗ ನಿಜವಾಗಿಯೂ ಭ್ರಷ್ಟಾಚಾರ ತೊಲಗುತ್ತದೆ. ಆಗ ಯಾವ ಭ್ರಷ್ಟಾಚಾರ ನಿಗ್ರಹ ದಳದ ಅಗತ್ಯವೂ ಇರುವುದಿಲ್ಲ. ಅಲ್ಲಿಯವರೆಗೆ ಯಾವ ಕಾನೂನು–ಕಟ್ಟಳೆಯೂ ಈ ಭ್ರಷ್ಟರನ್ನು ಅಲುಗಾಡಿಸಲಾರದು.

ಭ್ರಷ್ಟಾಚಾರ ಕೇವಲ ದುರಾಸೆಯಿಂದ ಬರುವುದಲ್ಲ. ಅದು ಹೆಮ್ಮರವಾಗಿ ಗಟ್ಟಿಯಾಗಿ ನಿಲ್ಲುವುದು ಅದಕ್ಕೆ ಸಾಮಾಜಿಕ ಮನ್ನಣೆ ದೊರೆತಾಗ.

ಯಾವಾಗ ಸಮಾಜ ಈ ಭ್ರಷ್ಟರನ್ನು ಗೌರವಿಸಿ ಆರಾಧಿಸುವುದನ್ನು ನಿಲ್ಲಿಸುತ್ತದೆಯೋ ಆಗ ಎಲ್ಲವೂ ಬದಲಾಗುತ್ತದೆ. ಜೈಲುಗಳು ನಿಜವಾಗಿಯೂ ಶಿಕ್ಷೆಯ ತಾಣವಾದಾಗ, ನಾಗರಿಕ ಸೇವೆ ಎಂಬುದು ನಿಜಾರ್ಥದಲ್ಲಿ ಆಚರಣೆ ಆದಾಗ ಎಲ್ಲವೂ ಸರಿ ಹೋಗುತ್ತದೆ...

ಅಲ್ಲಿವರೆಗೆ ನಾಗರಿಕ ಸೇವಾ ಕ್ಷೇತ್ರ ಒಂದು ಸರಳ, ಆದರೆ ವಿನಾಶಕಾರಿ ಸಮಸ್ಯೆಯಿಂದ ಬಳಲುತ್ತದೆ ಮತ್ತು 'ಅನಾಗರಿಕ' ವ್ಯವಸ್ಥೆಯೇ ಅನಿವಾರ್ಯವಾಗಿ ಮುಂದುವರಿಯುತ್ತದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಶುಕ್ರವಾರ 3 ಜುಲೈ 2026

ರಂಗೋಲಿಯಲ್ಲಿ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಬೃಹತ್ ಚಿತ್ರ ಬಿಡಿಸಿ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ನಿರ್ಮಿಸಿದ ಮೈಸೂರಿನ ಕಲಾವಿದರು





ಮೈಸೂರಿನ ಕಲಾವಿದ ಪುನೀತ್ ಮತ್ತು ತಂಡದವರು ಬೃಹತ್ ರಾಘವೇಂದ್ರ ಸ್ವಾಮಿಯ ರಂಗೋಲಿ ಚಿತ್ರ ಬಿಡಿಸಿ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ದಾಖಲೆ ಬರೆದಿದ್ದಾರೆ.

ಮೈಸೂರು, ಜು.2(ಜಿಎ)–ಬೃಹತ್ ರಾಘವೇಂದ್ರಸ್ವಾಮಿಯ ರಂಗೋಲಿ ಚಿತ್ರ ಬಿಡಿಸಿದ ಮೈಸೂರಿನ ಕಲಾವಿದ ಪುನೀತ್ ಮತ್ತು ತಂಡದವರು ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ದಾಖಲೆ ಬರೆದಿದ್ದಾರೆ.

ಮೈಸೂರಿನ ಚಿತ್ರ ಕಲಾವಿದ ಪುನೀತ್ ಮತ್ತು ತಂಡದವರು ಮಂತ್ರಾಲಯದ ಶ್ರೀ ರಾಘವೇಂದ್ರ ಮಠದ ಆವರಣದಲ್ಲಿ ರಚಿಸಿದ್ದ ರಾಘವೇಂದ್ರ ಸ್ವಾಮೀಜಿಯ ಚಿತ್ರವೂ ದಾಖಲೆಯಾಗಿದೆ.

ಅಂದು ಅಕ್ಷಯ ತೃತೀಯ ಪ್ರಯುಕ್ತವಾಗಿ ರಾಯರ ಬೃಹತ್ ರಂಗೋಲಿ ಚಿತ್ರವನ್ನು ಕಲಾವಿದರಾದ ಪುನೀತ್ ಕಲಾವಿದ, ಲಕ್ಷ್ಮಿ ಸಿ., ಹರ್ಷಿತ್.ಆರ್, ಕೆ.ಬಿ. ಕುಮಾರಸ್ವಾಮಿ ಸೇರಿ ರಾಯರ ಭಕ್ತರಾದ ವೆಂಕಟಾಚಲ (ವಿ 2 ಪ್ರಾಪರ್ಟೀಸ್) ಅವರ ಸಹಕಾರದೊಂದಿಗೆ 5175 ಕೆಜಿ ರಂಗೋಲಿ ಬಳಸಿ, ಮಠದ ಆವರಣದ 45,144 ಚದರಡಿ ವಿಸ್ತೀರ್ಣದಲ್ಲಿ ಸತತ 28 ಗಂಟೆಗಳು ತಮ್ಮ ಪರಿಶ್ರಮದಿಂದ ಅದ್ಭುತವಾದ ರಾಘವೇಂದ್ರ ಸ್ವಾಮಿಯ ಚಿತ್ರವನ್ನು ಬಿಡಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಅಂದು ಚಿತ್ರವನ್ನು ರಚಿಸುವ ಸಂದರ್ಭದಲ್ಲಿ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನ ಅಧಿಕಾರಿಗಳು ಬಂದು ವೀಕ್ಷಿಸಿದ್ದರು. ನಂತರ ತಂಡ ಚಿತ್ರಿಸಿದ ವಿಡಿಯೋವನ್ನು ಇ-ಮೇಲ್ ಮೂಲಕ ಕಳುಹಿಸಿದ್ದರು. ಜೂ.25ರಂದು ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸಂಸ್ಥೆ ವತಿಯಿಂದ ಅಂಚೆ ಮೂಲಕ ದಾಖಲೆ ಪ್ರಮಾಣ ಪತ್ರವನ್ನು ರವಾನಿಸಲಾಗಿದೆ. ಇದು ಶ್ರಮಕ್ಕೆ ತಕ್ಕ ಪ್ರತಿಫಲ ಎಂದು ಕಲಾವಿದರು ಸಂತಸ ವ್ಯಕ್ತಪಡಿಸಿದ್ದಾರೆ.

ಶ್ರೀ ರಾಘವೇಂದ್ರಸ್ವಾಮಿ ಪೀಠಾಧಿಪತಿಗಳಾದ ಶ್ರೀ ಸುಬುದೇಂದ್ರ ತೀರ್ಥರು ಈ ಬೃಹತ್ ಚಿತ್ರ ಬಿಡಿಸಿದ ತಂಡವನ್ನು ಅಭಿನಂದಿಸಿದ್ದಾರೆ. ಮಂತ್ರಾಲಯಕ್ಕೆ ಆಗಮಿಸಿದ ಲಕ್ಷಾಂತರ ಭಕ್ತರು ರಾಘವೇಂದ್ರ ಸ್ವಾಮಿಗಳ ಬೃಹತ್ ಚಿತ್ರ ವೀಕ್ಷಿಸಿ, ಸಂತಸಪಟ್ಟರು ಎಂದು ಚಿತ್ರತಂಡ ಹೆಮ್ಮೆಪಟ್ಟಿದೆ.

ಎಂಎಲ್‌ಸಿ ಚುನಾವಣೆಯಲ್ಲಿ ಅಡ್ಡ ಮತದಾನ ಮುಗಿದ ಅಧ್ಯಾಯ!

ಮೈಸೂರಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಪ್ರತಿಕ್ರಿಯೆ

ಮೈಸೂರು, ಜು.2(ಬಿಎಲ್‌ಯು)– ವಿಧಾನಪರಿಷತ್ ಚುನಾವಣೆ ವೇಳೆ ನಡೆದ ಅಡ್ಡ ಮತದಾನ ವಿಚಾರ ಮುಗಿದ ಅಧ್ಯಾಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸ್ಪಷ್ಟಪಡಿಸಿದ್ದಾರೆ.



ವಿಜಯೇಂದ್ರ

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಅಡ್ಡ ಮತದಾನದ ವಿಚಾರವಾಗಿ ಸಮಗ್ರ ವಿವರವನ್ನು ಹೈಕಮಾಂಡ್‌ಗೆ ತಿಳಿಸಿದ್ದೇವೆ. ಇದು ಮುಗಿದ ಅಧ್ಯಾಯವಾದ ಹಿನ್ನೆಲೆಯಲ್ಲಿ ಈ ವಿಷಯದ ಬಗ್ಗೆ ಚರ್ಚೆ ಬೇಡ ಎಂದರು.

ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಅವರ ಆಡಿಯೋ ಬಗ್ಗೆ ಪ್ರತಿಕ್ರಿಯೆ ನೀಡಿದ ವಿಜಯೇಂದ್ರ, ಅದರಲ್ಲಿ ಇರುವ ಧ್ವನಿ ನನ್ನದಲ್ಲ ಎಂದು ಸ್ವತಃ ಸದಾನಂದಗೌಡರೇ ಸ್ಪಷ್ಟನೆ ನೀಡಿದ್ದಾರೆ. ಈ ವಿಚಾರವಾಗಿ ನಾನು ಶಾಸಕ ವಿಶ್ವನಾಥ್ ಜೊತೆ ಕೂಡ ಮಾತನಾಡಿದ್ದೇನೆ. ಪಕ್ಷ ಎಂದ ಮೇಲೆ ಸಣ್ಣಪುಟ್ಟ ಗೊಂದಲಗಳಿರುವುದು ಸಹಜ. ಆದರೆ ಅದನ್ನೆಲ್ಲಾ ನಾನು ನಿಭಾಯಿಸಿಕೊಂಡು ಪಕ್ಷ ಸಂಘಟನೆ ಮಾಡುತ್ತಿದ್ದೇನೆ ಎಂದರು.

ಸಿಎಂಗೇಕಿಷ್ಟು ಆತುರ

ಬಿಡದಿ ಟೌನ್‌ಶಿಪ್ ನಿರ್ಮಾಣಕ್ಕೆ ರೈತರ ತೀವ್ರ ವಿರೋಧವಿದ್ದರೂ ಸರ್ಕಾರ ಮಾತ್ರ ತನ್ನ ತೀರ್ಮಾನ ಬದಲಿಸುತ್ತಿಲ್ಲ. ತಾನು ಮಾಡಿದ್ದೆಲ್ಲಾ ಸರಿ ಎಂಬ ಧೋರಣೆಯಲ್ಲಿದೆ ಎಂದು ಬಿ.ವೈ. ವಿಜಯೇಂದ್ರ ಅಭಿಪ್ರಾಯಪಟ್ಟರು. ಬಿಡದಿ ಟೌನ್‌ಶಿಪ್‌ಗೆ ಶೇಕಡ 80ರಷ್ಟು ರೈತರ ವಿರೋಧವಿದೆ. ಆದರೂ ಸರ್ಕಾರ ಅದನ್ನು ಲೆಕ್ಕಿಸುತ್ತಿಲ್ಲ. ರೈತರ ಅಭಿಪ್ರಾಯ ಆಲಿಸದೆ ಮೊಂಡುತನ ಪ್ರದರ್ಶಿಸಿದೆ. ಈ ಮೂಲಕ ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆಪಾದಿಸಿದರು.

ಅದೇಕೊ ಏನೊ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಬಿಡದಿ ಟೌನ್ ಶಿಪ್ ನಿರ್ಮಾಣ ಮಾಡಲು ಬಹಳ ಆತುರ ತೋರುತ್ತಿದ್ದಾರೆ. ಸರ್ಕಾರದ ಈ ಧೋರಣೆ ಬಗ್ಗೆ ಮುಂದಿನ ವಿಧಾನಸಭಾ ಅಧಿವೇಶನದ ವೇಳೆ ವಿಸ್ತೃತ ಚರ್ಚೆ ನಡೆಸುತ್ತೇವೆ ಎಂದು ವಿಜಯೇಂದ್ರ ತಿಳಿಸಿದರು.

ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು: ರಾಜ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ (ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಪ್ರವರ್ಗ-1, ಎಸ್.ಸಿ & ಎಸ್.ಟಿ.ರೂ. 2.50 ಲಕ್ಷ ಹಾಗೂ ಪ್ರವರ್ಗ-2ಎ, 2ಬಿ, 3ಎ, 3ಬಿ ರೂ. 1.00 ಲಕ್ಷ ಆಗಿರಬೇಕು. ಪ್ರವೇಶ ಬಯಸುವ ವಿದ್ಯಾರ್ಥಿಗಳು ಜು.20ರೊಳಗೆ https://shp.karnataka.gov.in/bcwd ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 8050770004 ಸಂಪರ್ಕಿಸಬಹುದೆಂದು ಪ್ರಕಟಣೆ ತಿಳಿಸಿದೆ.

ಮೈಸೂರು ನಗರದ ನಾನಾ ಸಮಸ್ಯೆ ಕುರಿತಾಗಿ ಶಾಸಕರೊಂದಿಗೆ ಅಧಿಕಾರಿಗಳ ಸಭೆ

ಬಾಕಿ ಅಭಿವೃದ್ಧಿ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಿ

ಒಂದೇ ಮನೆಗೆ ಇರುವ ಹಲವು ನೀರಿನ ಸಂಪರ್ಕ ಕಡಿತಕ್ಕೆ ತಾಕೀತು

ಮೈಸೂರು, ಜು.2(ಎಂಕೆ)– ಮೈಸೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯುಂಟಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಜೊತೆಗೆ ಬಾಕಿ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ನಗರಪಾಲಿಕೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಲಾಯಿತು.

ಮೈಸೂರು ನಗರಪಾಲಿಕೆಯ ಸಭಾಂಗಣದಲ್ಲಿ ಚಾಮರಾಜ, ನರಸಿಂಹರಾಜ, ಕೃಷ್ಣರಾಜ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರ ಸಮಕ್ಷಮದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಭೆಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ನಡೆದ ಕುಡಿಯುವ ನೀರು, ಅಭಿವೃದ್ಧಿ ಕಾಮಗಾರಿ ಸೇರಿದಂತೆ ಪ್ರಮುಖ ವಿಷಯಗಳ ಕುರಿತು ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಮಳೆ ಕೊರತೆ ಹಿನ್ನೆಲೆಯಲ್ಲಿ ಕುಡಿಯುವ ನೀರಿಗೆ ಸಮಸ್ಯೆಯುಂಟಾಗದಂತೆ ನಿರ್ವಹಿಸಬೇಕು ಎಂದು ತಾಕೀತು ಮಾಡಲಾಯಿತು.

ಕೆಲವೊಂದು ಮನೆಗಳಿಗೆ ಎರಡ್ಮೂರು ಪೈಪ್‌ಲೈನ್ ಮೂಲಕ ಕುಡಿಯುವ ನೀರು ಪೂರೈಕೆಯಾಗುತ್ತಿದೆ. ತಗ್ಗು ಪ್ರದೇಶಗಳಿಗೆ ಹೆಚ್ಚು ಮತ್ತು ಎತ್ತರದ ಪ್ರದೇಶದಲ್ಲಿರುವ ಬಡಾವಣೆಗಳಿಗೆ ಕಡಿಮೆ ನೀರಿನ ಪೂರೈಕೆಯಾಗುತ್ತಿದೆ. ಆದ್ದರಿಂದ ಒಂದಕ್ಕಿಂತ ಹೆಚ್ಚಿರುವ ನಲ್ಲಿ ಸಂಪರ್ಕಗಳನ್ನು ಕಟ್ ಮಾಡಿ, ನೀರು ಪೋಲಾಗದಂತೆ ಮುಂಜಾಗ್ರತೆ ವಹಿಸುವಂತೆ ಸೂಚಿಸಲಾಯಿತು.

ಕತ್ತೆಗಳಾಗಬೇಡಿ...!

ಎನ್‌ಆರ್‌ನಲ್ಲಿ ನಾಲ್ಕು ಟ್ಯಾಂಕ್ ಕಟ್ಟಿ ಮೂರು ವರ್ಷವಾದರೂ ಬಳಕೆಯಾಗುತ್ತಿಲ್ಲ. ಸಾರ್ವಜನಿಕರಿಗೆ ಉತ್ತರ ಕೊಡುವುದ್ಯಾಗೆ. ಏನಾದರೂ ಗಮನಿಸಿದ್ದೀರಾ... ಇಂಜಿನಿಯರ್‌ಗಳಾಗಿ ಕತ್ತೆಗಳಾಗಬೇಡಿ ಎಂದು ಪಾಲಿಕೆ ಅಧಿಕಾರಿಗಳನ್ನು ಗದರಿದ ಶಾಸಕ ತನ್ವೀರ್ ಸೇಠ್, ಕೆಲಸ ಮಾಡುವ ಆಸಕ್ತಿ ಇಲ್ಲವಾದಲ್ಲಿ ಬಿಟ್ಟೋಗಿ ಎಂದು ಸಿಟ್ಟಾದರು.





ಮೈಸೂರು ನಗರಪಾಲಿಕೆಯ ಸಭಾಂಗಣದಲ್ಲಿ ಕುಡಿಯುವ ನೀರು, ಬಾಕಿ ಅಭಿವೃದ್ಧಿ ಕಾಮಗಾರಿಗಳ ಕುರಿತು ಗುರುವಾರ ಸಭೆ ನಡೆಸಲಾಯಿತು. ಈ ವೇಳೆ ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್‌ಸೇಠ್, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಮೈಸೂರು ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮತ್ತಿತರರಿದ್ದರು.

ಹಾಗೆಯೇ ವೈಟ್ ಟಾಪಿಂಗ್ ಕಾಮಗಾರಿಗೆ ಪೂರ್ಣಗೊಳಿಸಲು ಇನ್ನೂ ಹೆಚ್ಚುವರಿ ಅನುದಾನದ ಅಗತ್ಯವಿದ್ದು, ಒಳಚರಂಡಿ ಕಾಮಗಾರಿ, ಯುಜಿ ಕೇಬಲ್ ಕಾಮಗಾರಿ ಸೇರಿದಂತೆ ಬಾಕಿ ಖರ್ಚು ವೆಚ್ಚ ಎಷ್ಟಾಗಬಹುದೆಂದು ಅಂದಾಜು ವೆಚ್ಚ ಪಟ್ಟಿ ಮಾಡಿ ಜು.20ರಂದು ನಡೆಯುವ ಮುಂದಿನ ಸಭೆಯಲ್ಲಿ ಮಂಡಿಸುವಂತೆಯೂ ತಿಳಿಸಲಾಯಿತು.

ಟ್ಯಾಂಕ್‌ಗಳಿಗೆ ನೀರಿನ ಸಂಪರ್ಕವಿಲ್ಲ: ಶಾಸಕ ತನ್ವೀರ್ ಸೇಠ್ ಮಾತನಾಡಿ, ನರಸಿಂಹರಾಜ ಕ್ಷೇತ್ರ ವ್ಯಾಪ್ತಿಯ ಕೆಸರೆ, ನಾಯ್ಡುನಗರ, ಶಿವಾಜಿ ಪಾರ್ಕ್ ಮತ್ತು ಬಾಲಭವನದಲ್ಲಿ ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಿ ಮೂರು ವರ್ಷಗಳಾಗಿವೆ. ಆದರೆ, ಇನ್ನೂ ಅವುಗಳಿಗೆ ನೀರು ತುಂಬಿಸುವ ಕೆಲಸವಾಗಿಲ್ಲ. ಇನ್ನೂ ಸಂಪ್ ನಿರ್ಮಿಸಬೇಕು. ಪೈಪ್‌ಲೈನ್ ಆಗಿಲ್ಲ ಎಂದು ಹೇಳುವುದು ಸರಿಯಲ್ಲ. ಟ್ಯಾಂಕ್ ನಿರ್ಮಿಸುವ ಮೊದಲೇ ಪೈಪ್‌ಲೈನ್ ಮಾಡಬೇಕು. ಕ್ಷೇತ್ರದ ಜನರು ನೀರು ಬೇಕು ಎನ್ನುತ್ತಿದ್ದಾರೆ. ಖಾಲಿ ಟ್ಯಾಂಕ್‌ಗಳಿಂದ ನೀರು ಪೂರೈಕೆ ಮಾಡಲು ಆಗುತ್ತಾ ಎಂದು ಪ್ರಶ್ನಿಸಿದರು.

ಟ್ಯಾಂಕ್‌ಗಳು ಏನಾಗುಹುದು: ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಓವರ್‌ಹೆಡ್ ಟ್ಯಾಂಕ್‌ಗಳನ್ನು ಕಟ್ಟುವ ಮುನ್ನವೇ ಪೈಪ್‌ಲೈನ್ ಆಗಿರಬೇಕು. ಎರಡು ವರ್ಷ ನೀರು ತುಂಬಿಸದೆ ಇದ್ದರೆ, ಟ್ಯಾಂಕ್ ಹಾಳಾಗುತ್ತದೆ. ಕೆಲ ವರ್ಷಗಳಲ್ಲಿ ಬೀಳುವ ಸಾಧ್ಯತೆಗಳು ಹೆಚ್ಚು. ಹಾಗಾಗಿ ಟ್ಯಾಂಕ್ ನಿರ್ಮಿಸುವ ಮುನ್ನವೇ ಸಂಪ್ ಆಗಿದೆಯೇ, ಪೈಪ್‌ಲೈನ್ ಆಗಿದೆಯೇ ಎಂದು ಗಮನಿಸಬೇಕು ಎಂದರು. ಶಾಸಕರಾದ ಕೆ.ಹರೀಶ್‌ಗೌಡ, ಶ್ರೀವತ್ಸ, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮತ್ತಿತರರಿದ್ದರು.

ಮೈಸೂರಲ್ಲಿ ಶೌಚಾಲಯಗಳೇ ಸಮಸ್ಯೆಯಲ್ಲಿವೆ!?

● ಮೂಗು ಮುಚ್ಚಿಕೊಂಡೇ ಕೆಲಸ ಮುಗಿಸಿ ಬರಬೇಕು ● ಅಲ್ಲೇ ಅಡಿಗೆ, ವಾಸ, ಕೂರೋದು–ಮಲಗೋದು ಎಲ್ಲವೂ ● ಮಹಿಳೆಯರ ಶೌಚಾಲಯಗಳಲ್ಲಿ ಪುರುಷರ ನಿರ್ವಹಣೆ!? ● ಮೈಸೂರು ವಿವಿ ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರದ ಸಮೀಕ್ಷೆಯಿಂದ ಕರ್ಮಕಾಂಡ ಬಯಲು

ಮೈಸೂರು, ಜು.2(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸತ್ತಂತಿರುವ ಶೌಚಾಲಯಗಳು... ನಿರ್ವಹಣೆ ಇಲ್ಲದೆ ಅವಸಾನದತ್ತ ಸಾಗುತ್ತಿವೆ... ಕೆಲವೆಡೆ ಎಲ್ಲವೂ ಅಲ್ಲೇ...!

ಸಾಂಸ್ಕೃತಿಕ ಆಚರಣೆಗಳಿಂದಲೇ ವಿಶ್ವಮಟ್ಟದಲ್ಲಿ ಖ್ಯಾತಿ ಪಡೆದಿರುವ ಮೈಸೂರಿನಲ್ಲಿರುವ ಸಾರ್ವಜನಿಕ ಶೌಚಾಲಯಗಳು, ನಿರ್ವಹಣೆ ಇಲ್ಲದೆ ದುರ್ವಾಸನೆ ಬೀರುವ ಕೊಂಪೆಗಳಾಗಿ ಪರಿವರ್ತನೆ ಯಾಗುತ್ತಿವೆ. ಕೆಲವೆಡೆ ಶೌಚಾಲಯಗಳು ಮಲ–ಮೂತ್ರ ವಿಸರ್ಜನೆಗಷ್ಟೇ ಅಲ್ಲದೆ ಅಲ್ಲೇ ತಿಂದು, ಅಲ್ಲೆ ಮಲಗಿ, ನಿತ್ಯಕರ್ಮಗಳನ್ನು ಮುಗಿಸುವ ಕೊಣೆಗಳೂ ಆಗಿವೆ.

ಮೈಸೂರು ವಿಶ್ವವಿದ್ಯಾಲಯದ ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರದ (ಸಿಎಸ್‌ಎಸ್‌ಐ)ವು ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಕಳೆದ ಫೆಬ್ರವರಿಯಿಂದ ಇದುವರೆಗೆ ನಡೆಸಿರುವ ಸಮೀಕ್ಷೆಯಲ್ಲಿ ನಗರದಲ್ಲಿರುವ ಶೌಚಾಲಯಗಳ ನಿಜ ಸ್ಥಿತಿ–ಗತಿ ಬಯಲಾಗಿದೆ. ಉಸಿರಿಡಿದುಕೊಂಡು ಮಲ–ಮೂತ್ರ ವಿಸರ್ಜನೆ ಮಾಡಬೇಕಾದ ಅನಿವಾರ್ಯತೆಯ ಚಿತ್ರಣವನ್ನು ತೆರೆದಿಡಲಾಗಿದೆ. ಮೈಸೂರು ವಿವಿ ಸಿಎಸ್‌ಎಸ್‌ಐ ವಿಭಾಗದ ಸಹ ಪ್ರಾಧ್ಯಾಪಕ ಡಿ.ಸಿ. ನಂಜುಂಡ ನೇತೃತ್ವದ ತಂಡ ನಗರಪಾಲಿಕೆ ವ್ಯಾಪ್ತಿಯ 46 ಶೌಚಾಲಯಗಳ ಪೈಕಿ 38 ಶೌಚಾಲಯಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿದ್ದು, ಶೇ.26ರಷ್ಟು ಶೌಚಾಲಯಗಳು ಬಳಕೆಗೆ ಯೋಗ್ಯವಾಗಿದ್ದರೆ, ಶೇ.49ರಷ್ಟು ಸಾಧಾರಣ ಮತ್ತು ಶೇ.25ರಷ್ಟು ಅತ್ಯಂತ ಕಳಪೆ ಸ್ಥಿತಿಯಲ್ಲಿವೆ ಎಂಬುದನ್ನು ಫೋಟೋ ಸಹಿತ ಬಹಿರಂಗಪಡಿಸಿದೆ.

ಕೆಲವೆಡೆ ಶೌಚಾಲಯಗಳನ್ನು ನಿರ್ವಹಿಸುವವರೇ ಶೌಚಾಲಯದೊಳಗೆ ಮಲಗುವುದು, ಶೌಚಾಲಯದ ನೀರನ್ನೇ ಬಳಸುವುದು, ಅಲ್ಲೇ ಅಡುಗೆ ಮಾಡುವುದು, ಪಿಂಕ್(ಮಹಿಳೆಯರಿಗೆ ಮೀಸಲು) ಶೌಚಾಲಯದಲ್ಲಿ ಪುರುಷ ಕೇರ್‌ಟೇಕರ್ ಇರುವುದು, ಹೆಚ್ಚಿನ ಕೇರ್‌ಟೇಕರ್‌ಗಳು ಮದ್ಯದ ಅಮಲಿನಲ್ಲೇ ಇರುವುದು, ಶೌಚಾಲಯದ ಮುಂದೆಯೇ ತರಕಾರಿ ಮಾರುತ್ತಿರುವುದು ಹಾಗೆಯೇ ಶಾಶ್ವತವಾಗಿ ಮುಚ್ಚಿರುವ ಶೌಚಾಲಯಗಳು ಕೂಡ ಕಂಡುಬಂದಿವೆ.

ಜೊತೆಗೆ ನಗರಪಾಲಿಕೆಯ 65 ವಾರ್ಡ್ ಗಳ ಪೈಕಿ 30 ವಾರ್ಡ್‌ಗಳಲ್ಲಿ ಶೌಚಾಲಯ ಗಳೇ ಇಲ್ಲ ಎಂಬ ಸಂಗತಿಯು ಸಮೀಕ್ಷೆಯಿಂದ ತಿಳಿದಿದ್ದು, ಸ್ಯಾನಿಟರಿ ಪ್ಯಾಡ್ ನಿರ್ವಹಣೆಯ ವ್ಯವಸ್ಥೆ ಶೇ 53ರಷ್ಟು



ಟಿ.ಕೆ.ಲೇಔಟ್‌ನ ಶೌಚಾಲಯವೊಂದರೊಳಗೆ ನಿದ್ರೆಗೆ ಜಾರಿರುವ ವ್ಯಕ್ತಿಯನ್ನು ಕಾಣಬಹುದು.



ಕೆ.ಆರ್.ಆಸ್ಪತ್ರೆ ಸಮೀಪದ ಶೌಚಾಲಯವೊಂದರ ಮುಂದೆಯೇ ತರಕಾರಿ ವ್ಯಾಪಾರ ಮಾಡುತ್ತಿರುವುದು.



ಪಾಳು ಬಿದ್ದಿರುವ ಶೌಚಾಲಯ.

ಸಾರ್ವಜನಿಕರು ಅರ್ಥ ಮಾಡಿಕೊಳ್ಳಬೇಕು...

ಎರಡ್ಮೂರು ರೂಪಾಯಿ ಹಣ ಕೊಟ್ಟು ಸಾರ್ವಜನಿಕ ಶೌಚಾಲಯವನ್ನು ಬಳಕೆ ಮಾಡಲು ಹಿಂದೇಟು ಹಾಕುವವರು ಎಲ್ಲೆಂದರಲ್ಲಿ ಮೂತ್ರ ವಿಸರ್ಜನೆ ಮಾಡುತ್ತಾರೆ. ಇದರಿಂದಾಗಿಯೇ ಟೌನ್‌ಹಾಲ್ ಆವರಣದಲ್ಲಿ ಎನ್‌ಜಿಒ ಸಂಸ್ಥೆಯೊಂದರ ಸಹಯೋಗದೊಂದಿಗೆ ಮುಕ್ತ ಮೂತ್ರಾಲಯವನ್ನು ನಿರ್ಮಿಸಲಾಗಿದೆ. ಪಕ್ಕದಲ್ಲೇ ಹೆರಿಟೇಜ್ ಮಾದರಿಯಲ್ಲಿ ಶೌಚಾಲಯವಿದ್ದರೂ ಬಳಕೆ ಮಾಡುವುದಿಲ್ಲ. ಸ್ವಚ್ಛತೆ ದೃಷ್ಟಿಯಿಂದ ಸಾರ್ವಜನಿಕರು ಅರ್ಥಮಾಡಿಕೊಳ್ಳಬೇಕು. ಹಾಗೆಯೇ ನಿರ್ವಹಣೆ ಕೊರತೆ ಇರುವ ಶೌಚಾಲಯಗಳನ್ನು ಗಮನಿಸಿ ಅಲ್ಲಿನ ಸಮಸ್ಯೆಗಳನ್ನು ಬಗೆಹರಿಸಲಾಗುವುದು.

-ಶೇಖ್ ತನ್ವೀರ್ ಆಸಿಫ್, ನಗರಪಾಲಿಕೆ ಆಯುಕ್ತ

ಶೌಚಾಲಯಗಳಲ್ಲಿ ಕಂಡುಬಂದಿಲ್ಲ. ಇನ್ಸಿನರೇಟರ್ (ತ್ಯಾಜ್ಯವನ್ನು ಸುಟ್ಟು ಬೂದಿ ಮಾಡುವ ಯಂತ್ರ) ಸೌಲಭ್ಯ ಯಾವ ಶೌಚಾಲಯದಲ್ಲೂ ಇಲ್ಲ ಎಂಬುದನ್ನು ಸಮೀಕ್ಷೆ ತಿಳಿಸಿದೆ.

ಸತ್ತಂತಿರುವ ಶೌಚಾಲಯಗಳು: ವಿಶ್ವ ವಿಖ್ಯಾತ ಪ್ರವಾಸಿ ತಾಣವಾದ ಮೈಸೂರಿಗೆ ನಿತ್ಯವೂ ಸಾವಿರಾರು ಮಂದಿ ಬರುತ್ತಾರೆ. ಪ್ರವಾಸಿಗರ ಸಂಖ್ಯೆಯೂ ಜಾಸ್ತಿ. ದೇಶ–ವಿದೇಶಗಳಿಂದ ಬರುವವರಿಗೆ ಪ್ರವಾಸಿಗರಿಗೆ ಸುಸಜ್ಜಿತ ಸಾರ್ವಜನಿಕ ಶೌಚಾಲಯಗಳಿಲ್ಲ. ಇರುವ ಶೌಚಾಲಯಗಳು ಜೀವವಿಲ್ಲದೆ ಸತ್ತಂತಿವೆ. ಕೈ ತೊಳೆಯಲು ಸಾಬೂನಿಲ್ಲ. ಕಿಟಕಿ ಗಾಜುಗಳು ಒಡೆದಿವೆ. ಅಲ್ಲದೆ ಸರಿಯಾದ ಬೆಳಕಿಲ್ಲ. ದುರ್ವಾಸನೆ ನಡುವೆ ಮೂಗು ಮುಚ್ಚಿಕೊಂಡು ಶೌಚಾಲಯ ಬಳಕೆ ಮಾಡಬೇಕು ಎಂದು ಮೈಸೂರು ವಿವಿ ಸಿಎಸ್‌ಎಸ್‌ಐ ವಿಭಾಗದ ಸಹ ಪ್ರಾಧ್ಯಾಪಕ ಡಿ.ಸಿ. ನಂಜುಂಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪುರುಷರ ಶೌಚಾಲಯ ಮಹಿಳೆಯ ಬಳಕೆ!: ವಾರ್ಡ್ ನಂ.25 ಮತ್ತು 49ರಲ್ಲಿ ಪುರುಷರ ಶೌಚಾಲಯವಿದ್ದು, ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಇಲ್ಲ. ಆದರೂ ಇದನ್ನು ಮಹಿಳೆಯರು ಬಳಸುತ್ತಿದ್ದಾರೆ. ಹಾಗೆಯೇ ವಾರ್ಡ್ ನಂ.57 (ಗಂಡಬೇರುಂಡ ಉದ್ಯಾನ, ಕುವೆಂಪುನಗರ)ರಲ್ಲಿ ಶೌಚಾಲಯ ನಿರ್ಮಿಸಿ ವರ್ಷ ಕಳೆದರೂ ಸಾರ್ವಜನಿಕರ ಬಳಕೆಗೆ ನೀಡಿಲ್ಲ. ಮಂಚೇಗೌಡನ ಕೊಪ್ಪಲು ಪಾರ್ಕ್‌ನಲ್ಲಿ ನಿರ್ಮಿಸಲಾದ ಶೌಚಾಲಯ ಉದ್ಘಾಟನೆಯಾಗದೆ ಪಾಳು ಬಿದ್ದಿದೆ ಎಂದು ಮಾಹಿತಿ ನೀಡಿದರು.

ಸರ್ವೇಯರ್ ಲೋಕಾಯುಕ್ತ ಬಲೆಗೆ

ಮೈಸೂರು,ಜು.2(ಪಿಎಂ)– ನಂಜನಗೂಡು ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯ ಸರ್ವೇಯರ್ ಜಯಪ್ರಕಾಶ್ 1.20 ಲಕ್ಷ ರೂ. ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾನೆ. ನಂಜನಗೂಡು ತಾಲೂಕಿನ ಜಮೀನೊಂದರ ತತ್ಕಾಲ್ ಪೋಡಿ ಮಾಡಿಕೊಡಲು ಭೂಮಿ ಮಾಲೀಕರಿಂದ ಹಣ ಸ್ವೀಕರಿಸುತ್ತಿದ್ದಾಗ ಮೈಸೂರಿನ ದಟ್ಟಗಳ್ಳಿಯಲ್ಲಿ ಗುರುವಾರ ಮಧ್ಯಾಹ್ನ ಲೋಕಾಯುಕ್ತ ಪೊಲೀಸರಿಗೆ ಈತ ಸಿಕ್ಕಿಬಿದ್ದಿದ್ದು, ಆತನನ್ನು ಬಂಧಿಸಲಾಗಿದೆ.



ಪೋಡಿ ಮಾಡಿಕೊಡಬೇಕಾದರೆ 1.20 ಲಕ್ಷ ರೂ. ಲಂಚ ನೀಡಬೇಕೆಂದು ಭೂಮಿ ಮಾಲೀಕರಲ್ಲಿ ಜಯಪ್ರಕಾಶ ಬೇಡಿಕೆ ಇಟ್ಟಿದ್ದ. ಅಂತೆಯೇ ಜಮೀನು ಮಾಲೀಕರು ಹಣ ನೀಡುವುದಾಗಿ ಒಪ್ಪಿಕೊಂಡು ಈ ಸಂಬಂಧ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಇದರ ಅನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು.

ಅದೇ ರೀತಿ ಗುರುವಾರ ಮಧ್ಯಾಹ್ನ ದಟ್ಟಗಳ್ಳಿಯ ಹೋಟೆಲ್‌ವೊಂದರ ಬಳಿ ಜಮೀನು ಮಾಲೀಕರಿಂದ ಸರ್ವೇಯರ್ ಜಯಪ್ರಕಾಶ್ ಲಂಚದ ಹಣ ಸ್ವೀಕರಿಸಲು ಬಂದಿದ್ದು, ಈ ವೇಳೆ ಕಾರ್ಯಾಚರಣೆಯಂತೆ ಕಾದು ಕುಳಿತಿದ್ದ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. ಆ ಮೂಲಕ ಲಂಚದ ಹಣದೊಂದಿಗೆ ರೆಡ್ ಹ್ಯಾಂಡ್ ಆಗಿ ಜಯ ಪ್ರಕಾಶ್‌ನನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ' ನೊಂದಿಗೆ ಮಾತ ನಾಡಿದ ಲೋಕಾಯುಕ್ತ ಎಸ್‌ಪಿ ಟಿ.ಜೆ.ಉದೇಶ್, ಲಂಚಕ್ಕೆ ಬೇಡಿಕೆ ಇಟ್ಟಿರುವುದಾಗಿ ಜಮೀನು ಮಾಲೀಕರು ದೂರು ನೀಡಿದ್ದರು. ಅದರಂತೆ ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿ ಜಯಪ್ರಕಾಶ್ ಎಂಬುವವರನ್ನು ಬಂಧಿಸಿದ್ದೇವೆ ಎಂದು ತಿಳಿಸಿದರು.

ಪೊಲೀಸ್ ಮಹಾನಿರೀಕ್ಷಕ ಮನೀಷ್ ಕರ್ಬೀಕರ್, ಪೊಲೀಸ್ ಮಹಾನಿರೀಕ್ಷಕ ಸುಬ್ರಹ್ಮಣ್ಯೇಶ್ವರರಾವ್ ಅವರ ಮಾರ್ಗದರ್ಶನದಲ್ಲಿ ಎಸ್‌ಪಿ ಟಿ.ಜೆ.ಉದೇಶ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

ಕಟ್ಟಡ ನಿರ್ಮಾಣ ನಕ್ಷೆ ಅನುಮೋದನೆ ಸಿಗದೆ ಮೈಸೂರು ವಿಜಯನಗರ ನಿವಾಸಿಗಳ ಪರದಾಟ

ಹೂಟಗಳ್ಳಿ ನಗರಸಭೆ, ಮೈಸೂರು ಪಾಲಿಕೆಯಿಂದ ಸಮಸ್ಯೆ

ಮೈಸೂರು, ಜು.2(ಜಿಎ)–ಮೈಸೂರಿನ ವಿಜಯನಗರದ 3ನೇ ಹಂತದ ನಿವಾಸಿಗಳಿಗೆ ಹೂಟಗಳ್ಳಿ ನಗರಸಭೆ ಮತ್ತು ಮೈಸೂರು ಪಾಲಿಕೆಯಿಂದ ಕಟ್ಟಡ ನಿರ್ಮಾಣ ನಕ್ಷೆ ಅನುಮೋದನೆ ಸಿಗದೆ ಪರದಾಡುವ ಪರಿಸ್ಥಿತಿ ಬಂದೊದಗಿದೆ.

ವಿಜಯನಗರ 3ನೇ ಹಂತದ ನಿವಾಸಿಗಳು ಕಟ್ಟಡ ನಕ್ಷೆ ಅನುಮೋದನೆಗಾಗಿ ಮಹಾನಗರ ಪಾಲಿಕೆಯ ವಲಯ ಕಚೇರಿ–3ರಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಿದರೆ, ತಾಂತ್ರಿಕ ದೋಷದಿಂದ ಅರ್ಜಿಯೂ ಹೂಟಗಳ್ಳಿ ನಗರಸಭೆಗೆ ವರ್ಗಾವಣೆಯಾಗುತ್ತಿದ್ದು, ಇದರಿಂದ ನಿವಾಸಿಗಳಿಗೆ ಕಟ್ಟಡ ನಿರ್ಮಾಣಕ್ಕೆ ಎಲ್ಲಿಯೂ ಅನುಮೋದನೆ ಸಿಗದೆ ಪರದಾಡುವಂತಾಗಿದೆ.

ಕಟ್ಟಡ ನಿರ್ಮಾಣಕ್ಕಾಗಿ ನಿವಾಸಿಗಳು ನಕ್ಷೆಯ ಅನುಮೋದನೆ ಕೋರಿ ಮೈಸೂರು ಮಹಾನಗರದ ಪಾಲಿಕೆ ವಲಯ ಕಚೇರಿ–3ಕ್ಕೆ ಅರ್ಜಿ ಸಲ್ಲಿಸುತ್ತಿದ್ದಾರೆ. ಆದರೆ, ಪ್ರಸ್ತುತ ಆನ್‌ಲೈನ್ ವ್ಯವಸ್ಥೆಯಲ್ಲಿ ವಿಜಯನಗರ 3ನೇ ಹಂತದ ಕೆಲವು ಪ್ರದೇಶಗಳ ಅರ್ಜಿಗಳು ಸ್ವಯಂಚಾಲಿತವಾಗಿ ಹೂಟಗಳ್ಳಿ ನಗರಸಭೆ ವ್ಯಾಪ್ತಿಗೆ ವರ್ಗಾವಣೆಯಾಗುತ್ತಿದ್ದು, ಅಲ್ಲಿ ಅರ್ಜಿಗಳು ಬಾಕಿ ಉಳಿದುಕೊಂಡಿವೆ. ಈ ಕಾರಣದಿಂದ ಪಾಲಿಕೆಯ ಅಧಿಕಾರಿಗಳು ನಕ್ಷೆ ಅನುಮೋದನೆ ನೀಡಲು ಸಾಧ್ಯವಾಗುತ್ತಿಲ್ಲ.

ಈ ಸಮಸ್ಯೆಯಿಂದ ನಿವಾಸಿಗಳು ಪಾಲಿಕೆ ವಲಯ ಕಚೇರಿ ಮತ್ತು ನಗರಸಭೆ ಕಚೇರಿಗೆ ಅಲೆದು, ಅಲೆದು ಸಾಕಾಗಿದ್ದಾರೆ. ಮತ್ತೊಂದೆಡೆ ಮನೆ ನಿರ್ಮಾಣ ಕಾರ್ಯ ವಿಳಂಬವಾಗುತ್ತಿದ್ದು, ಜೊತೆಗೆ ಬ್ಯಾಂಕ್ ಸಾಲ, ಕಟ್ಟಡ ಕಾಮಗಾರಿ ಇತರೆ ಸರ್ಕಾರಿ ಇಲಾಖೆಗಳ ಅನುಮತಿ ಪ್ರಕ್ರಿಯೆಗಳೂ ಸ್ಥಗಿತಗೊಂಡಿವೆ. ಈ ಸಮಸ್ಯೆ ಸಂಪೂರ್ಣವಾಗಿ ತಾಂತ್ರಿಕ ಹಾಗೂ ಆಡಳಿತಾತ್ಮಕ ಗೊಂದಲದಿಂದ ಉಂಟಾಗಿದ್ದು, ನಿವಾಸಿಗಳು ಅನಗತ್ಯ ಸಂಕಷ್ಟ ಅನುಭವಿಸುವಂತಾಗಿದೆ.



ವಿಜಯನಗರ 3ನೇ ಹಂತದ ಸಿ–ಬ್ಲಾಕ್ ನಿವಾಸಿಗಳು ಪ್ರಾದೇಶಿಕ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಸಮಸ್ಯೆ ಕುರಿತು ವಿಜಯನಗರ 3ನೇ ಹಂತದ ಸಿ–ಬ್ಲಾಕ್ ನಿವಾಸಿಗಳು ಪ್ರಾದೇಶಿಕ ಆಯುಕ್ತರು ಮತ್ತು ನಗರಾಭಿವೃದ್ಧಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು, ಈ ತಾಂತ್ರಿಕ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯುವವರೆಗೆ ಮಧ್ಯಂತರ ಕ್ರಮವಾಗಿ ಮೈಸೂರು ಮಹಾನಗರಪಾಲಿಕೆ ಆಯುಕ್ತರಿಗೆ ಅಗತ್ಯ ನಿರ್ದೇಶನ ನೀಡಿ, ಕಟ್ಟಡ ನಕ್ಷೆಗಳನ್ನು ಕೈಬರಹ ಅಥವಾ ಆಫ್‌ಲೈನ್ ವಿಧಾನದಲ್ಲಿ ಪರಿಶೀಲಿಸಿ ಅನುಮೋದನೆ ನೀಡಲು ಅವಕಾಶ ಕಲ್ಪಿಸಬೇಕು. ಜೊತೆಗೆ ಪಾಲಿಕೆ ಹಾಗೂ ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಗೊಂದಲವನ್ನು ನಿವಾಸಿ ಆನ್‌ಲೈನ್ ವ್ಯವಸ್ಥೆಯನ್ನು ಸರಿಪಡಿಸುವಂತೆ ಮನವಿ ಮಾಡಿದ್ದಾರೆ.

ಈ ಸಂಬಂಧ ಪಾಲಿಕೆ ವಲಯ ಕಚೇರಿ–3ರ ವಲಯ ಆಯುಕ್ತ ಎಂ.ಸಂದೀಪ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಈ ಹಿಂದೆ ವಿಜಯನಗರ 3ನೇ ಹಂತದ ಕೆಲವು ಪ್ರದೇಶವನ್ನು ಹೂಟಗಳ್ಳಿ ನಗರ ಸಭೆ ಸೇರಿಸಿ ಗೆಜೆಟ್ ಮಾಡಲಾಗಿತ್ತು. ಆದರೆ, ಈಗ ಎಲ್ಲವೂ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿದೆ. ಆದರೆ, ಈಗ ಕಟ್ಟಡ ನಕ್ಷೆ ಅನುಮೋದನೆಗಾಗಿ ನಿವಾಸಿಗಳು ಏಕೀಕೃತ ಭೂ ನಿರ್ವಹಣಾ ವ್ಯವಸ್ಥೆ(Unified Land Management System)ಯ ನೂತನ ಸಾಫ್ಟ್‌ವೇರ್ ಮೂಲಕ ಅರ್ಜಿ ಸಲ್ಲಿಸುತ್ತಿದ್ದಾರೆ. ಸಾಫ್ಟ್‌ವೇರ್‌ನಲ್ಲಿ ಲೊಕೇಶನ್ ಆಧರಿಸಿ, ಅರ್ಜಿಯನ್ನು ವರ್ಗೀಕರಿಸುತ್ತಿದೆ. ಇದರಿಂದ ಈ ಹಿಂದೆ ಗೆಜೆಟ್‌ನಂತೆ ವಿಜಯನಗರ 3ನೇ ಹಂತ ಹೂಟಗಳ್ಳಿ ನಗರಸಭೆಗೆ ಒಳಪಡುವುದರಿಂದ ಈ ರೀತಿ ತಾಂತ್ರಿಕ ಸಮಸ್ಯೆ ಉದ್ಭವವಾಗಿದೆ ಎಂದರು.

ಈ ಸಮಸ್ಯೆ ಬಗ್ಗೆ ಈಗಾಗಲೇ ನಿವಾಸಿಗಳು ಪ್ರಾದೇಶಿಕ ಆಯುಕ್ತರು ಮತ್ತು ನಗರಾಭಿವೃದ್ಧಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಮನವಿ ಸಲ್ಲಿಸಿದ್ದಾರೆ. ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಿದೆ. ತಾತ್ಕಾಲಿಕವಾಗಿ ಸಮಸ್ಯೆ ನಿವಾರಣೆಗೆ ಅಧಿಕೃತವಾಗಿ ಮೇಲಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು, ಶಿಕ್ಷಕರ ನಡುವೆ

ತಾಯಿ–ಮಗು ಬಾಂಧವ್ಯವಿರಬೇಕು

ಮಾಜಿ ಶಿಕ್ಷಣ ಸಚಿವ ಎನ್.ಮಹೇಶ್ ಅಭಿಮತ

ಮಂಡ್ಯ, ಜು.2– ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಬಾಂಧವ್ಯ ತಾಯಿ–ಮಗು ರೀತಿ ಇರಬೇಕು. ಆಗಷ್ಟೇ ಮಕ್ಕಳಲ್ಲಿ ಕಲಿಕಾ ಸಾಮರ್ಥ್ಯ ಹೆಚ್ಚಾಗುತ್ತದೆ. ಜೊತೆಗೆ ಶಾಲೆಗಳಲ್ಲಿ ಕ್ರಿಯಾತ್ಮಕ ವಾತಾವರಣ ಸೃಷ್ಟಿ ಮಾಡಬೇಕಾದ ಕೆಲಸ ಆಳುವ ಸರ್ಕಾರದ್ದಾಗಿದೆ ಎಂದು ಮಾಜಿ ಶಿಕ್ಷಣ ಸಚಿವ ಎನ್.ಮಹೇಶ್ ಅಭಿಪ್ರಾಯಪಟ್ಟರು.

ನಗರದ ಗಾಂಧಿ ಭವನದಲ್ಲಿ ಕನ್ನಡ ಸೇನೆ ಸಂಘಟನೆಯಿಂದ ಆಯೋಜಿಸಿದ್ದ ಇಂದಿನ ಶಿಕ್ಷಣದಲ್ಲಿ ದೇಶದ ಪ್ರಗತಿಯ ಒಂದು ಚಿಂತನೆ ವಿಚಾರ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಮನೆ ಹಾಗೂ ಹಾಸ್ಟೆಲ್ ವಾತಾವರಣ ವ್ಯತ್ಯಾಸವನ್ನು ತೆಗೆದು ಹಾಕಿದರೆ ಸಾಧನೆ ಮಾಡುತ್ತಾರೆ. ಖಾಸಗಿ ಶಾಲೆಗಳಲ್ಲಿ ಮಕ್ಕಳು ಒಳಗೆ ಹೋಗುವಾಗ ಒಂದು ರೀತಿ, ಹೊರಗೆ ಬರುವಾಗ ಜೈಲಿನಿಂದ ಹೊರಗೆ ಬಂದ ಹಾಗೆ ಖುಷಿಯಿಂದ ಬರುತ್ತಾರೆ. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳ ಮೇಲೆ ಒತ್ತಡ ಹೇರುತ್ತಾರೆ ಎಂದರು.

ಸರ್ಕಾರ ಡಿಪಿಪಿ, ನಲಿಕಲಿ ಜೊತೆಗೆ ಸಾಕ್ಷರತಾ ಯೋಜನೆ ತಂದಿದೆ. ಶಿಕ್ಷಕರ ಮೇಲೆ ಮಕ್ಕಳ ದೃಷ್ಟಿ ಇರುತ್ತದೆ. ಮಕ್ಕಳಲ್ಲಿ ಚೈತನ್ಯ ಮೂಡಿಸುವ ಕೆಲಸ ಶಿಕ್ಷಕರು ಮಾಡಬೇಕು. ಸರ್ಕಾರಿ ಶಾಲೆಗಳಲ್ಲಿ ನಲಿಕಲಿ ಸಿಸ್ಟಮ್ ಬರಬೇಕು. ಮಕ್ಕಳಿಗೆ ಕ್ರಿಯಾತ್ಮಕ ಶಿಕ್ಷಣ ಕೊಡಬೇಕು ಎಂದು ಹೇಳಿದರು.



ಕಾರ್ಯಕ್ರಮವನ್ನು ಮಾಜಿ ಸಚಿವ ಎನ್.ಮಹೇಶ್ ಉದ್ಘಾಟಿಸಿದರು.

> ರಾಜ್ಯ ಬಿಜೆಪಿಯಲ್ಲಿ ನಾಯಕತ್ವ ಬದಲಾವಣೆ ಇಲ್ಲ. ರಾಜ್ಯಾಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ಅವರೇ ಮುಂದುವರೆಯುತ್ತಾರೆ. ಅಡ್ಡ ಮತದಾನದ ಬಗ್ಗೆ ನಾನು ಮತ್ತು ಸಿ.ಟಿ.ರವಿ ನೇತೃತ್ವದ ತಂಡ ಹೈಕಮಾಂಡ್ ಮತ್ತು ರಾಜ್ಯ ನಾಯಕತ್ವಕ್ಕೆ ವರದಿ ನೀಡಿದ್ದೇವೆ. ಬಜೆಟ್‌ನಲ್ಲಿ ಹಣದ ಕೊರತೆ ನೀಗಿಸಲು ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಪರಿಷ್ಕರಣೆ ಮಾಡುತ್ತಿದೆ. ಈ ಸರ್ಕಾರ 2028ಕ್ಕೆ ಮನೆಗೆ ಹೋಗುವುದು ಗ್ಯಾರಂಟಿ. ರಾಮ ಮಂದಿರ ಹುಂಡಿ ಕಳ್ಳತನ ವಿಚಾರ ನೋವಿನ ಸಂಗತಿಯಾಗಿದೆ. ದೇವರ ಮೇಲೆ ಇದ್ದ ನಂಬಿಕೆಗೆ ಡ್ಯಾಮೇಜ್ ಆಗಿದೆ.
> –ಎನ್.ಮಹೇಶ್, ಮಾಜಿ ಸಚಿವ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ 72 ಸಾವಿರ ಉದ್ಯೋಗ ಘೋಷಿಸಿದ್ದಾರೆ. ಆದರೆ 1 ಕೋಟಿ ಮಂದಿ ಅರ್ಜಿ ಹಾಕುತ್ತಾರೆ. ಸರ್ಕಾರಿ ಉದ್ಯೋಗ ಸೃಷ್ಟಿ 2% ಸಾಧ್ಯ ಅಷ್ಟೇ. ಖಾಸಗಿ ಉದ್ಯೋಗ 10% ಇದೆ. ಇದಕ್ಕೆ ಕಮ್ಯುನಿಕೇಶನ್ಸ್ ಸ್ಕಿಲ್ ಬರಬೇಕು. ಕಂಪ್ಯೂಟರ್ ಜ್ಞಾನ ಬೇಕು. ಶಿಕ್ಷಣ ಪಡೆದು 88% ಜನ ನಿರುದ್ಯೋಗಿಯಾಗಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯೂ ಪ್ರಗತಿಯಾದರೆ ದೇಶ ಪ್ರಗತಿಯಾಗಲಿದೆ ಎಂದರು.

ಸರ್ಕಾರ ಶಿಕ್ಷಣ ಮತ್ತು ಆರೋಗ್ಯ ಸೇವೆ ಉಚಿತವಾಗಿ ಕೊಡಬೇಕು. ಶಿಕ್ಷಣ ವ್ಯವಸ್ಥೆ ಬದಲಾವಣೆಯಾಗಬೇಕು. ಪದವಿ ಪಡೆದ ವಿದ್ಯಾವಂತ ನಿರುದ್ಯೋಗಿಯಾಗಿದ್ದಾನೆ. ಪ್ರತಿಯೊಬ್ಬ ವಿದ್ಯಾವಂತ ಯುವಕ–ಯುವತಿ ಆರ್ಥಿಕವಾಗಿ ಸ್ವಾವಲಂಬಿಯಾಗಲು ಶಿಕ್ಷಣ ವ್ಯವಸ್ಥೆ ಬದಲಾಗಬೇಕು. ಕೇಂದ್ರ ಸರ್ಕಾರ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತಂದಿದೆ. ಸೈದ್ಧಾಂತಿಕ ಕಾರಣದಿಂದ ರಾಜ್ಯ ಸರ್ಕಾರ ಇದನ್ನು ಒಪ್ಪಿಲ್ಲ ರಾಜ್ಯ ಶಿಕ್ಷಣ ನೀತಿ ತರುತ್ತೇವೆ ಎನ್ನುವ ರಾಜ್ಯ ಸರ್ಕಾರ ಈವರೆಗೆ ಜಾರಿಗೆ ತಂದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕನ್ನಡ ಸೇನೆ ಜಿಲ್ಲಾಧ್ಯಕ್ಷ ಮಂಜುನಾಥ್ ಮಾತನಾಡಿ, ಸರ್ಕಾರ ಕನ್ನಡಿಗರಿಗೆ ಉದ್ಯೋಗ ಕೊಡುತ್ತಿಲ್ಲ. ಸರೋಜಿನಿ ಮಹಿಷಿ ವರದಿ ಜಾರಿಯಾಗಿಲ್ಲ. ಕನ್ನಡಿಗರಿಗೆ ಉದ್ಯೋಗ ಕಲ್ಪಿಸುವ ಕೆಲಸ ಮಾಡಬೇಕು. ಅತೀ ಹೆಚ್ಚು ಕನ್ನಡ ಮಾತನಾಡುವ ಜಿಲ್ಲೆ ಮಂಡ್ಯದಲ್ಲಿ ಕನ್ನಡದ ನಾಮಫಲಕವೇ ಇಲ್ಲ. ಜನರು ರೀಲ್ಸ್ ನೋಡುವ ಬದಲು ಸರ್ಕಾರಕ್ಕೆ ಕನ್ನಡದ ಎಚ್ಚರಿಕೆ ಕೊಡಿ ಎಂದು ಒತ್ತಾಯಿಸಿದರು.

ವೇದಿಕೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ್ ಬಿಳಿಮಲೆ, ಕನ್ನಡ ಸೇನೆ ರಾಜ್ಯಾಧ್ಯಕ್ಷ ಕೆ.ಆರ್. ಕುಮಾರ್, ರೈತ ನಾಯಕ ಕುರುಬೂರು ಶಾಂತಕುಮಾರ್, ಕನ್ನಡ ಸೇನೆ ಮುಖಂಡರಾದ ಬೆಟ್ಟಹಳ್ಳಿ ಮಂಜುನಾಥ್, ಮುನಿರಾಜೇಗೌಡ, ಸೌಭಾಗ್ಯ, ಶಿವಲಿಂಗು ಇತರರು ಉಪಸ್ಥಿತರಿದ್ದರು.

ಮುತ್ತತ್ತಿಯಲ್ಲಿ ಮೂಲಸೌಕರ್ಯಕ್ಕೆ ಆಗ್ರಹಿಸಿ ಪ್ರತಿಭಟನೆ



ಮುತ್ತತ್ತಿಯಲ್ಲಿ ಮೂಲ ಸೌಕರ್ಯಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಹಲಗೂರು, ಜು.2– ಹಲಗೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ದಿನದ 24 ಗಂಟೆಯೂ ವೈದ್ಯರ ಸೇವೆ ಕಲ್ಪಿಸಬೇಕು. ಆಸ್ಪತ್ರೆ ಉನ್ನತೀಕರಿಸಬೇಕು. ಮುತ್ತತ್ತಿ ಪ್ರವಾಸಿ ತಾಣದಲ್ಲಿ ಸುರಕ್ಷತಾ ಕ್ರಮಗಳು ಹಾಗೂ ಮೂಲ ಸೌಲಭ್ಯ ಒದಗಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಜನವಾದಿ ಮಹಿಳಾ ಸಂಘಟನೆ ವತಿಯಿಂದ ಹಲಗೂರಿನಲ್ಲಿ ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ ಎನ್.ಎಲ್.ಭರತ್ ರಾಜ್ ಮಾತನಾಡಿ, ಹಲಗೂರು ಹೋಬಳಿ ಸೇರಿದಂತೆ ಸುತ್ತಮುತ್ತಲ ನೂರಾರು ಗ್ರಾಮಗಳ ಸಾವಿರಾರು ಜನರು ಆರೋಗ್ಯ ಸೇವೆಗಾಗಿ ಹಲಗೂರು ಸಾರ್ವಜನಿಕ ಆಸ್ಪತ್ರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಅವಲಂಬಿಸಿದ್ದಾರೆ. ಆದರೆ ಆಸ್ಪತ್ರೆಯಲ್ಲಿ 24 ಗಂಟೆ ವೈದ್ಯರ ಸೇವೆ ಲಭ್ಯವಿಲ್ಲದ ಕಾರಣ ತುರ್ತು ಪರಿಸ್ಥಿತಿಯಲ್ಲಿ ರೋಗಿಗಳು ಮಂಡ್ಯ, ಮಳವಳ್ಳಿ, ಕನಕಪುರ ಹಾಗೂ ಮೈಸೂರು ನಗರಗಳಿಗೆ ತೆರಳಬೇಕಾದ ದುಸ್ಥಿತಿ ಎದುರಿಸುತ್ತಿದ್ದಾರೆ ಎಂದು ತಿಳಿಸಿದರು.

ಮುತ್ತತ್ತಿ ಪ್ರವಾಸಿ ತಾಣ ಹಾಗೂ ರಾಷ್ಟ್ರೀಯ ಹೆದ್ದಾರಿ ಇರುವುದರಿಂದ ದಿನವೂ ಅಪಘಾತಗಳು, ಹೃದಯಾಘಾತ, ಹೆರಿಗೆ ಸೇರಿದಂತೆ ತುರ್ತು ಆರೋಗ್ಯ ಸಮಸ್ಯೆಗಳು ಸಂಭವಿಸುವ ಸಾಧ್ಯತೆ ಇದೆ. ಇಂತಹ ಸಂದರ್ಭದಲ್ಲಿ ವೈದ್ಯರು ಲಭ್ಯವಿಲ್ಲದಿರುವುದು ಜನರ ಜೀವದೊಂದಿಗೆ ಆಟವಾಡಿದಂತಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮೀಣ ಬಡವರು, ಕೃಷಿ ಕಾರ್ಮಿಕರು ಹಾಗೂ ದುರ್ಬಲ ವರ್ಗಗಳ ಜೀವನಾಧಾರವಾಗಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮನರೇಗಾ)ಯನ್ನು ಇನ್ನಷ್ಟು ಬಲಪಡಿಸಬೇಕು. ಪ್ರತಿ ಗ್ರಾಮೀಣ ಕುಟುಂಬಕ್ಕೆ ವರ್ಷಕ್ಕೆ 200 ದಿನ ಉದ್ಯೋಗ ಹಾಗೂ ದಿನಕ್ಕೆ 600 ರೂ. ಕೂಲಿ ನೀಡಬೇಕು. ಜೊತೆಗೆ ಯೋಜನೆಯಲ್ಲಿ ಖಾಸಗೀಕರಣ ಹಾಗೂ ಗುತ್ತಿಗೆ ಪದ್ಧತಿಗಳನ್ನು ಜಾರಿಗೊಳಿಸುವುದರಿಂದ ಕಾರ್ಮಿಕರ ಹಕ್ಕುಗಳಿಗೆ ಧಕ್ಕೆಯಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

ಮುತ್ತತ್ತಿ ಪ್ರವಾಸಿ ತಾಣದಲ್ಲಿ ಪ್ರವಾಸಿಗರ ಸುರಕ್ಷತೆಗಾಗಿ ಸುರಕ್ಷತಾ ಕ್ರಮಗಳು ಇಲ್ಲದಿರುವುದರಿಂದ ಪ್ರತಿ ವರ್ಷ ಅನೇಕರು ನದಿಯಲ್ಲಿ ಮುಳುಗಿ ಸಾವನ್ನಪ್ಪುತ್ತಿದ್ದಾರೆ. ಅಪಾಯದ ಸ್ಥಳಗಳಲ್ಲಿ ಎಚ್ಚರಿಕೆ ಫಲಕಗಳು, ರಕ್ಷಣಾ ಸಿಬ್ಬಂದಿ, ಜೀವ ರಕ್ಷಕ ಸಾಧನಗಳು, ಸಿಸಿಟಿವಿ, ಪ್ರಥಮ ಚಿಕಿತ್ಸೆ ಕೇಂದ್ರ, ಕುಡಿಯುವ ನೀರು, ಶೌಚಾಲಯ, ವಾಹನ ನಿಲುಗಡೆ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಲಾಯಿತು.

ಪ್ರತಿಭಟನೆಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಎಂ.ಇ.ಮಹಾದೇವು, ತಾಲೂಕು ಕಾರ್ಯದರ್ಶಿ ಗುರುಸ್ವಾಮಿ, ಜನವಾದಿ ಮಹಿಳಾ ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿ, ಜಿಲ್ಲಾ ಕಾರ್ಯದರ್ಶಿ ಸುಶೀಲಾ, ಉಪಾಧ್ಯಕ್ಷೆ ಪ್ರಮೀಳಾ, ಎಸ್.ಕೆ.ಶಿವಕುಮಾರ್, ಗಣೇಶ್, ಎ.ಎಲ್.ಶಿವಕುಮಾರ್, ಮಹಾದೇವು, ಪ್ರದೀಪ್, ಸಣ್ಣಶೆಟ್ಟಿ, ಸುನಂದಾ, ಜ್ಯೋತಿ, ಶಾಂಭವಿ, ಮಹಾದೇವಮ್ಮ, ನಾಗೇಶ್ ಸೇರಿದಂತೆ ಹಲವರಿದ್ದರು.

ನೂತನ ನಿರ್ದೇಶಕ ಕೆ.ಬಿ.ನಾಗೇಶ್‌ಗೆ ಸನ್ಮಾನ



ನೂತನ ನಿರ್ದೇಶಕ ಕೆ.ಬಿ.ನಾಗೇಶ್ ಅವರನ್ನು ಕುರುಬಹಳ್ಳಿ ಗ್ರಾಮಸ್ಥರು ಸನ್ಮಾನಿಸಿದರು.

ಕೆ.ಆರ್.ಪೇಟೆ, ಜು.2– ತಾಲೂಕು ಟಿಎಪಿಸಿಎಂಎಸ್ ನೂತನ ನಿರ್ದೇಶಕ ಕೆ.ಬಿ. ನಾಗೇಶ್ ಅವರನ್ನು ಹುಟ್ಟೂರು ಕುರುಬಹಳ್ಳಿ ಗ್ರಾಮಸ್ಥರು ಸನ್ಮಾನಿಸಿದರು.

ಶಾಸಕ ಹೆಚ್.ಟಿ.ಮಂಜು ಮಾತನಾಡಿ, ಕೆ.ಬಿ.ನಾಗೇಶ್ ಅವರು ಟಿಎಪಿಸಿಎಂಎಸ್ ಚುನಾವಣೆಯಲ್ಲಿ ಕೂದಲೆಳೆಯ ಅಂತರದಲ್ಲಿ ಕುತಂತ್ರದಿಂದ ಸೋತಿದ್ದರು. ಈಗ ಓರ್ವ ಅಭ್ಯರ್ಥಿ ಅನರ್ಹತೆಯಿಂದ ತೆರವಾಗಿದ್ದ ಸ್ಥಾನಕ್ಕೆ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರು ಒಮ್ಮತದಿಂದ ನಾಗೇಶ್ ಅವರನ್ನು ಆಯ್ಕೆ ಮಾಡಿದ್ದಾರೆ. ಟಿಎಪಿಸಿಎಂಎಸ್ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ನಿರ್ದೇಶಕರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ನೂತನ ನಿರ್ದೇಶಕ ಕೆ.ಬಿ.ನಾಗೇಶ್ ಮಾತನಾಡಿ, ನನಗೆ ಕೊಟ್ಟಿರುವ ನೂತನ ಜವಾಬ್ದಾರಿಗೆ ಚ್ಯುತಿ ಬಾರದಂತೆ ಎಲ್ಲರ ಸಹಕಾರ ಹಾಗೂ ಶಾಸಕರಿಗೆ ಗೌರವ ತರುವ ಕೆಲಸ ಮಾಡುತ್ತೇನೆ ಎಂದರು.

ಎಸ್‌ಐಆರ್ ಅಭಿಯಾನದಲ್ಲಿ ಗ್ಯಾರಂಟಿ ಸಮಿತಿ ಸದಸ್ಯರು ನೆರವಾಗಿ

ಬೆಂಗಳೂರು, ಜು.2– ರಾಜ್ಯದಲ್ಲಿ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ ಆರಂಭವಾಗಿದ್ದು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರು ತಮ್ಮ ಕ್ಷೇತ್ರಗಳಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಅಭಿಯಾನದಲ್ಲಿ ಸಕ್ರಿಯವಾಗಿ ತೊಡಗಿಕೊಂಡು ಮತದಾರರು ಮತ್ತು ಬಿಎಲ್‌ಎಗಳಿಗೆ ನೆರವಾಗಬೇಕು ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

ನಾಗರಿಕರಲ್ಲಿ ಜಾಗೃತಿ ಮೂಡಿಸುವುದು ಮತ್ತು ಅರ್ಹ ಮತದಾರರು ತಮ್ಮ ವಿವರಗಳನ್ನು ಪರಿಶೀಲಿಸಿ ಅಗತ್ಯವಿದ್ದರೆ ನಮೂನೆಗಳನ್ನು ಭರ್ತಿ ಮಾಡಲು ಸಹಕರಿಸುವುದರ ಜೊತೆಗೆ ಎಸ್‌ಐಆರ್ ಬಗ್ಗೆ ಮತದಾರರಲ್ಲಿ ಅರಿವು ಮೂಡಿಸಬೇಕಿದೆ. ಅವರಿಗೆ ಅಗತ್ಯ ದಾಖಲೆಗಳು ಮತ್ತು ಅರ್ಜಿ ಸಲ್ಲಿಕೆ ಕುರಿತು ಮಾಹಿತಿ ನೀಡುವ ಕಾರ್ಯದಲ್ಲಿ ತೊಡಗಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ರಾಜ್ಯದ ಎಲ್ಲಾ ಜಿಲ್ಲಾ, ತಾಲೂಕು, ವಿಧಾನಸಭಾ ಕ್ಷೇತ್ರ ಹಾಗೂ ವಾರ್ಡ್ ಮಟ್ಟದ ಗ್ಯಾರಂಟಿ ಸಮಿತಿ ಸದಸ್ಯರು ತಮ್ಮ ವ್ಯಾಪ್ತಿಯಲ್ಲಿ ಅರ್ಹ ಮತದಾರರಿಗೆ ಮತದಾರರ ಪಟ್ಟಿ ಪರಿಷ್ಕರಣೆಯ ಮಹತ್ವ ತಿಳಿಸಿ, 18 ವರ್ಷ ಪೂರ್ಣಗೊಂಡ ಯುವಕರು ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಮಾಡಿಸಿಕೊಳ್ಳುವಂತೆ, ಈಗಾಗಲೇ ನೋಂದಾಯಿತರಾಗಿರುವವರು ತಮ್ಮ ಹೆಸರು, ವಿಳಾಸ ಹಾಗೂ ಇತರೆ ವಿವರಗಳನ್ನು ಪರಿಶೀಲಿಸಿ ಅಗತ್ಯವಿದ್ದಲ್ಲಿ ತಿದ್ದುಪಡಿ ಮಾಡಿಸಿಕೊಳ್ಳುವಂತೆ ಅರಿವು ಮೂಡಿಸಬೇಕಿದೆ ಎಂದು ಹೇಳಿದ್ದಾರೆ. ಗ್ಯಾರಂಟಿ ಯೋಜನೆಯ ಫಲಾನುಭವಿಗಳಿಗೆ ಮತದಾರರ ಗುರುತಿನ ಚೀಟಿ ಅತ್ಯವಶ್ಯಕ. ಮತದಾನದ ಗುರುತಿನ ಚೀಟಿ ಹೊಂದಿರದವರಿಗೆ ಗ್ಯಾರಂಟಿ ಯೋಜನೆಗಳ ಪ್ರಯೋಜನ ಸಿಗುವುದಿಲ್ಲ ಎಂದು ಸಿಎಂ ಡಿ.ಕೆ.ಶಿವಕುಮಾರ್ ಈಗಾಗಲೇ ತಿಳಿಸಿದ್ದಾರೆ. ರಾಜ್ಯದ ಪ್ರತಿಯೊಬ್ಬ ಮತದಾರರಿಗೂ ಗ್ಯಾರಂಟಿ ಯೋಜನೆಗಳು ತಲುಪಬೇಕು. ಇದು ಕಾಂಗ್ರೆಸ್ ಸರ್ಕಾರದ ಆಶಯ ಎಂದು ಹೇಳಿದ್ದಾರೆ.

ಹೆಚ್ಚುವರಿ ಹೊಣೆ: ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾಗಿದ್ದ ಎಂ.ಎಸ್.ಸೂರಜ್ ಹೆಗ್ಡೆ ಅಕಾಲಿಕ ನಿಧನದಿಂದ ಅವರು ನಿರ್ವಹಿಸುತ್ತಿದ್ದ ಜವಾಬ್ದಾರಿಗಳನ್ನು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡರಿಗೆ ಹೆಚ್ಚುವರಿ ಹೊಣೆ ವಹಿಸಿ ಸರ್ಕಾರ ಆದೇಶಿಸಿದೆ.

ಗೃಹಜ್ಯೋತಿ ಪರಿಷ್ಕರಣೆ ಕುರಿತು ಅರಿವು ಮೂಡಿಸಿ



ಬೆಂಗಳೂರು: ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಲ್ಲೊಂದಾದ ಗೃಹಜ್ಯೋತಿ ಯೋಜನೆಯ ಫಲಾನುಭವಿಗಳ ಮನೆ ಮನೆ ಭೇಟಿ ಹಾಗೂ ಮಾಹಿತಿ ಸಂಗ್ರಹಣೆ ಕಾರ್ಯ ಆರಂಭಗೊಂಡಿದ್ದು, ಇದರ ಬಗ್ಗೆ ಕೂಡ ಗ್ಯಾರಂಟಿ ಸಮಿತಿ ಸದಸ್ಯರು ಜಾಗೃತಿ ಮೂಡಿಸಬೇಕೆಂದು ದಿನೇಶ್ ಗೂಳಿಗೌಡ ಹೇಳಿದ್ದಾರೆ.

ರಾಜ್ಯ ಸರ್ಕಾರ 200 ಯೂನಿಟ್ ಗಳವರೆಗೆ ಉಚಿತ ವಿದ್ಯುತ್ ನೀಡುತ್ತಿದೆ. ಫಲಾನುಭವಿಗಳು ವಿದ್ಯುತ್ ಖಾತೆ ಸಂಖ್ಯೆ, ಗೃಹ ಜ್ಯೋತಿ ನೋಂದಣಿ ಸಮಯದಲ್ಲಿ ನೀಡಿದ್ದ ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ ಸೇರಿದಂತೆ, ಫಲಾನುಭವಿಯ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ, ವೋಟರ್ ಐಡಿ, ರೇಷನ್ ಕಾರ್ಡ್, ಪ್ಯಾನ್ ಕಾರ್ಡ್ ಬಾಡಿಗೆ / ಭೋಗ್ಯ (ಲೀಸ್) ಕರಾರು ಪತ್ರ (ಅನ್ವಯಿಸಿದಲ್ಲಿ ಮಾತ್ರ) ಹಾಗೂ ವರ್ಗದ ಮಾಹಿತಿಯನ್ನು ಮೊಬೈಲ್ ಆಪ್ ಹಾಗೂ ಮುದ್ರಿತ ಫಾರಂ ಪತ್ರದಲ್ಲಿ ದಾಖಲಿಸುವ ಕಾರ್ಯದಲ್ಲಿ ತೊಡಗಿಕೊಳ್ಳಲಿದ್ದಾರೆ. ಈ ಬಗ್ಗೆ ಫಲಾನುಭವಿಗಳಿಗೆ ತಿಳಿಹೇಳುವ ಕಾರ್ಯ ಸಮಿತಿ ಸದಸ್ಯರಿಂದ ಆಗಬೇಕಿದೆ ಎಂದು ತಿಳಿಸಿದ್ದಾರೆ.

ಒಂದನೇ ಪುಟದಿಂದ

ಪ್ರಮುಖ ಸ್ವಯಂ ಸೇವಕರ ಸಭೆ

ಸದಸ್ಯರು, ಸ್ಥಳೀಯ ಕಾರ್ಯಕರ್ತರೊಂದಿಗೆ ನಿರಂತರ ಸಭೆಗಳನ್ನು ನಡೆಸಲಿದ್ದಾರೆ. ಕುಂದಾನಗರಿ ಬೆಳಗಾವಿಯಲ್ಲಿ ಸಭೆ ಆಯೋಜಿಸಿದ್ದು, ಇದರಲ್ಲಿ ಬಿಜೆಪಿ ರಾಜ್ಯ ನಾಯಕರ್ಯಾರಿಗೂ ಆಹ್ವಾನ ಇಲ್ಲ. ಕರ್ನಾಟಕ ಬಿಜೆಪಿ ನಾಯಕರ ನಡುವಿನ ಭಿನ್ನಾಭಿಪ್ರಾಯಗಳ ಹಿನ್ನೆಲೆಯಲ್ಲಿ ಪಕ್ಷ ಅಧಿಕಾರಕ್ಕೆ ಬರುವ ಆಶಾಭಾವನೆ ಇಲ್ಲದ ಕಾರಣದಿಂದಲೇ ಕಳೆದ ಮೂರು ತಿಂಗಳಿಂದ ಆರ್‌ಎಸ್‌ಎಸ್ ನಿರಂತರ ಸಭೆಗಳನ್ನು ನಡೆಸುತ್ತಿದೆ. ಈ ಮಧ್ಯೆ, ಆರ್‌ಎಸ್‌ಎಸ್ ವಿರುದ್ಧ ಕರ್ನಾಟಕ ಕಾಂಗ್ರೆಸ್ ಸರ್ಕಾರದ ಪ್ರತಿನಿಧಿಗಳು ನಡೆಸುತ್ತಿರುವ ವಾಗ್ದಾಳಿಗೆ ತಕ್ಕ ಉತ್ತರ ನೀಡುವುದೂ ಸಭೆಯ ಕಾರ್ಯಕ್ರಮಗಳ ಉದ್ದೇಶವಾಗಿದೆ.

ಬಿಹಾರ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆರ್‌ಎಸ್‌ಎಸ್ ಇದೀಗ ಕರ್ನಾಟಕವನ್ನು ಗಂಭೀರವಾಗಿ ಪರಿಗಣಿಸಿದೆ. ಜಾತ್ಯಾತೀತವಾಗಿ ಪಕ್ಷವನ್ನು ಅಧಿಕಾರಕ್ಕೆ ತರಬೇಕೆಂಬ ಉದ್ದೇಶದಿಂದ ಮುಂದಿನ ಎರಡು ವರ್ಷಗಳು ಕರ್ನಾಟಕದಾದ್ಯಂತ ಆರ್‌ಎಸ್‌ಎಸ್ ಕಾರ್ಯಕರ್ತರು ಸಮಾಜದ ಕೆಳಹಂತದಲ್ಲಿ ಸಂಘಟನೆಗೆ ಮುಂದಾಗಲಿದ್ದಾರೆ.

ತುಳಿತಕ್ಕೆ ಒಳಗಾಗಿರುವ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರಲ್ಲಿ ಯುವಜನರ ಪಡೆ ರಚಿಸುವುದು ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಈ ಸಿದ್ಧಾಂತದ ಆಧಾರದ ಮೇಲೆ ಕುಂದಾನಗರಿಯಲ್ಲಿ ಸಭೆಗಳು ನಡೆಯಲಿವೆ. ಸಭೆಯ ಎಲ್ಲಾ ದಿನಗಳಲ್ಲೂ ಭಾಗವತ್ ಮತ್ತು ಇತರ ಪ್ರಮುಖರು ಭಾಗವಹಿಸಿ ಮಾರ್ಗದರ್ಶನ ಮಾಡಲಿದ್ದಾರೆ.

ಈ ತಿಂಗಳಿಂದಲೇ ಖಾತೆಗೆ ಜಮೆ!

ನೌಕರರ ಖಾತೆಗೆ ಪರಿಷ್ಕೃತ ವೇತನ ಜಮೆಯಾಗಲಿದೆ. ವೇತನ ಪರಿಷ್ಕರಣೆ 2025ರ ಏಪ್ರಿಲ್ 1ರಿಂದಲೇ ಪೂರ್ವಾನ್ವಯವಾಗುವಂತೆ ಜಾರಿಗೆ ಬಂದಿದೆ.ಈಗಾಗಲೇ ನೌಕರರಿಗೆ ಪಾವತಿಸಬೇಕಿದ್ದ ಹಳೆಯ ವೇತನ ಹಿಂಬಾಕಿಯ ಮೊದಲ ಕಂತಿನ ಹಣವನ್ನು ಸರ್ಕಾರ ಬಿಡುಗಡೆ ಮಾಡಿದೆ. ಈ ಹೆಚ್ಚಳದಿಂದಾಗಿ ರಾಜ್ಯದ ಸುಮಾರು 1.05 ಲಕ್ಷ ಸಾರಿಗೆ ನೌಕರರಿಗೆ ಅನುಕೂಲವಾಗಲಿದ್ದು, ಸರ್ಕಾರಕ್ಕೆ ತಿಂಗಳಿಗೆ ಹೆಚ್ಚುವರಿಯಾಗಿ 72.80 ಕೋಟಿ ರೂ. ವೆಚ್ಚವಾಗಲಿದೆ. ರಾಮಲಿಂಗಾರೆಡ್ಡಿ ಸಾರಿಗೆ ಸಚಿವರಾಗಿದ್ದಾಗ ಸಾರಿಗೆ ನೌಕರರ ವೇತನ ಹೆಚ್ಚಳಕ್ಕೆ ಆದೇಶ ನೀಡಿದ್ದರು.

ನೀರಿನ ವ್ಯವಸ್ಥೆಗೆ 117 ಕೋಟಿ ಬಿಡುಗಡೆ

ನೀರು ಪೂರೈಕೆಗೆ ತೊಂದರೆ ಆಗದಂತೆ ಕ್ರಮ ವಹಿಸಲಾಗಿದೆ ಎಂದರು. ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾದರೆ 24 ಗಂಟೆಗಳ ಒಳಗಾಗಿ ಪರಿಹರಿಸುವಂತೆ ಸೂಚಿಸಲಾಗಿದೆ. ಖಾಸಗಿ ತೆರೆದ ಬಾವಿ, ಬೋರ್‌ವೆಲ್‌ಗಳಿಂದ ನೀರು ಪಡೆದು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗುತ್ತಿದೆ. ತೀರಾ ಅಗತ್ಯಬಿದ್ದ ಸಂದರ್ಭದಲ್ಲಿ ಮಾತ್ರ ಕೊಳವೆ ಬಾವಿ ಕೊರೆಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿಯುತ್ತಿದೆ. ಕಳೆದ 2–3 ದಿನದಿಂದ ಮಳೆ ಆಗುತ್ತಿದ್ದು, ಕೆಲವು ಜಲಾಶಯಗಳಿಗೆ ನೀರು ಬರುತ್ತಿದೆ. ಈ ಸಂಕಷ್ಟದ ಸಮಯದಲ್ಲಿ ಜೀವಜಲವನ್ನು ಹಿತ–ಮಿತವಾಗಿ ಜನರು ಬಳಸಬೇಕು. ಪೋಲು ಮಾಡಬಾರದು ಎಂದು ಮನವಿ ಮಾಡಿದ ಅವರು, ಪಂಚಾಯ್ತಿಗಳು ನೀರು ಸೋರಿಕೆ ಆಗದಂತೆ ಎಚ್ಚರ ವಹಿಸಬೇಕು ಎಂದು ತಿಳಿಸಿದರು.

ವಿಬಿಜಿ ರಾಮ್ ಜಿ: ಮನರೇಗಾದ ಬದಲಾಗಿ ಜಾರಿಗೊಂಡಿರುವ ವಿಬಿಜಿ ರಾಮ್ ಜಿಯ ಬಗ್ಗೆ ಆಕ್ಷೇಪಣೆಯೊಂದಿಗೆ ರಾಜ್ಯ ಸರ್ಕಾರ ನಿನ್ನೆಯಿಂದಲೇ ಜಾರಿಗೆ ತಂದಿದೆ ಎಂದು ಹೇಳಿದರು. ಸಚಿವ ಸಂಪುಟ ಸಭೆಯಲ್ಲಿ ವಿಬಿಜಿ ರಾಮ್ ಜಿಗೆ ರಾಜ್ಯದ ಪಾಲು ಭರಿಸುವ ಬಗ್ಗೆ ಚರ್ಚಿಸಿದ್ದು, ಇದರಿಂದ ರಾಜ್ಯಕ್ಕೆ ಆರ್ಥಿಕ ಹೊರೆ ಬೀಳಲಿದೆ ಆದರೂ ಬಡವರು, ದಲಿತರು, ವಂಚಿತರು, ರೈತರ, ಮಹಿಳೆಯರ ಹಿತ ಕಾಯಲು ಯೋಜನೆ ಜಾರಿಗೆ ನಿರ್ಧರಿಸಲಾಗಿದೆ ಎಂದು ಹೇಳಿದರು.

ಮನ್ರೇಗಾ ಯೋಜನೆ ಜಾರಿಯಲ್ಲಿದ್ದ 20 ವರ್ಷಗಳಲ್ಲಿ 90:10ರ ಅನುಪಾತದಲ್ಲಿ ಯೋಜನೆ ಜಾರಿಯಲ್ಲಿತ್ತು. ಮನ್ರೇಗಾಗೆ ವೆಚ್ಚವಾಗಿರುವ ಒಟ್ಟು 61 ಸಾವಿರ ಕೋಟಿ ರೂ.ಗಳ ಪೈಕಿ ಕೇಂದ್ರ ಸರ್ಕಾರ 56 ಸಾವಿರ ಕೋಟಿಗೂ ಅಧಿಕ ಹಣ ಭರಿಸಿತ್ತು. ರಾಜ್ಯ ಸರ್ಕಾರ 4800 ಕೋಟಿ ರೂ. ಮಾತ್ರ ವೆಚ್ಚ ಮಾಡಿತ್ತು ಎಂದರು.

ಕೇಂದ್ರ ಸರ್ಕಾರ ಈ ವರ್ಷ ರಾಜ್ಯಕ್ಕೆ ವಿಬಿಜಿ ರಾಮ್ ಜಿ ಅಡಿ 5709 ಕೋಟಿ ರೂ. ಹಂಚಿಕೆ ಮಾಡಿದೆ. ರಾಜ್ಯ ಸರ್ಕಾರ ಒಂದೇ ವರ್ಷದಲ್ಲಿ 3806 ಕೋಟಿ ವೆಚ್ಚ ಮಾಡಬೇಕಾಗಿ ಬಂದಿದೆ ಇದು ದೊಡ್ಡ ಹೊರೆಯಾಗಿದೆ. ಹೀಗಾಗಿ 90:10 ಅನುಪಾತವನ್ನೇ ಮುಂದುವರಿಸಲು ಕೇಂದ್ರಕ್ಕೆ ಒತ್ತಾಯಿಸಲಾಗಿದೆ ಎಂದು ತಿಳಿಸಿದರು.

ಇದರ ಜೊತೆಗೆ ಸುಗ್ಗಿಯ ಕಾಲದಲ್ಲಿ ಕೇಂದ್ರ ಸರ್ಕಾರ ವಿಬಿಜಿ ರಾಮ್ ಜಿ ಅಡಿ 60 ದಿನಗಳ ಬಿಡುವು ನೀಡಿದೆ. ಜುಲೈ 1ರಿಂದ ಯೋಜನೆ ಜಾರಿಯಾಗಿದೆ. ಈ 2 ತಿಂಗಳ ಬಿಡುವಿನ ಅವಧಿ ತೆಗೆದರೆ, ಈಗ ಒಟ್ಟು ಉಳಿಯುವುದು ಕೇವಲ 9 ತಿಂಗಳು. ಈ ಅವಧಿಯಲ್ಲಿ ಯಾವುದೇ ರಾಜ್ಯ ತನ್ನ ಪಾಲಿನ ಶೇ.40ರಷ್ಟು ಹಣ ಭರಿಸಲು ಸಾಧ್ಯವಾಗದಿದ್ದರೆ ಕೇಂದ್ರದ ಪಾಲು ಬರುವುದೇ ಇಲ್ಲ. ಇದು ಯೋಜನೆಯ ಮೂಲ ಉದ್ದೇಶವನ್ನೇ ನಾಶ ಮಾಡುತ್ತದೆ ಎಂದರು.

ಕಾಮಗಾರಿ ಸ್ಥಗಿತ; ಪವಿತ್ರ ಕ್ಷೇತ್ರದ ಅವಲಕ್ಷಣಕ್ಕೆ ಭಕ್ತರ ಬೇಸರ



ಆದರೆ, ಪಾರಂಪರಿಕ ಹಾಗೂ ಧಾರ್ಮಿಕ ಹಿನ್ನೆಲೆ ಇರುವ ಚಾಮುಂಡಿಬೆಟ್ಟದ ಪಾರಂಪರಿಕ ಸೌಂದರ್ಯಕ್ಕೆ ಈ ಕಾಮಗಾರಿ ಧಕ್ಕೆ ತರುತ್ತದೆ. ವ್ಯೂ ಪಾಯಿಂಟ್ ನಿರ್ಮಾಣದಿಂದ ದೇವಾಲಯದ ಗೋಪುರದ ಅಸ್ತಿತ್ವಕ್ಕೆ ಹಾನಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸಾದ್ ಯೋಜನೆ ಸ್ಥಗಿತಕ್ಕೆ ಆದೇಶ ನೀಡಬೇಕೆಂದು ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಹೈಕೋರ್ಟ್ ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಈ ಬಗ್ಗೆ ವಾದ–ಪ್ರತಿ ವಾದ ಆಲಿಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರು 'ಪ್ರಸಾದ' ಯೋಜನೆ ತಾತ್ಕಾಲಿಕ ಮಧ್ಯಂತರ ತಡೆ ನೀಡಿದ್ದರು.

ಹೈಕೋರ್ಟ್ ನೀಡಿರುವ ತಾತ್ಕಾಲಿಕ ತಡೆಯಿಂದ ಚಾಮುಂಡಿಬೆಟ್ಟದಲ್ಲಿ ಕೈಗೊಂಡಿದ್ದ ಕಾಮಗಾರಿಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ಇದರಿಂದ ದೇವಸ್ಥಾನದ ಬಳಿ ನಿರ್ಮಿಸುತ್ತಿದ್ದ ಕ್ಯೂ ಮಂಟಪದ ಸುತ್ತ ಕಬ್ಬಿಣದ ಶೀಟ್ ಹಾಗೂ ಗ್ರಿಲ್ ತಡೆಗಟ್ಟೆ ನಿರ್ಮಿಸಿದ್ದು ಇಡೀ ವಾತಾವರಣ ಅವಲಕ್ಷಣದಂತೆ ಕಾಣುತ್ತಿದೆ. ಚಾಮುಂಡಿಬೆಟ್ಟದ ವ್ಯೂ ಪಾಯಿಂಟ್ ಬಳಿಯೂ ಕಬ್ಬಿಣದ ಶೀಟ್ ಹಾಗೂ ಬ್ಯಾರಿಕೇಡ್ ನಿಲ್ಲಿಸಲಾಗಿದೆ.

> ಪ್ರಸಾದ್ ಯೋಜನೆಯ ಕಾಮಗಾರಿ ಸ್ಥಗಿತವಾಗಿರುವ ಕಾರಣ ನಮಗೆ ಸ್ವಲ್ಪ ಮಟ್ಟಿಗೆ ನಷ್ಟವಾಗಲಿದೆ. ಈ ಸಂಬಂಧ ಪ್ರವಾಸೋದ್ಯಮ ಇಲಾಖೆಗೆ ಲೀಗಲ್ ನೋಟಿಸ್ ನೀಡಿದ್ದೇನೆ. ಈಗ ನಡೆದಿರುವಷ್ಟು ಕಾಮಗಾರಿಗೆ ಸರ್ಕಾರದಿಂದ ಹಣ ಬಿಡುಗಡೆಯಾಗುತ್ತದೆ. ಕಾಮಗಾರಿ ಮುಂದುವರೆಸುವ ಬಗ್ಗೆ ನ್ಯಾಯಾಲಯದ ಆದೇಶಕ್ಕೆ ಕಾಯುತ್ತಿದ್ದೇನೆ. ಒಂದು ವೇಳೆ ನ್ಯಾಯಾಲಯ ಅನುಮತಿ ನೀಡಲಿಲ್ಲ ಅಂದರೆ ಟೆಂಡರ್ ರದ್ದುಪಡಿಸಿಕೊಳ್ಳುತ್ತೇನೆ.
> - ಸುಜೇಂದ್ರ ಕುಮಾರ್,
> ಮಾಲೀಕ, ಎಸ್ ಕೆಎಸ್ ಕಾರ್ಕಳ ಇನ್ಫ್ರಾಸ್ಟ್ರಕ್ಚರ್

ಅಲ್ಲಿಯೂ ಪ್ರವಾಸಿಗರು ಹೋಗದಂತೆ ತಡೆಗಟ್ಟೆ ನಿರ್ಮಾಣ ಮಾಡಲಾಗಿದೆ.

ಈ ಮೊದಲು ಇಡೀ ವಾತಾವರಣ ಆಕರ್ಷಕವಾಗಿತ್ತು. ಆದರೆ ಈಗ ಕಾಮಗಾರಿ ಅರ್ಧಕ್ಕೆ ನಿಂತಿರುವುದರಿಂದ ಆ ಸ್ಥಳ ಒಂದು ರೀತಿ ಅಸ್ಥಿಪಂಜರದಂತೆ ಕಾಣುತ್ತಿದೆ. ಪರ ಸ್ಥಳಗಳಿಂದ ಬಂದವರಿಗೆ ಈ ಸ್ಥಳ ಪ್ರಶ್ನಾರ್ಥಕವಾಗಿದೆ.

ತಡೆಯಾಜ್ಞೆ ಮಾಡುವಂತೆ ಸರ್ಕಾರ ನ್ಯಾಯಾಲಯಕ್ಕೆ ಮನವಿ ಮಾಡಿದೆ. ಶೀಘ್ರವೇ ಇದರ ವಿಚಾರಣೆ ಆರಂಭವಾಗಲಿದೆ. ಆ ಸಂದರ್ಭದಲ್ಲಿ ಸರ್ಕಾರದ ಪರ ವಕೀಲರು ಕಾಮಗಾರಿ ಅರ್ಧಕ್ಕೆ ನಿಂತಿರುವುದರಿಂದ ಆಗಿರುವ ಅವ್ಯವಸ್ಥೆಯ ವಸ್ತುಸ್ಥಿತಿ, ಯೋಜನೆಯ ಅಗತ್ಯತೆ ಸೇರಿದಂತೆ ಹಲವು ವಿಚಾರಗಳನ್ನು ಮನವರಿಕೆ ಮಾಡಬೇಕಿದೆ.

ಬಂಡೆ ಕುಸಿತ: ಎಂಟು ಮಂದಿ ಸಾವು

ಧಾವಿಸಿ, ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಿ, ತನಿಖೆ ನಡೆಸುತ್ತಿದ್ದಾರೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಮೃತರ ಕುಟುಂಬಗಳಿಗೆ ಸಂತಾಪ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಸಂತಾಪ: ಕರ್ನಾಟಕದ ಬೆಂಗಳೂರಿನ ಮಾಗಡಿ ರಸ್ತೆ ಬಳಿ ಇರುವ ಎರಡು ಕಲ್ಲು ಕ್ವಾರಿಯಲ್ಲಿ ಬಂಡೆ ಕುಸಿದು ಎಂಟು ಜನ ಮೃತಪಟ್ಟಿದ್ದು, ಜೀವಹಾನಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗುರುವಾರ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ ಮತ್ತು ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕಲ್ಲು ಕ್ವಾರಿಯಲ್ಲಿ ಗುರುವಾರ ಬೃಹತ್ ಗ್ರಾನೈಟ್ ಬಂಡೆ ಕುಸಿದು ಎಂಟು ಕಾರ್ಮಿಕರು ಮೃತಪಟ್ಟಿದ್ದು, ಅವರಲ್ಲಿ ಹೆಚ್ಚಾಗಿ ಬಿಹಾರದ ಮೂಲದವರಾಗಿದ್ದಾರೆ. ಕರ್ನಾಟಕದ ಬೆಂಗಳೂರು ನಗರ ಜಿಲ್ಲೆಯ ಕಲ್ಲು ಕ್ವಾರಿಯಲ್ಲಿ ಸಂಭವಿಸಿದ ಜೀವಹಾನಿಯಿಂದ ದುಃಖಿತಳಾಗಿದ್ದೇನೆ. ಇದು ಅತ್ಯಂತ ನೋವಿನ ಘಟನೆ. ಮೃತರ ಕುಟುಂಬಗಳಿಗೆ ನನ್ನ ಹೃತ್ಪೂರ್ವಕ ಸಂತಾಪಗಳು. ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಮುರ್ಮು ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಧಿಕಾರಿಗಳ ವರದಿ ಬಳಿಕ ಮುಂದಿನ ಕ್ರಮ: ಸಿಎಂ

ನಗರದ ಮಾಗಡಿ ರಸ್ತೆ ಬಳಿಯ ಕಲ್ಲು ಕ್ವಾರಿಯಲ್ಲಿ ಬಂಡೆ ಕುಸಿತದಿಂದ 8 ಮಂದಿ ಮೃತಪಟ್ಟಿರುವ ಘಟನೆ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೊಲೀಸ್ ಅಧಿಕಾರಿಗಳು, ಗಣಿ ಹಾಗೂ ಭೂವಿಜ್ಞಾನ ಇಲಾಖೆ ಅಧಿಕಾರಿಗಳು ದುರಂತ ಸ್ಥಳಕ್ಕೆ ಭೇಟಿ ನೀಡಿದ್ದು, ಸ್ಫೋಟದಿಂದ ದುರಂತ ಸಂಭವಿಸಿಲ್ಲ ಎಂಬ ಮಾಹಿತಿ ಇದೆ, ಕ್ವಾರಿ ಕಾಮಗಾರಿ ಕಾನೂನು ರೀತ್ಯ ನಡೆಯುತ್ತಿರುವ ಕುರಿತು ವರದಿ ಪಡೆದ ನಂತರ ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ಪ್ರದೇಶದಲ್ಲಿ ಕಳೆದ ಬಾರಿ ಸ್ಫೋಟದ ವೇಳೆ ಚಿರತೆ ಸತ್ತ ಘಟನೆ ತನಿಖೆಯಾಗದೆ ಪ್ರಕರಣ ಮುಚ್ಚಿಹಾಕಲಾಗಿತ್ತು ಎಂಬ ಸ್ಥಳೀಯ ಶಾಸಕರ ಆರೋಪ ಕುರಿತು ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಶಾಸಕರು ನಮಗೆ ಮಾಹಿತಿ ನೀಡಿದ್ದು, ಅಧಿಕೃತ ವರದಿ ತರಿಸಿಕೊಂಡ ನಂತರ ಪ್ರತಿಕ್ರಿಯೆ ನೀಡುವುದಾಗಿ ತಿಳಿಸಿದರು. ದುರಂತದಲ್ಲಿ ಎಷ್ಟು ಮಂದಿ ಮೃತಪಟ್ಟಿದ್ದಾರೆ ಎಂಬ ಕುರಿತು ಖಚಿತ ಮಾಹಿತಿ ಬಂದ ನಂತರ ಪರಿಹಾರದ ತೀರ್ಮಾನ ಮಾಡಲಾಗುವುದು, ತರಾತುರಿಯಲ್ಲಿ ಪರಿಹಾರ ಘೋಷಿಸಿ ದಾಕ್ಷಣ ಸತ್ತವರು ಮರಳಿ ಬರುವುದಿಲ್ಲ, ಇದಕ್ಕೆ ಅದರದೇ ಆದ ಪ್ರಕ್ರಿಯೆಗಳಿವೆ.

ಮೃತರ ಸಂತ್ರಸ್ತರಿಗೆ ಪರಿಹಾರ ಖಂಡಿತಾ ನೀಡಲಾಗುವುದು. ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸುವುದು ಬಹಳ ಮುಖ್ಯ ಎಂದರು.

ಕಾರ್ಯಾರಂಭ

ಕಲಬುರಗಿಯಲ್ಲಿ ಜವಳಿ ಪಾರ್ಕ್: ಕೇಂದ್ರ ಮತ್ತು ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ ಕಲಬುರಗಿಯಲ್ಲಿ ಸುಮಾರು 1,700 ಕೋಟಿ ರೂ. ವೆಚ್ಚದಲ್ಲಿ ಬೃಹತ್ ಜವಳಿ ಪಾರ್ಕ್ ಸ್ಥಾಪನೆಗೆ ಅನುಮೋದನೆ ನೀಡಲಾಗಿದೆ. ಇದರಿಂದ ಲಕ್ಷಾಂತರ ಉದ್ಯೋಗ ಸೃಷ್ಟಿಯಾಗಲಿದೆ ಎಂದರು.

ಟ್ರೀ ಪಾರ್ಕ್, ಏರೋ ಪಾರ್ಕ್: ಇನ್ನು ಬೆಂಗಳೂರಿನ ಎನ್‌ಜಿಇಎಫ್ ಆವರಣದಲ್ಲಿ 26.23 ಕೋಟಿ ವೆಚ್ಚದಲ್ಲಿ ಟ್ರೀ ಪಾರ್ಕ್ ನಿರ್ಮಾಣಕ್ಕೆ ಅನುಷ್ಠಾನ ಅನುಮೋದನೆ ನೀಡಲಾಗಿದೆ. ದೇವನಹಳ್ಳಿಯಲ್ಲಿ ಏರೋ ಪಾರ್ಕ್ ನಿರ್ಮಾಣಕ್ಕೆ 30 ಕೋಟಿ ಮಂಜೂರು ಮಾಡಲಾಗಿದೆ ಎಂದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಯಡಿ ವಸತಿ ಶಾಲಾ–ಕಾಲೇಜು (ಮೌಲಾನ ಆಜಾದ್ ಶಾಲೆ)ಗಳ ವಿದ್ಯಾರ್ಥಿಗಳ ಸಮವಸ್ತ್ರ, ಶೂ ಮತ್ತು ಕ್ರೀಡಾ ಸಾಮಗ್ರಿಗಳಿಗೆ 33.06 ಕೋಟಿ ಬಿಡುಗಡೆ ಮಾಡಲಾಗಿದೆ ಎಂದರು.

ಸಂಜೆ ವೇಳೆಗೆ ನಂಜನಗೂಡು ಬಳಿ ದರೋಡೆ!

ಮತ್ತು ಅನಿಲ್ ಅವರನ್ನು ಕಾರಿನಿಂದ ಕೆಳಗೆ ಎಳೆದು ಹಾಕಿ, ಕಾರು ಸಹಿತ, ಅದರಲ್ಲಿದ್ದ ಲಕ್ಷಾಂತರ ಹಣವನ್ನು ದರೋಡೆ ಮಾಡಿಕೊಂಡು ಕ್ಷಣಾರ್ಧದಲ್ಲಿ ಪರಾರಿಯಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದ್ದಾರೆ. ದೂರಿನನ್ವಯ ಪ್ರಕರಣ ದಾಖಲಿಸಿಕೊಂಡು ಖದೀಮರ ಬಂಧನಕ್ಕೆ ಬಲೆ ಬೀಸಿದ್ದಾರೆ.

ಮುಸುಕುಧಾರಿಗಳ ಗುಂಡಿನ ದಾಳಿ: ಬೆಂಗಳೂರಿನಿಂದ ಮೈಸೂರು ಕಡೆಗೆ ಫಾರ್ಮಾ ಸ್ಯೂಟಿಕಲ್ ಸರಕುಗಳನ್ನು ಸಾಗಿಸುತ್ತಿದ್ದ ಟಾಟಾ ಕ್ಯಾಂಟರ್ ಕೋರಿಯರ್ ವಾಹನದ ಮೇಲೆ ಮಂಡ್ಯದ ಅಮರಾವತಿ ಹೋಟೆಲ್ ಸಮೀಪದ ಅಂಡರ್‌ಪಾಸ್ ಬಳಿ ಗುರುವಾರ ಮುಂಜಾನೆ 4.45ರ ಸುಮಾರಿಗೆ ಗುಂಡಿನ ದಾಳಿ ನಡೆದಿದ್ದು, ಅದೃಷ್ಟವಶಾತ್ ಕ್ಯಾಂಟರ್ ಚಾಲಕ, ಮೈಸೂರಿನ ಗೋಕುಲಂ ನಿವಾಸಿ ಶಂಕರ್ ಪಾರಾಗಿದ್ದಾರೆ. ಬೆಂಗಳೂರಿನಿಂದ ಒಬ್ಬರೇ ಕ್ಯಾಂಟರ್ ಚಾಲಿಸಿಕೊಂಡ ಬರುತ್ತಿದ್ದ ಶಂಕರ್, ಅಂಡರ್‌ಬ್ರಿಡ್ಜ್ ಬಳಿ ರಸ್ತೆ ಬದಿ ನಿಂತಿದ್ದ ಟೊಯೊಟಾ ಫಾರ್ಚುನರ್ ಎಸ್‌ಯುವಿ ಕಾರನ್ನು ಗಮನಿಸಿದ್ದಾರೆ. ಅದೇ ವೇಳೆಗೆ ಕಾರಿನಿಂದ ಕೆಳಗಿಳಿದ ಮುಸುಕುಧಾರಿಯೊಬ್ಬ ಕ್ಯಾಂಟರ್ ನಿಲ್ಲಿಸುವಂತೆ ಸನ್ನೆ ಮಾಡಿದ್ದಾನೆ. ಆತನ ಆಕ್ರಮಣಕಾರಿ ವರ್ತನೆಯಿಂದ ಅನುಮಾನಗೊಂಡ ಶಂಕರ್, ವಾಹನ ನಿಲ್ಲಿಸದೆ ವೇಗವಾಗಿ ಮುಂದಕ್ಕೆ ಸಾಗಿದ್ದಾರೆ.

ಕೂಡಲೇ ಮುಸುಕುಧಾರಿ ಕಾರನ್ನೇರಿದ್ದಾನೆ. ಆ ಕಪ್ಪು ಕಾರು ಸುಮಾರು ಅರ್ಧ ಕಿಲೋಮೀಟರ್ ಹಿಂಬಾಲಿಸಿಕೊಂಡು ಬಂದು, ಕ್ಯಾಂಟರ್ ಹಿಂದಿಕ್ಕಿದೆ. ಆ ಕಪ್ಪು ಕಾರಿನಲ್ಲಿದ್ದ ಐವರು ದರೋಡೆಕೋರರು ಕಾರನ್ನು ರಸ್ತೆಗೆ ಅಡ್ಡಲಾಗಿ ನಿಲ್ಲಿಸಿ, ಕ್ಯಾಂಟರ್ ತಡೆಯಲು ಯತ್ನಿಸಿದ್ದಾರೆ. ಇದರಿಂದ ಏಕಾಂಗಿಯಾಗಿದ್ದ ಶಂಕರ್ ಭಯಭೀತರಾಗಿ ಹೇಗೋ ಪಾರಾಗಲು ಮುಂದಾಗಿದ್ದಾರೆ. ಈ ವೇಳೆ ಕಾರಿನಲ್ಲಿದ್ದ ಮುಸುಕುಧಾರಿಯೊಬ್ಬ ಕ್ಯಾಂಟರ್‌ನ ಕ್ಯಾಬಿನ್‌ನತ್ತ ಗುಂಡು ಹಾರಿಸಿದ್ದಾನೆ.

ಈ ವೇಳೆ ಸಮಯಪ್ರಜ್ಞೆಯಿಂದ ಚಾಲಕ ಶಂಕರ್, ಬಲಕ್ಕೆ ಬಾಗಿದ್ದರಿಂದ ಕೂದಲೆಳೆ ಅಂತರದಲ್ಲಿ ಗುಂಡಿನಿಂದ ಪಾರಾಗಿದ್ದಾರೆ. ಆ ಗುಂಡು ವಾಹನದ ಬದಿಯ ಕಿಟಕಿ ಗಾಜಿಗೆ ತಗುಲಿ, ಅದು ಚೂರುಚೂರಾಗಿದೆ. ಅದೇ ಸಮಯದಲ್ಲಿ ಹಿಂದಿನಿಂದ ಎರಡು ವಾಹನಗಳು ಬರುತ್ತಿರುವುದನ್ನು ಗಮನಿಸಿದ ದರೋಡೆಕೋರರ ಗುಂಪು, ದರೋಡೆ ಯತ್ನ ಕೈಬಿಟ್ಟು, ತಮ್ಮ ಎಸ್‌ಯುವಿ ಕಾರಿನಲ್ಲಿ ಮೈಸೂರಿನ ಕಡೆಗೆ ವೇಗವಾಗಿ ಪರಾರಿಯಾಗಿದ್ದಾರೆ.

ಘಟನೆಯಿಂದ ತೀವ್ರ ಆತಂಕಕ್ಕೊಳಗಾಗಿದ್ದ ಶಂಕರ್, ಹಾನಿಗೊಳಗಾದ ಟ್ರಕ್ ಅನ್ನು ಮಂಡ್ಯದಲ್ಲಿರುವ ತಮ್ಮ ಕಂಪನಿಯ ಕಚೇರಿ ಬಳಿ ನಿಲ್ಲಿಸಿ, ವಾಹನದಲ್ಲಿದ್ದ ಸರಕುಗಳನ್ನು ಅದೇ ಕಚೇರಿಯಲ್ಲಿ ಇಳಿಸಿದ ನಂತರ, ಮೈಸೂರಿಗೆ ಪ್ರಯಾಣಿಸಿದ್ದಾರೆ.

ಅಭಿನಂದನೆ....



ವಿಧಾನಪರಿಷತ್‌ಗೆ ಪುನರ್ ಆಯ್ಕೆಯಾಗಿ ಗುರುವಾರ ಪ್ರಮಾಣವಚನ ಸ್ವೀಕರಿಸಿದ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರನ್ನು ಪರಿಷತ್ ಸದಸ್ಯರಾದ ಡಾ. ತಿಮ್ಮಯ್ಯ ಅಭಿನಂದಿಸಿದರು. ಈ ವೇಳೆ ನಾಗರಾಜ ಯಾದವ್ ಇತರರು ಉಪಸ್ಥಿತರಿದ್ದಾರೆ.

ಗ್ರಾಮೀಣ ಪ್ರದೇಶಗಳ ಆಸ್ತಿಗಳಿಗೆ ಇ–ಸ್ವತ್ತು

ಮುಂದಿನ ತಿಂಗಳಿಂದ ಮನೆ ಮನೆಗೆ ಅಭಿಯಾನ ಆರಂಭ!

ಬೆಂಗಳೂರು, ಜು.2– ಗ್ರಾಮೀಣ ಪ್ರದೇಶಗಳ ಆಸ್ತಿಗಳಿಗೆ ಇ–ಸ್ವತ್ತು ಪ್ರಮಾಣಪತ್ರ ನೀಡಿಕೆಯಲ್ಲಿ ಆಗುತ್ತಿರುವ ವಿಳಂಬಕ್ಕೆ ಮುಕ್ತಿ ಹಾಡಲು ರಾಜ್ಯ ಸರ್ಕಾರ ಮುಂದಾಗಿದೆ.

ಹಳ್ಳಿಗಳಲ್ಲಿ ಸಾರ್ವಜನಿಕರು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ನೇರವಾಗಿ ಮನೆ ಮನೆಗೆ ಇ–ಸ್ವತ್ತು ನೀಡುವ ವಿಶೇಷ ಅಭಿಯಾನವನ್ನು ಶೀಘ್ರದಲ್ಲೇ ಆರಂಭಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಪ್ರಸ್ತುತ ಇ–ಸ್ವತ್ತು ವಿತರಣೆ ವ್ಯವಸ್ಥೆಯಲ್ಲಿ ಕೆಲವು ತಾಂತ್ರಿಕ ಅಡಚಣೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಸಾಫ್ಟ್‌ವೇರ್ ಹಾಗೂ ತಾಂತ್ರಿಕ ಸಮಸ್ಯೆಗಳನ್ನು ಗರಿಷ್ಠ ಒಂದು ತಿಂಗಳ ಒಳಗಾಗಿ ಸಂಪೂರ್ಣವಾಗಿ ಬಗೆಹರಿಸಬೇಕು ಎಂದು ಸಚಿವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ತಂತ್ರಾಂಶದ ಎಲ್ಲಾ ಸಮಸ್ಯೆಗಳು ನಿವಾರಣೆಯಾದ ತಕ್ಷಣ, ಅಂದರೆ ಮುಂದಿನ ತಿಂಗಳಿಂದಲೇ ಗ್ರಾಮೀಣ ಭಾಗದ ಪ್ರತಿ ಮನೆಗೆ ಖುದ್ದಾಗಿ ಇ–ಸ್ವತ್ತು ತಲುಪಿಸುವ ಬೃಹತ್ ಯೋಜನೆಯನ್ನು ಹಮ್ಮಿಕೊಳ್ಳಲು ಚಿಂತನೆ ನಡೆಸಲಾಗಿದೆ. ಈ ಕ್ರಮದಿಂದಾಗಿ ಗ್ರಾಮೀಣ ಭಾಗದ ಜನರಿಗೆ ಯಾವುದೇ ವಿಳಂಬವಿಲ್ಲದೆ, ತಮ್ಮ ಆಸ್ತಿ ದಾಖಲಾತಿಗಳು ಕೈಸೇರಲಿವೆ ಎಂದು ಸಚಿವರು ಭರವಸೆ ನೀಡಿದ್ದಾರೆ.

ಮೈಸೂರು ಮಿತ್ರ

ಶಾಲಾ–ಕಾಲೇಜು ವಿದ್ಯಾರ್ಥಿಗಳ ಕರೆದೊಯ್ಯುವ ವಾಹನಗಳ ತಪಾಸಣೆ

ಸಂಚಾರ ನಿಯಮ ಉಲ್ಲಂಘಿಸಿದ 10 ಆಟೋಗಳ ವಿರುದ್ಧ ಪ್ರಕರಣ ದಾಖಲು

ಮೈಸೂರು,ಜು.2(ಪಿಎಂ)–ಶಾಲಾ–ಕಾಲೇಜು ವಿದ್ಯಾರ್ಥಿಗಳನ್ನು ಸಾಗಿಸುವ ವಾಹನಗಳು ಸಂಚಾರ ನಿಯಮಗಳನ್ನು ಪಾಲಿಸುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ನಗರ ಸಂಚಾರ ಪೊಲೀಸರು ಮೈಸೂರು ನಗರದ ವಿವಿಧೆಡೆ ವಿಶೇಷ ತಪಾಸಣೆ ನಡೆಸಿ, 10 ಆಟೋಗಳ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಮೈಸೂರಿನ ವಿ.ವಿ.ಪುರಂ, ಸಿದ್ಧಾರ್ಥ, ಕೃಷ್ಣರಾಜ, ದೇವರಾಜ, ನರಸಿಂಹರಾಜ, ಕುವೆಂಪುನಗರ ಹಾಗೂ ಲಷ್ಕರ್ ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಆಟೋ ರಿಕ್ಷಾ, ಮಿನಿ ಬಸ್, ಬಸ್, ವ್ಯಾನ್, ಓಮ್ನಿ ವ್ಯಾನ್ ಸೇರಿದಂತೆ ಶಾಲಾ ಮಕ್ಕಳನ್ನು ಸಾಗಿಸುತ್ತಿದ್ದ ವಿವಿಧ ವಾಹನಗಳನ್ನು ತಡೆದು ಪರಿಶೀಲನೆ ನಡೆಸಲಾಯಿತು.

ತಪಾಸಣೆ ವೇಳೆ ವಾಹನಗಳಿಗೆ ಅಗತ್ಯವಿರುವ ಪರವಾನಗಿ, ವಿಮೆ, ಸುರಕ್ಷತಾ ಕ್ರಮಗಳ ಅನುಸರಣೆ, ನಿಗದಿತ ಪ್ರಯಾಣಿಕರ ಸಂಖ್ಯೆಯ ಪಾಲನೆ, ಚಾಲಕರ ದಾಖಲೆಗಳು, ಬಾಕಿ ಇರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಹಾಗೂ ಮದ್ಯಪಾನ ಮಾಡಿ ವಾಹನ ಚಲಾಯಿಸುತ್ತಿದ್ದಾರೆಯೇ ಎಂಬ ಅಂಶಗಳನ್ನು ಪರಿಶೀಲನೆ ನಡೆಸಿದರು. ಈ ವೇಳೆ ನಿಗದಿತ ಮಿತಿಗಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ಸಾಗಿಸುತ್ತಿದ್ದ ಸುಮಾರು 10 ಆಟೋರಿಕ್ಷಾಗಳಿಗೆ ದಂಡ ವಿಧಿಸಲಾಯಿತು. ವಾಹನ ಚಾಲಕರು ಕಡ್ಡಾಯವಾಗಿ ವಾಹನದ ದಾಖಲೆಗಳು ಹಾಗೂ ಮಾನ್ಯ ಚಾಲನಾ ಪರವಾನಗಿ (ಡಿಎಲ್) ಹೊಂದಿರಬೇಕು, ವಾಹನಗಳನ್ನು ನಿಯಮಿತವಾಗಿ ನಿರ್ವಹಣೆ ಮಾಡಬೇಕು ಹಾಗೂ ವಾಹನದ ಮುಂಭಾಗ ಮತ್ತು ಹಿಂಭಾಗದಲ್ಲಿ ಚಾಲಕರ ಹೆಸರು, ಸಂಪರ್ಕ ಸಂಖ್ಯೆ ಅಥವಾ ಸಂಬಂಧಿತ ಶಿಕ್ಷಣ ಸಂಸ್ಥೆಯ ಮಾಹಿತಿ ಒಳಗೊಂಡ ಫಲಕವನ್ನು ಅಳವಡಿಸಬೇಕು ಎಂದು ಸಂಚಾರ ಪೊಲೀಸರು ಸೂಚಿಸಿದರು. ಇದರಿಂದ ಸಾರ್ವಜನಿಕರು ನಿಯಮ ಉಲ್ಲಂಘನೆಗಳ ಬಗ್ಗೆ ಸಂಬಂಧಿತ ಅಧಿಕಾರಿಗಳಿಗೆ ಮಾಹಿತಿ ನೀಡಲು ಅನುಕೂಲವಾಗಲಿದೆ ಎಂದು ಸಂಚಾರ ವಿಭಾಗದ ಎಸಿಪಿ ಶಿವಶಂಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಂಚಾರ ನಿಯಮಗಳನ್ನು ಉಲ್ಲಂಘಿಸುವ ಶಾಲಾ ವಾಹನಗಳ ವಿರುದ್ಧ ಮುಂದಿನ ದಿನಗಳಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಂಚಾರ ಪೊಲೀಸರು ಎಚ್ಚರಿಕೆ ನೀಡಿದರು.


ಶಾಲಾ–ಕಾಲೇಜು ವಿದ್ಯಾರ್ಥಿಗಳನ್ನು ಕರೆದೊಯ್ಯುವ ವಾಹನಗಳನ್ನು ನಗರ ಸಂಚಾರ ಪೊಲೀಸರು ಮೈಸೂರು ನಗರದ ಹಲವೆಡೆ ತಪಾಸಣೆ ನಡೆಸಿದರು.

ಮೈಸೂರಲ್ಲಿ ಅಕ್ರಮ ವಿದೇಶಿ ಪ್ರಜೆಗಳ ವಾಸ

ಅಖಿಲ ಭಾರತ ಹಿಂದೂ ಮಹಾಸಭಾ ವೇದಿಕೆ ಪ್ರತಿಭಟನೆ



ಮೈಸೂರು ನಗರದಲ್ಲಿರುವ ಅಕ್ರಮ ವಲಸಿಗರ ಪರಿಶೀಲಿಸುವಂತೆ ಆಗ್ರಹಿಸಿ ಗುರುವಾರ ಅಖಿಲ ಭಾರತ ಹಿಂದೂ ಮಹಾಸಭಾ ವೇದಿಕೆ ವತಿಯಿಂದ ಗಾಂಧಿವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜು.2(ಜಿಎ)–ಮೈಸೂರು ನಗರ ಹಾಗೂ ಸುತ್ತಮುತ್ತಲಿನ ಕೆಲವು ಪ್ರದೇಶಗಳಲ್ಲಿ ಸೂಕ್ತ ದಾಖಲೆಗಳಿಲ್ಲದೆ ಕೆಲ ವಿದೇಶಿ ಪ್ರಜೆಗಳು ಅಕ್ರಮವಾಗಿ ನೆಲೆಸಿರಬಹುದು ಎಂಬ ಮಾಹಿತಿ ಮತ್ತು ಸಾರ್ವಜನಿಕರಲ್ಲಿ ವ್ಯಕ್ತವಾಗುತ್ತಿರುವ ಆತಂಕದ ಹಿನ್ನೆಲೆಯಲ್ಲಿ ಸಮಗ್ರ ಪರಿಶೀಲನೆ ನಡೆಸುವಂತೆ ಒತ್ತಾಯಿಸಿ ಅಖಿಲ ಭಾರತ ಹಿಂದೂ ಮಹಾಸಭಾ ವೇದಿಕೆ ವತಿಯಿಂದ ಗುರುವಾರ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಸಾಂಸ್ಕೃತಿಕ ಮತ್ತು ಐತಿಹಾಸಿಕ ಸ್ಥಳವಾಗಿರುವ ಹಿನ್ನೆಲೆಯಲ್ಲಿ ನಗರದ ಶಾಂತಿ, ಭದ್ರತೆ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವುದು ಅತ್ಯಂತ ಮಹತ್ವದ್ದಾಗಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿರುವ ಆತಂಕಗಳನ್ನು ದೂರಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ವಾಸ್ತವಾಂಶ ಪರಿಶೀಲಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು.

ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಮನವಿ ಸಲ್ಲಿಸಿ, ಶಂಕಿತ ಪ್ರದೇಶಗಳಲ್ಲಿ ಸಮಗ್ರ ಗುರುತಿನ ಪರಿಶೀಲನೆ (ವೆರಿಫಿಕೇಶನ್ ಡ್ರೈವ್) ನಡೆಸಬೇಕು. ವಾಸ್ತವ್ಯ ಹಾಗೂ ಉದ್ಯೋಗ ನೀಡಿರುವ ಸ್ಥಳಗಳ ದಾಖಲೆಗಳನ್ನು ಕಾನೂನುಬದ್ಧವಾಗಿ ಪರಿಶೀಲಿಸಬೇಕು. ಪರಿಶೀಲನೆಯ ಬಳಿಕ ಯಾರಾದರೂ ಅಕ್ರಮವಾಗಿ ಭಾರತದಲ್ಲಿ ನೆಲೆಸಿರುವುದು ದೃಢಪಟ್ಟಲ್ಲಿ ಅನ್ವಯಿಸುವ ಕಾನೂನುಗಳ ಪ್ರಕಾರ ಅಗತ್ಯ ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಕೈಗೊಂಡಿರುವ ಕ್ರಮಗಳ ಕುರಿತು ಸಾರ್ವಜನಿಕರಿಗೆ ಪಾರದರ್ಶಕ ಮಾಹಿತಿ ನೀಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ಮನೋಜ್ ಹಾಲಂಗಲ್, ವಸಿಷ್ಠದೇವ ಸ್ವಾಮಿ, ಭಜರಂಗಿ ಉಮೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ, ರಾಜ್ಯ ಸಂಘಟನಾ ಕಾರ್ಯದರ್ಶಿ ಮಹದೇವಸ್ವಾಮಿ, ಗಿರೀಶ್ ಶಿವಾರ್ಚಕ ಸೇರಿದಂತೆ ಮಹಾಸಭಾದ ಸದಸ್ಯರು ಪಾಲ್ಗೊಂಡಿದ್ದರು.

ಪರಿಸರಕ್ಕಾಗಿ ನಾವು ಸಂಘಟನೆ ನೇತೃತ್ವದಲ್ಲಿ ನಡೆದ ಸಭೆಯಲ್ಲಿ

ಮೈಸೂರು ದಸರಾದಲ್ಲಿ ಕಂಬಳ ಆಯೋಜನೆಗೆ ತೀವ್ರ ವಿರೋಧ; ಶೀಘ್ರದಲ್ಲೇ ಪ್ರತಿಭಟನೆಗೆ ನಿರ್ಧಾರ

● ಹೋರಾಟದ ರೂಪುರೇಷೆಗಾಗಿ ಕ್ರಿಯಾ ಸಮಿತಿ ರಚಿಸಲು ತೀರ್ಮಾನ ● ಮರಗಳ ಹನನದೊಂದಿಗೆ ಕೋಟ್ಯಾಂತರ ರೂ. ವೆಚ್ಚ ಮಾಡಲು ಹೊರಟಿರುವುದಕ್ಕೆ ಆಕ್ರೋಶ


ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸಭೆ ನಡೆಯಿತು.

> ಕಂಬಳವನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಬೇಕಿದ್ದರೆ ಹೋಗಿ ನೋಡಬಹುದು. ಈ ಕ್ರೀಡೆಯು ಅಲ್ಲಿಗೆಯೇ ಸೂಕ್ತವಾದ ಜಾನಪದ ಕ್ರೀಡೆ. ಮೈಸೂರು ದಸರಾದಲ್ಲಿ ಆಯೋಜನೆ ಮಾಡಬೇಕೆಂಬ ಸಾಹಸ ಕೈಬಿಡಬೇಕು.
> -ಡಾ.ಎನ್.ಎಸ್.ರಂಗರಾಜು, ಪಾರಂಪರಿಕ ತಜ್ಞರು.

> ಅಭಿಪ್ರಾಯ ಸಂಗ್ರಹಿಸಿ ಕ್ರಿಯಾ ಯೋಜನೆ ಸಿದ್ಧಪಡಿಸಬೇಕು. ಅಲ್ಲದೆ, ನಮ್ಮ ಆಕ್ಷೇಪಣೆಗಳನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಬೇಕು.
> -ಸುಧೀರ್ ಒಂಬತ್ಕೆರೆ, ನಿವೃತ್ತ ಮೇಜರ್ ಜನರಲ್

> ಯಾರು ಕಂಬಳವನ್ನು ವಿರೋಧ ಮಾಡುತ್ತಿಲ್ಲ. ಆ ನೆಲದಲ್ಲಿ ಉತ್ತೇಜನ ನೀಡಲಿ. ಆದರೆ ಮೈಸೂರು ದಸರಾಗೆ ತರುವುದು ಸೂಕ್ತವಲ್ಲ. ಈ ಸಂಬಂಧ ವಿರೋಧ ವ್ಯಕ್ತವಾಗುತ್ತಿರುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ಕಾರ್ಯಕ್ರಮವಾದರೂ ಜನರ ಅಭಿಪ್ರಾಯ ಪಡೆಯಬೇಕು. ಬರ ಎದುರಾಗುತ್ತಿರುವ ಹಿನ್ನೆಲೆಯಲ್ಲಿ ದಸರಾವನ್ನೇ ಸರಳವಾಗಿ ಮಾಡಲಿ.
> -ಬಡಗಲಪುರ ನಾಗೇಂದ್ರ, ರಾಜ್ಯಾಧ್ಯಕ್ಷರು, ರೈತ ಸಂಘ.

ಮೈಸೂರು, ಜು.2(ಪಿಎಂ)– ಮೈಸೂರು ದಸರಾದಲ್ಲಿ ಕಂಬಳ ಆಯೋಜನೆ ಮಾಡಬೇಕೆಂದು ಉದ್ದೇಶಿಸಿರುವುದರ ವಿರುದ್ಧ ವಿವಿಧ ಸಂಘಟನೆಗಳ ಮುಖಂಡರಿಂದ ತೀವ್ರ ಆಕ್ಷೇಪ ವ್ಯಕ್ತವಾಯಿತು. ಮರಗಳ ಹನನದೊಂದಿಗೆ ಕೋಟ್ಯಾಂತರ ರೂ. ವೆಚ್ಚದಲ್ಲಿ ಕಂಬಳ ಆಯೋಜನೆ ಸೂಕ್ತವಲ್ಲ. ದಸರಾದಲ್ಲಿ ಇದರ ಆಯೋ ಜನೆ ಕೈಬಿಡಬೇಕೆಂದು ಹೋರಾಟ ನಡೆಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಪರಿಸರಕ್ಕಾಗಿ ನಾವು ಸಂಘಟನೆ ನೇತೃತ್ವದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ವಿವಿಧ ಸಂಘಟನೆ ಮುಖಂಡರು ದಸರಾದಲ್ಲಿ ಕಂಬಳ ಆಯೋಜನೆ ಉದ್ದೇಶದಿಂದ ಹಿಂದೆ ಸರಿಯುವಂತೆ ಜಿಲ್ಲಾಡಳಿತವನ್ನು ಒತ್ತಾಯಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಸಭೆಯಲ್ಲಿ ಹಾಜರಿದ್ದ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡ ಕ್ರಿಯಾ ಸಮಿತಿ ರಚಿಸಿ ಹೋರಾಟಕ್ಕೆ ಸಜ್ಜುಗೊಳ್ಳಲೂ ನಿರ್ಧಾರ ಕೈಗೊಳ್ಳಲಾಯಿತು. ಅಲ್ಲದೆ, ಕಂಬಳ ಆಯೋಜನೆಗೆ ಆಯ್ಕೆ ಮಾಡಿರುವ ಸಾತಹಳ್ಳಿ ವಿಟಿಯು ಕಾಲೇಜು ಸಮೀಪದ ಸ್ಥಳದಲ್ಲಿ ಶೀಘ್ರದಲ್ಲಿ ಪ್ರತಿಭಟನೆ ನಡೆಸಲೂ ನಿರ್ಣಯಿಸಲಾಯಿತು.

ಹಿರಿಯ ಸಾಹಿತಿ ಹೊರೆಯಾಲ ದೊರೆಸ್ವಾಮಿ ಮಾತನಾಡಿ, ಮಳೆ ಇಲ್ಲದೆ ಬರ ಎದುರಾಗುವ ಸಾಧ್ಯತೆ ಕಂಡುಬರುತ್ತಿದೆ. ಹಾಗಾಗಿ ಈ ಬಾರಿಯ ದಸರಾವನ್ನು ಕೇವಲ ಸಾಂಕೇತಿಕವಾಗಿ ಆಚರಿಸುವುದೇ ಸೂಕ್ತ ದಸರಾ ನಡೆಸದ ಉದಾಹರಣೆಗಳೂ ಇವೆ ಕಂಬಳ ಒಂದು ಕ್ರೀಡೆಯಾಗಿದ್ದು, ಅದೇನೂ ಜನಪದ ಕ್ರೀಡೆಯಲ್ಲ. ಮೈಸೂರಿನಲ್ಲಿ ಪರಿಸರ ನಾಶ ಮಾಡಿ ಅದನ್ನು ನಡೆಸುವ ಅಗತ್ಯವೂ ಏನಿಲ್ಲ ಎಂದು ತಿಳಿಸಿದರು.

ಎಂಜಿಪಿ ಭಾನು ಪ್ರಶಾಂತ್ ಮಾತನಾಡಿ, ದಸರಾ ಒಂದು ಪರಂಪರೆ. ಆದರೆ ಈಗ ಅದನ್ನು ಹಂತ ಹಂತವಾಗಿ ವಾಣಿಜ್ಯೀಕರಣ ಮಾಡಲಾಗುತ್ತಿದೆ. ಮುಂದೆ ಇಲ್ಲಿ ಜಲ್ಲಿಕಟ್ಟು ಸಹ ಮಾಡುತ್ತೇವೆ ಎನ್ನಬಹುದು. ಪರಂಪರೆ ಉಳಿಸಲು ಆದ್ಯತೆ ನೀಡಬೇಕೇ ಹೊರತು ಈ ರೀತಿಯ ವಾಣಿಜ್ಯೀಕರಣ ಸರಿಯಲ್ಲ ಎಂದರು.

ಮುಖಂಡರಾದ ಲೀಲಾ ಶಿವಕುಮಾರ್ ಮಾತನಾಡಿ, ದಕ್ಷಿಣ ಕನ್ನಡ ಜಿಲ್ಲೆಯು ಸಮುದ್ರದ ತಾಣವಾಗಿದ್ದು, ಕಂಬಳವನ್ನು ಅಲ್ಲಿ ಮಾಡುವುದೇ ಸೂಕ್ತ ಎಂದರು.

ಮುಖಂಡ ರವಿ ಮಾತನಾಡಿ, 200 ಕೋಣಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಇಲ್ಲಿಗೆ ತರುವುದು ಸರಿಯಲ್ಲ. ಕಂಬಳಕ್ಕೆ ತನ್ನದೇ ಆದ ಭೌಗೋಳಿಕ ಅಸ್ಮಿತೆ ಇದೆ. ಎಲ್ಲಡೆ ಅದನ್ನು ಮಾಡಲು ಹೊರಟರೆ ಅದರ ಅಸ್ಮಿತೆಗೂ ಧಕ್ಕೆ ಉಂಟಾಗಲಿದೆ ಎಂದರು.

ನಿವೃತ್ತ ಅಧಿಕಾರಿ ಮ.ಗು.ಸದಾನಂದಯ್ಯ ಮಾತನಾಡಿ, ಸಾಂಸ್ಕೃತಿಕ ವಿನಿಮಯ ಒಳ್ಳೆಯದೇ. ಆದರೆ ಕೆಲವನ್ನು ಆಯಾಯ ಪ್ರದೇಶದ ಭೌಗೋಳಿಕ ಹಿನ್ನೆಲೆಯಲ್ಲಿ ಅವುಗಳನ್ನು ಮತ್ತೊಂದು ಪ್ರದೇಶದಲ್ಲಿ ಮಾಡುವುದು ಸೂಕ್ತವಲ್ಲ. ಈ ಕಾರಣದಿಂದ ಕಂಬಳ ಇಲ್ಲಿಗೆ ಸೂಕ್ತವಲ್ಲ. ಅಲ್ಲದೆ, ದಸರಾದಲ್ಲಿ ಕಾರ್ಯಕ್ರಮಗಳು ಹೆಚ್ಚಾದಂತೆ ಮೂಲತನ ಹಾಗೂ ಮೌಲ್ಯ ಕುಸಿಯುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪಾರಂಪರಿಕ ತಜ್ಞ ಡಾ.ಎನ್.ಎಸ್. ರಂಗರಾಜು, ಟೀಂ ಮೈಸೂರು ತಂಡದ ಗೋಕುಲ್ ಗೋವರ್ಧನ್, ವಕೀಲ ಅನಂತರಾಜು, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ರೈತ ಮುಖಂಡ ಮಂಜು ಕಿರಣ್, ಪರಿಸರವಾದಿ ಭಾನು ಮೋಹನ್, ಪರಿಸರಕ್ಕಾಗಿ ನಾವು ಸಂಘಟನೆ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ, ನಿವೃತ್ತ ಮೇಜರ್ ಜನರಲ್ ಸುಧೀರ್ ಒಂಬತ್ಕೆರೆ, ಶಿಕ್ಷಣ ತಜ್ಞ ಪ್ರೊಫೆಸರ್ ನಬಿಜಾನ್, ರೈತ ಸಂಘದ ಮೈಸೂರು ವಿಭಾಗದ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಕನ್ನಡ ಕ್ರಿಯಾ ಸಮಿತಿಯ ಸಿದ್ದೇಗೌಡ, ಕನ್ನಡ ಪರ ಹೋರಾಟಗಾರ ಶ್ರೀನಿವಾಸಮಿತ್ರ, ಪರಿಸರಕ್ಕಾಗಿ ನಾವು ಸಂಘಟನೆಯ ಲೀಲಾ ಶಿವಕುಮಾರ್, ಪ್ರಭಾ ನಂದೀಶ್, ಅಂಜನಾ, ಪ್ರಭಾ, ಸ್ವಪ್ನ, ಗಾಯತ್ರಿ, ಸುಮಲತಾ, ಗುರುಸ್ವಾಮಿ, ಅಕ್ಬರ್, ಬಂಗಾರ ನಾಯಕ, ಗಣೇಶ್, ಓಂ ಶಿವಚರಣ್, ಶೈಲಜೇಶ್, ಪ್ರಗತಿಪರ ಹೋರಾಟಗಾರ ಉಗ್ರನರಸಿಂಹೇಗೌಡ, ವಕೀಲರಾದ ಐಶ್ವರ್ಯ, ಕೃಷ್ಣ, ಉಮೇಶ್ ಗೌಡ, ರಾಮು, ಪ್ರಭಾಕರ್ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ನಾಳೆ ಲಕ್ಷ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ


ಮೈಸೂರು, ಜು.2–ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯಾಂಗ ಇಲಾಖೆ, ಅರಣ್ಯ ಇಲಾಖೆ, ವಕೀಲರ ಸಂಘ, Heartfulness Institute, Mysuru, ತೋಟಗಾರಿಕಾ ಮಹಾವಿದ್ಯಾಲಯ, ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ಒಂದು ಲಕ್ಷ ಸಸಿ ನೆಡುವ ಕಾರ್ಯಕ್ರಮದ ಚಾಲನೆಯನ್ನು (ಒಂದು ಮರ ನೂರಾರು ಉಸಿರು) ಜು.4ರಂದು ಬೆಳಿಗ್ಗೆ 8:30 ಗಂಟೆಗೆ ಇಲವಾಲದ ಯಲಚನಹಳ್ಳಿ ತೋಟಗಾರಿಕಾ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದೆ. ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ, ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿವಿ ಉಪಕುಲಪತಿ ಡಾ.ವಿಷ್ಣುವರ್ಧನ, ಡಿಸಿಎಫ್ ಪರಮೇಶ, ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, Regional Felicitator, Heartfulness Institute ಕೆ.ಮಧುಸೂಧನ್, ತೋಟಗಾರಿಕಾ ವಿದ್ಯಾಲಯ ಡೀನ್ ಚಂದ್ರಶೇಖರ್ ಹಂಚಿನಮನಿ ಉಪಸ್ಥಿತರಿರಲಿದ್ದಾರೆ.

ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ವೈದ್ಯರ ದಿನಾಚರಣೆ


ಮೈಸೂರಿನ ಬಿ.ಎನ್ ರಸ್ತೆಯಲ್ಲಿರುವ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್, ವಿವಿಧ ಆಸ್ಪತ್ರೆಗಳ ವೈದ್ಯರನ್ನು ಸನ್ಮಾನಿಸುವ ಮೂಲಕ ವೈದ್ಯರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಡಾ.ಯೋಗೀಶ್ ಆರ್., ಡಾ.ಅಸ್ಮಾ ಫರ್ಹಾ, ಡಾ.ಸುಗುಣ ಶಾಂತಿ, ಡಾ.ಇಫ್ತೆಖರ್ ಅಹ್ಮದ್ ಮತ್ತು ಡಾ.ಸೈಯದ್ ಸಕ್ಲೈನ್ ಮತ್ತು ಡೆಪ್ಯೂಟಿ ಸ್ಟೋರ್ ಹೆಡ್ ದಯಾನಂದ್, ಅಸಿಸ್ಟೆಂಟ್ ಸ್ಟೋರ್ ಹೆಡ್ ಮುಹಮ್ಮದ್ ಅನ್ಸಾಬ್, ಅರ್ಷದ್ ಹಾಜರಿದ್ದರು.

ಇಂದು, ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ಸಿಲ್ಕ್ ಫ್ಯಾಕ್ಟರಿ ಫೀಡರ್ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಕಾಮಗಾರಿ ನಿಮಿತ್ತ ಜುಲೈ 3 ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಸಿಲ್ಕ್ ಫ್ಯಾಕ್ಟರಿ ವೃತ್ತ, ಚಾಮುಂಡಿಪುರಂ ವೃತ್ತ, ಫೈವ್ ಲೈಟ್ ವೃತ್ತ, ವಿದ್ಯಾರಣ್ಯಪುರಂ ಅಂಚೆ ಕಚೇರಿ, ಎನ್‌ಐಇ ಕಾಲೇಜು ಮುಂಭಾಗ, ಕಲ್ಯಾಣಿ ಮೋಟಾರ್ಸ್ ರಸ್ತೆ, ರಾಮಕೃಷ್ಣ ಆಸ್ಪತ್ರೆ, ಸ್ನೇಕ್ ಪಾರ್ಕ್, ಮಹಾಲಕ್ಷ್ಮಿ ಸ್ವೀಟ್ಸ್, ವಿದ್ಯಾರಣ್ಯಪುರಂ ಹಾಗೂ ಸುತ್ತ–ಮುತ್ತ. ರಾಮಾನುಜ ಫೀಡರ್ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಕಾಮಗಾರಿ ನಿಮಿತ್ತ ಜು.4ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ರಾಮಾನುಜ ರಸ್ತೆ 1–9ನೇ ಕ್ರಾಸ್, ಹೊಸ ಬಂಡಿಕೇರಿ, ಮೇದರಕೇರಿ, ಚಾಮುಂಡಿಪುರಂ ವೃತ್ತ, ಸಂತಮೇರಿಸ್ ಸ್ಕೂಲ್ ಹತ್ತಿರ ಹಾಗೂ ಸುತ್ತ–ಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.



ಇಂದಿನಿಂದ ಮೈಸೂರಿನ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಗುಜರಾತ್ ಹ್ಯಾಂಡಿಕ್ರಾಫ್ಟ್ ಉತ್ಸವ

ಮೈಸೂರು, ಜು.2(ಎಂಟಿವೈ)– ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿನ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಜು.3ರಿಂದ 12ರವರೆಗೆ ಗುಜರಾತ್ ಹ್ಯಾಂಡಿಕ್ರಾಫ್ಟ್ ಉತ್ಸವ ಆಯೋಜಿಸಲಾಗಿದೆ ಎಂದು ಇಂಡೆಕ್ಸ್–ಸಿ ಗುಜರಾತ್‌ನ ವ್ಯವಸ್ಥಾಪಕ ಸ್ನೇಹಲ್ ಮಕ್ವಾನ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಜನತೆಗೆ ಗುಜರಾತ್‌ನಲ್ಲಿನ ಕರಕುಶಲ ವಸ್ತುಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಹ್ಯಾಂಡಿಕ್ರಾಫ್ಟ್ ಉತ್ಸವ ನಡೆಸಲಾಗುತ್ತಿದೆ. ಜು.3ರಂದು ಸಂಜೆ 4ಕ್ಕೆ ಜವಳಿ ಅಭಿವೃದ್ಧಿ ಆಯುಕ್ತ ಎ.ಬಿ.ಬಸವರಾಜು ಮೇಳಕ್ಕೆ ಚಾಲನೆ ನೀಡಲಿದ್ದಾರೆ. ಗುಜರಾತ್‌ನ ಇಂಡೆಕ್ಸ್–ಸಿ ವ್ಯವಸ್ಥಾಪಕ ನಿರ್ದೇಶಕ ಡಾ.ಸಂಜಯ್ ಜೋಷಿ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕನ್ನಡ–ಸಂಸ್ಕೃತಿ ಇಲಾಖೆ ನಿರ್ದೇಶಕ ಎ.ಬಿ.ಬಸವರಾಜು, ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಹ್ಯಾಂಡಿಕ್ರಾಫ್ಟ್ ಉತ್ಸವವು ಜು.12ರವರೆಗೆ ಪ್ರತಿದಿನ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ಸಾರ್ವಜನಿಕರು ಉಚಿತ ವೀಕ್ಷಿಸಬಹುದಾಗಿದೆ. ಈ ಮೇಳದಲ್ಲಿ ಗುಜರಾತ್‌ನ ವಿವಿಧ ಭಾಗಗಳಿಂದ ಆಗಮಿಸಿರುವ 100ಕ್ಕೂ ಹೆಚ್ಚು ನಿಪುಣ ಕರಕುಶಲಗಾರರು ಮತ್ತು ಕೈಮಗ್ಗ ನೇಕಾರರು ಪಾಲ್ಗೊಳ್ಳಲಿದ್ದಾರೆ. ಸಾಂಪ್ರದಾಯಿಕ ಕಸೂತಿ, ಮಿರರ್ ವರ್ಕ್, ಜರಿ ಜರ್ದೋಸಿ, ಕಲಾಕೃತಿಗಳು, ಮಣಿಗಳ ಆಭರಣಗಳು, ಟೈ–ಡೈ ವಸ್ತ್ರಗಳು, ಚರ್ಮದ ಕರಕುಶಲ ಉತ್ಪನ್ನಗಳು, ಅಪ್ಲಿಕ್ ಕಲಾಕೃತಿಗಳು, ಬಿದಿರು ಹಾಗೂ ಬೆತ್ತದ ಉತ್ಪನ್ನಗಳು, ಮರ ಮತ್ತು ಲೋಹದ ಕರಕುಶಲ ವಸ್ತುಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕಿಡಲಾಗಿದೆ ಎಂದರು.

ಅಲ್ಲದೆ, ಕುಚ್ಚಿ ಕಸೂತಿ, ಅಜ್ರಕ್ ಬ್ಲಾಕ್ ಪ್ರಿಂಟಿಂಗ್, ಬಂಧೇಜ್, ಶಾಲುಗಳು ಹಾಗೂ ಇತರ ಪರಂಪರೆಯ ಕರಕುಶಲ ವಸ್ತುಗಳು ವಿಶೇಷ ಆಕರ್ಷಣೆಯಾಗಿವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಬಿ.ಇಳಂಗೋವನ್, ಕೆ.ಎಸ್.ಟೈಲರ್, ರಾಕೇಶ್ ರೈ ಇದ್ದರು.





ದೇಶ - ವಿದೇಶ

ಮಕ್ಕಳ ಭಿಕ್ಷಾಟನೆ ಹಿಂದೆ ಅಂತಾರಾಜ್ಯ ಮಾನವ ಕಳ್ಳ ಸಾಗಣೆ ಜಾಲ!



ಗುಜರಾತ್: ಅಹಮದಾಬಾದ್‌ನ ರಸ್ತೆಗಳು, ದೇವಸ್ಥಾನಗಳು ಮತ್ತು ಮಾಲ್‌ಗಳ ಮುಂದೆ ನಡೆಯುತ್ತಿದ್ದ ಮಕ್ಕಳ ಭಿಕ್ಷಾಟನೆಯ ಹಿಂದೆ ಅಂತಾರಾಜ್ಯ ಮಟ್ಟದ ಆಘಾತಕಾರಿ ಮಾನವ ಕಳ್ಳಸಾಗಣೆ ಜಾಲ ಪತ್ತೆಯಾಗಿದೆ.

ರಾಜಸ್ಥಾನ ಮತ್ತು ಮಧ್ಯಪ್ರದೇಶದ ಕೆಲವು ಗ್ರಾಮಗಳ ಸರಪಂಚರೇ(ಗ್ರಾಮ ಮುಖ್ಯಸ್ಥರು) ದಲ್ಲಾಳಿಗಳಾಗಿ ಕೆಲಸ ಮಾಡಿ, ಬಡ ಕುಟುಂಬಗಳ ಮಕ್ಕಳನ್ನು ಗುಜರಾತ್‌ನ ಭಿಕ್ಷಾಟನೆ ದಂಧೆಗೆ ಮಾರಾಟ ಮಾಡುತ್ತಿರುವುದು ಅಹಮದಾಬಾದ್ ಕ್ರೈಂ ಬ್ರಾಂಚ್ ತನಿಖೆಯಿಂದ ಬೆಳಕಿಗೆ ಬಂದಿದೆ.

ಅಹಮದಾಬಾದ್‌ನಲ್ಲಿ ಮುಂಬರುವ 2030ರ ಕಾಮನ್‌ವೆಲ್ತ್ ಗೇಮ್ಸ್ ಆತಿಥ್ಯದ ಸಿದ್ಧತೆಯ ಭಾಗವಾಗಿ, ನಗರದ ರಸ್ತೆಗಳನ್ನು ಭಿಕ್ಷುಕರ ಮುಕ್ತ ಮಾಡಲು ಅಹಮದಾಬಾದ್ ಮಹಾನಗರ ಪಾಲಿಕೆ ಮತ್ತು ಕ್ರೈಂ ಬ್ರಾಂಚ್ ಜಂಟಿ ಕಾರ್ಯಾಚರಣೆ ಹಮ್ಮಿಕೊಂಡಿದ್ದ ಈ ವೇಳೆ ಅಹಮದಾಬಾದ್ ಒಂದರಲ್ಲೇ 276 ಮಕ್ಕಳನ್ನು ಭಿಕ್ಷಾಟನೆಯಿಂದ ರಕ್ಷಿಸಲಾಗಿದೆ. ತನಿಖೆಯ ವೇಳೆ ಇದು ವ್ಯವಸ್ಥಿತ ಜಾಲ ಎಂಬುದು ತಿಳಿದುಬಂದಿದೆ.

ದಂಧೆಕೋರರು ಸರಪಂಚರನ್ನು ದಲ್ಲಾಳಿಗಳಾಗಿ ಬಳಸಿಕೊಂಡು ಬಡ ಮಕ್ಕಳನ್ನು ಭಿಕ್ಷಾಟನೆಗೆ ತಳ್ಳುತ್ತಿದ್ದಾರೆ. ಆ ಮಕ್ಕಳು ಪ್ರತಿದಿನ ಭಿಕ್ಷೆ ಬೇಡಿ ಗಳಿಸುವ ಹಣದಲ್ಲಿ ಶೇ.20ರಷ್ಟು ಪಾಲನ್ನು ಕಮಿಷನ್ ರೂಪದಲ್ಲಿ ಕಬಳಿಸುತ್ತಿದ್ದಾರೆ ಎಂದು ವರದಿಯಾಗಿದೆ.

ರಷ್ಯಾ ದಾಳಿ; ಉಕ್ರೇನ್‌ನ ಕೀವ್‌ನಲ್ಲಿ 17 ಮಂದಿ ಸಾವು, ಅಪಾರ ಹಾನಿ



ಉಕ್ರೇನ್: ರಾತ್ರಿಯಿಡಿ ರಷ್ಯಾ ದೊಡ್ಡ ಪ್ರಮಾಣದ ದಾಳಿ ನಡೆಸಿದ್ದು, ಉಕ್ರೇನ್‌ನ ಕೀವ್‌ನಲ್ಲಿ ಹಲವು ಗಂಟೆಗಳ ಕಾಲ ದೊಡ್ಡ ಸದ್ದಿನ ಸ್ಫೋಟಗಳು ಸಂಭವಿಸಿವೆ. ದಾಳಿಯಲ್ಲಿ 17 ಮಂದಿ ಸಾವನ್ನಪ್ಪಿದ್ದು, 86 ಮಂದಿ ಗಾಯಗೊಂಡಿದ್ದಾರೆ. ನಗರದಾದ್ಯಂತ 20 ವಸತಿ ಕಟ್ಟಡಗಳು ಹಾನಿಗೀಡಾಗಿವೆ. ಬ್ಯಾಲಿಸ್ಟಿಕ್ ಮತ್ತು ಕ್ರೂಸ್ ಕ್ಷಿಪಣಿಗಳು ಮತ್ತು ಡ್ರೋನ್‌ಗಳ ದಾಳಿಯು ನಗರದಾದ್ಯಂತ ಕಟ್ಟಡಗಳು ಮತ್ತು ನಾಗರಿಕ ಮೂಲಸೌಕರ್ಯಗಳನ್ನು ಹಾನಿಗೊಳಿಸಿತು. ದಾಳಿ ಬೆನ್ನಲ್ಲೇ ಉಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಮತ್ತು ಇತರ ಅಧಿಕಾರಿಗಳು ಎಚ್ಚರಿಕೆಗಳನ್ನು ನೀಡಿದ ನಂತರ ಅನೇಕ ನಿವಾಸಿಗಳು ಮೆಟ್ರೋ ನಿಲ್ದಾಣಗಳಲ್ಲಿ ಆಶ್ರಯ ಪಡೆದರು. ದಾಳಿಯ ನಂತರದ ಪರಿಸ್ಥಿತಿ ನಿಭಾಯಿಸಲು ಸುಮಾರು 500 ಸಿಬ್ಬಂದಿ ಹಾಗೂ ಹೆಲಿಕಾಪ್ಟರ್ ಸೇರಿದಂತೆ 100 ವಿಶೇಷ ವಾಹನಗಳನ್ನು ನಿಯೋಜಿಸಲಾಗಿದೆ. ರಷ್ಯಾ ದಾಳಿ ಮುಂದುವರೆದಿರುವ ಹಿನ್ನೆಲೆಯಲ್ಲಿ ರಾಜಧಾನಿಯ ನಿವಾಸಿಗಳು ಆಶ್ರಯ ತಾಣಗಳಲ್ಲೇ ಉಳಿಯುವಂತೆ ಕರೆ ನೀಡಲಾಗಿದೆ.

ಪಿಓಕೆಯಲ್ಲಿ ಪಾಕ್ ವಿರುದ್ಧ ಆಕ್ರೋಶ; ಭಾರತದೊಂದಿಗೆ ಸೇರುವ ಇಂಗಿತ



ನವದೆಹಲಿ: ಪಾಕ್ ಆಕ್ರಮಿತ ಕಾಶ್ಮೀರ(ಪಿಓಕೆ)ದ ರಾವಲ್ಕೋಟ್‌ನಲ್ಲಿ ಪಾಕಿಸ್ತಾನ ಸರ್ಕಾರದ ಆಡಳಿತ ಹಾಗೂ ನೀತಿಗಳನ್ನು ವಿರೋಧಿಸಿ ಜನ ಬೀದಿಗಿಳಿದಿದ್ದು, ತಮ್ಮ ಹಕ್ಕುಗಳಿಗೆ ಧಕ್ಕೆಯಾದರೆ ಭಾರತದೊಂದಿಗೆ ಸೇರಲು ಒತ್ತಾಯಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ರಾವಲ್ಕೋಟ್‌ನ ಈದ್ಗಾ ಮೈದಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದವರು ಪಾಕಿಸ್ತಾನದ ಆಡಳಿತದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ 1947ರಲ್ಲಿ ನಡೆದ ಕಾಶ್ಮೀರದ ಬೆಳವಣಿಗೆಗಳು ಮತ್ತು ನಂತರದ ಘಟನೆಗಳು ಮತ್ತೆ ಪ್ರಸ್ತುತವಾಗಿವೆ. ಭಾರತ ಮತ್ತು ಪಾಕಿಸ್ತಾನ ವಿಭಜನೆ ವೇಳೆ ಜಮ್ಮು–ಕಾಶ್ಮೀರವು ರಾಜಪ್ರಭುತ್ವದ ಸಂಸ್ಥಾನವಾಗಿತ್ತು. ಆದರೆ 1947ರ ಅಕ್ಟೋಬರ್ 22ರಂದು ಶಸ್ತ್ರಸಜ್ಜಿತ ಬುಡಕಟ್ಟು ಪಡೆಗಳು ಕಾಶ್ಮೀರಕ್ಕೆ ನುಗ್ಗಿದಾಗ ಮಹಾರಾಜ ಹರಿ ಸಿಂಗ್, ಭಾರತದಿಂದ ನೆರವು ಕೋರಿದರು. ಜಮ್ಮು ಮತ್ತು ಕಾಶ್ಮೀರವನ್ನು ಭಾರತಕ್ಕೆ ವಿಲೀನಗೊಳಿಸುವ ಒಪ್ಪಂದಕ್ಕೆ ಅಕ್ಟೋಬರ್ 27ರಂದು ಸಹಿ ಹಾಕಿದರು. ಇದರ ನಂತರ ಭಾರತೀಯ ಸೇನೆ ಕಾಶ್ಮೀರ ಪ್ರವೇಶಿಸಿ ಒಳನುಗ್ಗಿದ ಪಡೆಗಳನ್ನು ಹಿಮ್ಮೆಟ್ಟಿಸುವ ಕಾರ್ಯಾಚರಣೆ ಆರಂಭಿಸಿತು. 1948ರ ಅಂತ್ಯದಲ್ಲಿ ವಿಶ್ವಸಂಸ್ಥೆಯ ಮಧ್ಯಸ್ಥಿಕೆಯಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಕದನ ವಿರಾಮ ಜಾರಿಯಾಯಿತು.

ಪಾಕಿಸ್ತಾನದಲ್ಲಿದ್ದ 125 ವರ್ಷಗಳ ಐತಿಹಾಸಿಕ ಗುರುದ್ವಾರ ನೆಲಸಮ



ಇಸ್ಲಾಮಾಬಾದ್: ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಭಾರತ–ಪಾಕಿಸ್ತಾನ ಎಂದು ವಿಭಜನೆಯಾಗುವ ಮೊದಲೇ ನಿರ್ಮಿಸಲಾಗಿದ್ದ 125 ವರ್ಷಗಳ ಇತಿಹಾಸವಿರುವ ಗುರುದ್ವಾರವೊಂದನ್ನು ಅಲ್ಲಿನ ಉದ್ಯಮಿಯೊಬ್ಬರು ಖರೀದಿಸಿ ಅದನ್ನು ಕೆಡವಿ ಹಾಕಿರುವ ಘಟನೆ ನಡೆದಿದೆ. ಸಿಖ್ಖರ ಧಾರ್ಮಿಕ ಸ್ಥಳವನ್ನು ಕಡೆವಿ ಅವರ ನಂಬಿಕೆಗೆ ಧಕ್ಕೆಯುಂಟಾಗುವಂತೆ ಮಾಡಿದ್ದಾರೆ ಎಂದು ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಈ ಬೆನ್ನಲ್ಲೇ, ಈ ಘಟನೆಯನ್ನು ಭಾರತ ತೀಕ್ಷ್ಣವಾಗಿ ಖಂಡಿಸಿ, ಇದು ಉದ್ದೇಶಿತ ವಿಧ್ವಂಸಕ ಕೃತ್ಯ ಎಂದು ಕರೆದಿದ್ದು ಹೊಣೆಗಾರರು ಕಾನೂನಾತ್ಮಕ ಕ್ರಮ ವಹಿಸುವಂತೆ ಮಾಡಿ, ಐತಿಹಾಸಿಕ ಸಿಖ್ ದೇವಾಲಯವನ್ನು ಪುನಃಸ್ಥಾಪಿಸಲು ಪಾಕಿಸ್ತಾನವನ್ನು ಒತ್ತಾಯಿಸಿದೆ. ಈ ಕುರಿತು ಭಾರತದ ವಿದೇಶಾಂಗ ಇಲಾಖೆ ಹೇಳಿಕೆ ಬಿಡುಗಡೆ ಮಾಡಿದ್ದು, ಇದನ್ನು ಎಂಇಎ ವಕ್ತಾರ ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದು, ಪಾಕಿಸ್ತಾನದ ಫರೂಕಾಬಾದ್‌ನಲ್ಲಿರುವ 125 ವರ್ಷ ಹಳೆಯ ಐತಿಹಾಸಿಕ ಪವಿತ್ರ ಗುರುದ್ವಾರ ಶ್ರೀ ಗುರು ಸಿಂಗ್ ಸಭಾ ಸಾಹಿಬ್ ಧ್ವಂಸಕ್ಕೆ ಸಂಬಂಧಿಸಿದ ತೀವ್ರ ದುಃಖಕರ ವರದಿಗಳನ್ನು ನಾವು ನೋಡಿದ್ದೇವೆ. ಪೂಜ್ಯ ಸಿಖ್ ದೇವಾಲಯದ ಮೇಲೆ ನಡೆದ ಅತ್ಯಂತ ಶೋಚನೀಯ ಮತ್ತು ಗುರಿಯಾಗಿಟ್ಟುಕೊಂಡು ನಡೆದ ವಿಧ್ವಂಸಕ ಕೃತ್ಯವನ್ನು ಬಲವಾಗಿ ಖಂಡಿಸುತ್ತೇವೆ ಎಂದು ತಿಳಿಸಿದ್ದಾರೆ.

ದೆಹಲಿ ಪೊಲೀಸರಿಂದ ಪಾಕಿಸ್ತಾನದ ಐಎಸ್‌ಐ ಬೆಂಬಲಿತ ನಾಲ್ವರ ಬಂಧನ



ನವದೆಹಲಿ: ದೆಹಲಿ–ಎನ್‌ಸಿಆರ್ ಪ್ರದೇಶದಲ್ಲಿ ಭಯೋತ್ಪಾದಕ ದಾಳಿ ನಡೆಸಲು ಸಂಚು ರೂಪಿಸುತ್ತಿದ್ದ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಬೆಂಬಲಿತ ಜಾಲವನ್ನು ದೆಹಲಿ ಪೊಲೀಸ್ ವಿಶೇಷ ಘಟಕ ಭೇದಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸುಭದೀಪ್ ಸಿಂಗ್, ಗುರ್ಜಂತ್ ಸಿಂಗ್, ಸಜನ್ ಸಿಂಗ್ ಹಾಗೂ ಗಗನ್‌ಪ್ರೀತ್ ಸಿಂಗ್ ಹೆಸರಿನ ಶಂಕಿತರನ್ನು ಬಂಧಿಸಲಾಗಿದ್ದು, ಇವರು ಐಎಸ್‌ಐ ಹ್ಯಾಂಡ್ಲರ್ ಶಹಜಾದ್ ಭಟ್ ಹಾಗೂ ಆತನ ಸಹಚರರ ಸೂಚನೆಯಂತೆ ಕಾರ್ಯನಿರ್ವಹಿಸುತ್ತಿದ್ದರು ಎಂದು ತಿಳಿದುಬಂದಿದೆ. ದೆಹಲಿ–ಎನ್‌ಸಿಆರ್‌ನ ಪ್ರಮುಖ ಸಾರ್ವಜನಿಕ ಸ್ಥಳಗಳು ಮತ್ತು ಜನಸಂದಣಿ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ಉಗ್ರ ಕೃತ್ಯ ನಡೆಸಲು ಸಂಚು ರೂಪಿಸಿದ್ದ ಇವರನ್ನು ಬಂಧಿಸಿ ವಿದೇಶಿ ಪಿಸ್ತೂಲ್, ಜೀವಂತ ಗುಂಡುಗಳು, ಮೊಬೈಲ್ ಫೋನ್‌ಗಳು, ಡಿಜಿಟಲ್ ಸಾಧನಗಳು ಹಾಗೂ ಇತರ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ದೆಹಲಿ ಪೊಲೀಸ್ ವಿಶೇಷ ಘಟಕವು ಕೇಂದ್ರ ಗುಪ್ತಚರ ಸಂಸ್ಥೆಗಳ ಸಹಯೋಗದೊಂದಿಗೆ ತನಿಖೆ ಮುಂದುವರಿಸಿದ್ದು, ಭದ್ರತೆಯನ್ನು ಮತ್ತಷ್ಟು ಬಿಗಿಗೊಳಿಸಲಾಗಿದೆ.

ವನ್ಯಜೀವಿ ದಾಳಿ ತಡೆಯುವಲ್ಲಿ ಸರ್ಕಾರ ವಿಫಲ ಆರೋಪ

ಜು.6, ಮಡಿಕೇರಿಯಲ್ಲಿ ಬಿಜೆಪಿಯಿಂದ ವಾಹನ ಜಾಥಾ, ಪ್ರತಿಭಟನಾ ಸಭೆ


ಸುದ್ದಿಗೋಷ್ಠಿಯಲ್ಲಿ ಬಿಜೆಪಿಯ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿದರು.

ಮಡಿಕೇರಿ, ಜು.2– ವನ್ಯಜೀವಿ ದಾಳಿಯನ್ನು ತಡೆಯುವಲ್ಲಿ ಮತ್ತು ಕೊಡಗಿನ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಸೂಚಿಸುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಕೊಡಗು ಜಿಲ್ಲಾ ಬಿಜೆಪಿ ಆರೋಪಿಸಿದೆ.

ಸರ್ಕಾರದ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ ಜು.6ರಂದು ಮಡಿಕೇರಿಯಲ್ಲಿ ಬೃಹತ್ ವಾಹನ ಜಾಥಾ ಮತ್ತು ಪ್ರತಿಭಟನಾ ಸಭೆ ನಡೆಸಲಾಗುವುದು ಎಂದು ಬಿಜೆಪಿಯ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ತಿಳಿಸಿದ್ದಾರೆ. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕೊಡಗು ಜಿಲ್ಲೆಯಲ್ಲಿ ಕಾಡಾನೆ ಸೇರಿದಂತೆ ವನ್ಯಜೀವಿಗಳ ಉಪಟಳ ಮಿತಿ ಮೀರಿದೆ. ಕಾಡಾನೆ ದಾಳಿಗೆ ಸಿಲುಕಿ ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ ಮತ್ತು ಅಂಗವೈಕಲ್ಯತೆಗೆ ಒಳಗಾಗುತ್ತಿದ್ದಾರೆ. ರೈತರು ಕೃಷಿ ಫಸಲು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದರೂ ರಾಜ್ಯ ಸರ್ಕಾರ ಪರಿಹಾರ ನೀಡುತ್ತಿಲ್ಲ. ಹುಲಿ ಹಾಗೂ ಚಿರತೆ ದಾಳಿಯಿಂದ ಜಾನುವಾರುಗಳು, ಸಾಕುಪ್ರಾಣಿಗಳು ಬಲಿಯಾಗುತ್ತಿವೆ. ವನ್ಯಜೀವಿಗಳ ನಿರಂತರ ದಾಳಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುತ್ತಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲೆಯ ಸಿ ಮತ್ತು ಡಿ ಭೂಮಿಯಲ್ಲಿ ಕಳೆದ ಹಲವು ವರ್ಷಗಳಿಂದ ಮನೆ ನಿರ್ಮಿಸಿಕೊಂಡು ವಾಸಿಸುತ್ತಿರುವ ಬಡವರು ಹಾಗೂ ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿರುವ ರೈತರಿಗೆ ರಾಜ್ಯ ಸರ್ಕಾರ ಹಕ್ಕು ಪತ್ರ ನೀಡದೆ ಒಕ್ಕಲೆಬ್ಬಿಸಲು ಪ್ರಯತ್ನಿಸುತ್ತಿದೆ. ಹಿಡುವಳಿ ಭೂಮಿಯಲ್ಲಿರುವ ಮರದ ಮಾಲೀಕತ್ವದ ಹಕ್ಕನ್ನು ನೀಡದೆ ಸರ್ಕಾರವೇ ಅರಣ್ಯ ಇಲಾಖೆಯ ಮೂಲಕ ಮರಗಳ ಗಣತಿಕರಣ ಮಾಡುತ್ತಿರುವುದು ಮುಂದಿನ ದಿನಗಳಲ್ಲಿ ಮರದ ಮಾಲೀಕತ್ವವನ್ನು ಕಿತ್ತುಕೊಳ್ಳುವ ಹುನ್ನಾರವಾಗಿದೆ. ಅರಣ್ಯದಂಚಿನಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ, ವಿದ್ಯುತ್, ವಸತಿ ಮತ್ತು ಹಕ್ಕುಪತ್ರ ನೀಡದೆ ಸರ್ಕಾರ ವಂಚಿಸುತ್ತಿದೆ ಎಂದು ಆರೋಪಿಸಿದರು.

ಈ ಹಿಂದೆ ಭಾರತೀಯ ಜನತಾ ಪಾರ್ಟಿ ಪ್ರತಿಭಟನೆ ನಡೆಸಿ ಸಮಸ್ಯೆಗಳ ಪರಿಹಾರಕ್ಕಾಗಿ ಅಧಿವೇಶನ ಕ್ಷೇತ್ರಕ್ಕೆ ಒಳಸಲು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಸಭೆ ನಡೆಸುವಂತೆ ಮನವಿ ಮಾಡಿದರೂ ಆಡಳಿತ ನಡೆಸುತ್ತಿರುವ ಜಿಲ್ಲೆಯ ಜನಪ್ರತಿನಿಧಿಗಳು ಪ್ರತಿಷ್ಠೆಗಾಗಿ ಸಭೆ ನಡೆಸದೆ ನಿರ್ಲಕ್ಷ್ಯ ತೋರಿದ್ದಾರೆ ಎಂದು ಟೀಕಿಸಿದರು. ಜಿಲ್ಲೆಯ ಜ್ವಲಂತ ಸಮಸ್ಯೆಗಳಿಗೆ ಸರ್ಕಾರ ತಕ್ಷಣ ಸ್ಪಂದಿಸಬೇಕೆಂದು ಒತ್ತಾಯಿಸಿ ಸೋಮವಾರ ಎಲ್ಲಾ ಭಾಗಗಳಿಂದ ವಾಹನಗಳ ಜಾಥಾ ಸಾಗಿ ಬರಲಿದೆ. ಮಡಿಕೇರಿಯ ಗಾಂಧಿ ಮೈದಾನದಲ್ಲಿ ಸಮಾವೇಶಗೊಂಡು, ನಂತರ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲಾಗುವುದು. ಪ್ರತಿಭಟನೆಯಲ್ಲಿ ಸಂಸದ ಯದುವೀರ್ ಒಡೆಯರ್, ವಿಧಾನ ಪರಿಷತ್ ಸದಸ್ಯರು ಹಾಗೂ ಮಾಜಿ ಶಾಸಕರುಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ಪಕ್ಷದ ಎಲ್ಲಾ ಕಾರ್ಯಕರ್ತರು, ರೈತರು, ಕಾರ್ಮಿಕರು, ಸಂಘ ಸಂಸ್ಥೆಗಳ ಪ್ರಮುಖರು, ವಾಹನ ಮಾಲೀಕರು, ಚಾಲಕರು, ವಿವಿಧ ಸಮಾಜಗಳ ಪ್ರಮುಖರು ಹಾಗೂ ನಾಗರಿಕರು ಸ್ವಪ್ರೇರಣೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ರವಿ ಕಾಳಪ್ಪ ಮನವಿ ಮಾಡಿದರು.

ವಿಧಾನ ಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ ಮಾತನಾಡಿ ಜಿಲ್ಲೆಯ 5 ತಾಲೂಕುಗಳಿಂದ ವಾಹನ ಜಾಥಾ ಬರಲಿದೆ ಮತ್ತು ನಗರದಲ್ಲಿ ಬೃಹತ್ ಪ್ರತಿಭಟನಾ ಸಭೆ ನಡೆಯಲಿದೆ. ಈ ಪ್ರತಿಭಟನೆಗೆ ಸರ್ಕಾರದಿಂದ ಸೂಕ್ತ ಸ್ಪಂದನೆ ದೊರೆಯದಿದ್ದಲ್ಲಿ ಮುಂದಿನ ದಿನಗಳಲ್ಲಿ ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ಹೋರಾಟವನ್ನು ರೂಪಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಜಿಲ್ಲೆಯನ್ನು ಕಾಡುತ್ತಿರುವ ಕಾಡಾನೆ ದಾಳಿ ತಡೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸರ್ಕಾರ 2 ಸಾವಿರ ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಪಿ. ಸುನಿಲ್ ಸುಬ್ರಮಣಿ ಮಾತನಾಡಿ, ಸಚಿವ ಸಂಪುಟ ವಿಸ್ತರಣೆಯ ಸಂದರ್ಭ ಮಲೆನಾಡಿನ ಶಾಸಕರಿಗೆ ಅರಣ್ಯ ಖಾತೆ ನೀಡುವಂತೆ ಮನವಿ ಮಾಡಿದರು. ವನ್ಯಜೀವಿಗಳ ಉಪಟಳದ ಕುರಿತು ಸಂಪೂರ್ಣ ಮಾಹಿತಿ ಇರುವ ಮಲೆನಾಡು ಭಾಗದವರು ಅರಣ್ಯ ಸಚಿವರಾದರೆ ಸಮಸ್ಯೆಗೆ ಸೂಕ್ತ ಪರಿಹಾರ ಸಿಗಲಿದೆ ಎಂದು ಅಭಿಪ್ರಾಯಪಟ್ಟರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ವಿ.ಕೆ.ಲೋಕೇಶ್, ಮಹೇಶ್ ಜೈನಿ ಹಾಗೂ ವಕ್ತಾರ ಬಿ.ಕೆ.ಅರುಣ್ ಕುಮಾರ್ ಉಪಸ್ಥಿತರಿದ್ದರು.

ಕೊಡವ ಭಾಷಿಕರ ಬಗ್ಗೆ ತಾತ್ಸಾರ

ಸರ್ಕಾರದ ವಿರುದ್ಧ ಕೊಡವ ಭಾಷಿಕ ಸಮುದಾಯಗಳ ಕೂಟ ಆರೋಪ


ಕೊಡವ ಭಾಷಿಕ ಸಮುದಾಯಗಳ ಕೂಟದ ಅಧ್ಯಕ್ಷ ಡಾ.ಮೇಚಿರ ಸುಭಾಷ್ ನಾಣಯ್ಯ ಮಾತನಾಡುತ್ತಿರುವುದು.

ಮಡಿಕೇರಿ, ಜು.2– ಕೊಡವ ಭಾಷಾ ಸಂಸ್ಕೃತಿ, ಸಂಪ್ರದಾಯಗಳ ಮೂಲ ತಾಯಿ ಬೇರಿನಂತಿರುವ ಕೊಡವ ಭಾಷಿಕ ಜನಾಂಗದವರನ್ನು ಹಲವಾರು ವರ್ಷಗಳಿಂದ ಸರ್ಕಾರ ಹಾಗೂ ಜನಪ್ರತಿನಿಧಿಗಳು ತಾತ್ಸಾರ ಮನೋಭಾವನೆಯಿಂದ ಕಾಣುತ್ತಿದ್ದಾರೆ ಎಂದು ಕೊಡವ ಭಾಷಿಕ ಸಮುದಾಯಗಳ ಕೂಟದ ಅಧ್ಯಕ್ಷ ಡಾ.ಮೇಚಿರ ಸುಭಾಷ್ ನಾಣಯ್ಯ ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಕೊಡವ ಭಾಷಿಕ ಸಮುದಾಯಗಳ ಕೂಟದ 2025-26ನೇ ಸಾಲಿನ ಮಹಾಸಭೆಯು ನಗರದ ಕೊಡವ ಸಮಾಜದ ಸಭಾಂಗಣದಲ್ಲಿ ನಡೆಯಿತು. ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕೇರಳ ಹಿಂದಿನಿಂದ ಮೂಲ ನಿವಾಸಿ ಜನಾಂಗದವರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಆಡಳಿತ ವ್ಯವಸ್ಥೆ ವಿಫಲವಾಗಿರುವುದನ್ನು ಕಾಣುತ್ತಿದ್ದೇವೆ. ಕೊಡವ ಭಾಷಿಕ ಜನಾಂಗದವರನ್ನು ಕೇವಲ ಮತ ಬ್ಯಾಂಕ್‌ಗಾಗಿ ಬಳಸಿಕೊಳ್ಳುತ್ತಿರುವುದು ವಿಪರ್ಯಾಸ ಎಂದರು. ಶಾಶ್ವತ ನೆಲೆ ಕಂಡುಕೊಳ್ಳುವುದು ಕೊಡವ ಭಾಷಿಕ ಜನಾಂಗದವರ ಪ್ರಮುಖ ಬೇಡಿಕೆಗಳಲ್ಲಿ ಒಂದಾಗಿದೆ. ಜಾಗವನ್ನು ಗುರುತಿಸಿ ಸಂಬಂಧಿಸಿದ ಸರ್ಕಾರ ಮತ್ತು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರೂ ಇಲ್ಲಿಯವರೆಗೆ ಮಂಜೂರು ಮಾಡಿಲ್ಲವೆಂದು ವಿಷಾದ ವ್ಯಕ್ತಪಡಿಸಿದರು.

ಜನಾಂಗದ ಪ್ರಮುಖರಾದ ಕೋಲೆಯಂಡ ಡಾ.ಮೋಹನ್ ಅಪ್ಪಾಜಿ, ಅಂಬಾಡಿರ ಕಾಯಪ್ಪ, ಕುಡಿಯರ ಮುತ್ತಪ್ಪ, ವಾಸುದೇವ್, ಪ್ರಭುಕುಮಾರ್, ಬಿದ್ದಪ್ಪ ಮುಂತಾದವರು ಮಾತನಾಡಿ ಶಾಶ್ವತ ಜಾಗವನ್ನು ಪಡೆಯಲು ಕೂಟದಡಿಯಲ್ಲಿ ಜನಾಂಗ ಬಾಂಧವರು ಸಂಪೂರ್ಣ ಸಹಕಾರ ನೀಡಲಿದ್ದೇವೆ. ಜನಾಂಗದ ಸ್ವಾಭಿಮಾನಕ್ಕೆ ಧಕ್ಕೆ ಬರುವಂತಹ ಯಾವುದೇ ಸಮಸ್ಯೆ ಎದುರಾದರೂ ಕೂಟದ ಮೂಲಕ ಹೋರಾಟಕ್ಕೆ ಮುಂದಾಗಬೇಕು. ಪ್ರತಿಭೆಯನ್ನು ಬದಿಗೊತ್ತಿ ಎಲ್ಲರೂ ಒಗ್ಗಟ್ಟಾಗಿ ಬೀದಿಗಿಳಿದು ಹೋರಾಟ ಮಾಡಲು ಸಭೆ ಬೆಂಬಲ ಸೂಚಿಸಿತು.

ಸರ್ವ ಸದಸ್ಯರ ಅಭಿಪ್ರಾಯದಂತೆ ಇದೀಗ ಕಾರ್ಯನಿರ್ವಹಿಸುತ್ತಿರುವ ಕೂಟದ ಕಾರ್ಯಕಾರಿ ಮಂಡಳಿಯನ್ನು 3 ವರ್ಷಗಳಿಂದ ಮುಂದಿನ 5 ವರ್ಷಗಳವರೆಗೆ ಮುಂದುವರೆಸುವಂತೆಯೂ ಮತ್ತು ಯಾವುದೇ ಒಡಕು ಬಾರದಂತೆ ಜನಾಂಗ ಬಾಂಧವರು ಒಗ್ಗಟ್ಟಿನಿಂದ ಇರುವಂತೆ ಸಭೆಯಲ್ಲಿ ನಿರ್ಧರಿಸಲಾಯಿತು.

ಅಂಗಾಂಗ ದಾನ ಮಾಡುವ ಮೂಲಕ ಸಮಾಜಕ್ಕೆ ಮಾದರಿಯಾದ ಪಚ್ಚೆಕಿ ಜನಾಂಗದ ದಿ.ಕಾಡಿಲ ಉತ್ತಯ್ಯ ಅವರ ತ್ಯಾಗವನ್ನು ಸ್ಮರಿಸಿ ಅವರ ಪತ್ನಿ ರಾಜೇಶ್ವರಿ ಅವರನ್ನು ಕೂಟದ ವತಿಯಿಂದ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಉಪಾಧ್ಯಕ್ಷರಾದ ನೆರಿಯಂಡ ಮಂಡ ಉಮಾಪ್ರಭು, ಮೊನ್ನಿರ ಗಗನ್, ಕುಡಿಯರ ಬೋಜಯ್ಯ, ಕಾರ್ಯದರ್ಶಿ ಪಟ್ಟಚಾರಿರ ದಿನೇಶ್ ಕಾರ್ಯಪ್ಪ, ಖಜಾಂಚಿ ಕುಟ್ಟಂಡ ಉದಯ ಮಾದಪ್ಪ, ನಿರ್ದೇಶಕರಾದ ಪೊಟ್ಟಂಡ ಗಣೇಶ್, ಪೆದಪಂಡ ಕರಣ್, ಪಾತಂಡ ಸಂತೋಷ್, ಬೀಚಂಡ ಬೆಳ್ಯಪ್ಪ, ಮೇವಾಟರ ಮುತ್ತಣ್ಣ, ಕಾಪಾಳ ಮಿಲನ್, ತೋರಿರ ಕುರಿ ಕಾರ್ಯಪ್ಪ, ಪೊನ್ನಜ್ಜಿರ ತಂಬು, ಕಣಿಯರ ಪ್ರಕಾಶ್, ಚೋಕಿರ ಬಾಬಿ ಭೀಮಯ್ಯ, ಮೇಚಿರ ಚಂದ್ರ ಮಾರಂಗಿ ಮನು, ಜೋಕಿರ ಜೀವನ್, ಇಗ್ಗಿರ ಗಣಪತಿ, ಅರಮನೆ ಪಾಲೆ ದೇವಯ್ಯ ಇದ್ದರು.

ಕುಶಾಲನಗರದ ನಾಡಪ್ರಭು ಪತ್ತಿನ ಸಹಕಾರ ಸಂಘಕ್ಕೆ 27.04 ಲಕ್ಷ ರೂ. ನಿವ್ವಳ ಲಾಭ

ಕುಶಾಲನಗರ: ತಾಲೂಕಿನ ನಾಡಪ್ರಭು ಪತ್ತಿನ ಸಹಕಾರ ಸಂಘ 2025-26ನೇ ಸಾಲಿನಲ್ಲಿ 30,98,33,000 ರೂ. ವಾರ್ಷಿಕ ವಹಿವಾಟು ನಡೆಸಿದ್ದು 27.04 ಲಕ್ಷ ರೂ.ಗಳ ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಎಂ.ಕೆ.ದಿನೇಶ್ ತಿಳಿಸಿದ್ದಾರೆ.

ಸಂಘದ ಕಚೇರಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಸಂಘದ ಕಾರ್ಯ ವ್ಯಾಪ್ತಿಯಲ್ಲಿರುವ ಎಲ್ಲಾ ಸದಸ್ಯರಿಗೆ ಆರ್ಥಿಕ ಸೌಲಭ್ಯವನ್ನು ಒದಗಿಸುವ ಮೂಲ ಉದ್ದೇಶ ಸಂಘ ಹೊಂದಿದೆ. ಸಂಘದಲ್ಲಿ ಸದಸ್ಯರಿಗೆ ಅನುಕೂಲಕರವಾಗುವ ರೀತಿಯಲ್ಲಿ ಆಭರಣ ಸಾಲ ಸೇರಿದಂತೆ ಎಲ್ಲಾ ರೀತಿಯ ಸಾಲಗಳನ್ನು, ಸ್ಥಿರಾಸ್ತಿ ಅಡಮಾನ ಸಾಲ ಸೇರಿದಂತೆ ಸಂಘದಿಂದ ಓರ್ವ ಸದಸ್ಯನಿಗೆ ಗರಿಷ್ಠ 25 ಲಕ್ಷ ರೂ.ಗಳಷ್ಟು ಸಾಲ ವಿತರಣೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಜು.5, ವಾರ್ಷಿಕ ಮಹಾಸಭೆ

ಈ ಸಾಲಿನ ಮಾರ್ಚ್ ಅಂತ್ಯಕ್ಕೆ 3.70 ಕೋಟಿ ರೂ.ಸಾಲವನ್ನು ವಿತರಿಸಲಾಗಿದ್ದು ಸದಸ್ಯರುಗಳ ವ್ಯಾಪಾರ ಅಭಿವೃದ್ಧಿ ದೃಷ್ಟಿಯಿಂದ 10 ಲಕ್ಷ ರೂ.ಗಳವರೆಗೆ ವ್ಯಾಪಾರ ಸಾಲ ವಿತರಿಸಲು ನಿರ್ಧರಿಸಲಾಗಿದೆ ಎಂದು ಮಾಹಿತಿ ಒದಗಿಸಿದರು.

2016ರಲ್ಲಿ ಸ್ಥಾಪನೆಗೊಂಡು ಇದೀಗ 11ನೇ ವರ್ಷದತ್ತ ಸಾಗುತ್ತಿರುವ ಸಂಘದಲ್ಲಿ ಒಟ್ಟು 893 ಸದಸ್ಯರು ಇದ್ದು ಅಭಿವೃದ್ಧಿ ಕಾಣುತ್ತಿದೆ. ಸಂಘದ 2025-26ನೇ ಸಾಲಿನ 11ನೇ ವಾರ್ಷಿಕ ಮಹಾಸಭೆ ಜು.5 ರಂದು ಬೆಳಗ್ಗೆ 11 ಗಂಟೆಗೆ ಇಲ್ಲಿನ ರೈತ ಸಹಕಾರ ಭವನದಲ್ಲಿ ನಡೆಯಲಿದೆ ಎಂದು ದಿನೇಶ್ ತಿಳಿಸಿದರು. ಗೋಷ್ಠಿಯಲ್ಲಿ ಉಪಾಧ್ಯಕ್ಷ ಜಿ ಬಿ ಜಗದೀಶ್, ಎಸ್ ಸಿ ಪ್ರಕಾಶ್, ಕೆ.ಆರ್.ಕೃಪಾ, ಎಂ.ಡಿ.ರಮೇಶ್ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಕೆ.ಸುನಿತಾ ಭಾಗವಹಿಸಿದ್ದರು.

ಅಬ್ದುಲ್ ರಹಾನ್ ನಿಧನ



ನಾಪೋಕ್ಲು: ಇಲ್ಲಿಯ ಪಟ್ಟಣದಲ್ಲಿ ಹಲವು ವರ್ಷಗಳಿಂದ ವಿಟಿಸಿ ಮಳಿಗೆಯಲ್ಲಿ ವ್ಯಾಪಾರ ನಡೆಸುತ್ತಿದ್ದ ಕೇರಳದ ಕಣ್ಣೂರ್ ಜಿಲ್ಲೆಯ ಇರಿಕ್ಕೂರ್ ನಿವಾಸಿ ಅಬ್ದುಲ್ ರಹಾನ್ (ಅಂದ್ರು ಮಾನ್) ತಮ್ಮ ಮಳಿಗೆಯಲ್ಲಿ ಬುಧವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು. ಅವರಿಗೆ 49 ವರ್ಷ ವಯಸ್ಸಾಗಿತ್ತು. ಅಂತ್ಯಕ್ರಿಯೆ ಬುಧವಾರ ಕೇರಳದ ಇರಿಕ್ಕೂರ್‌ನಲ್ಲಿ ಜರುಗಿತು. ಮೃತರು ಪತ್ನಿ, ಐವರು ಪುತ್ರಿಯರನ್ನು ಅಗಲಿದ್ದಾರೆ.

ರಸ್ತೆಗೆ ಅಡ್ಡಲಾಗಿ ಬಿದ್ದ ಭಾರೀ ಗಾತ್ರದ ಮರ

2 ಗಂಟೆಗಳ ಕಾಲ ಸಂಚಾರ ಬಂದ್, ಪ್ರಯಾಣಿಕರ ಪರದಾಟ


ರಸ್ತೆಗೆ ಬಿದ್ದಿರುವ ಮರವನ್ನು ತೆರವು ಗೊಳಿಸುತ್ತಿರುವುದು.

ಮಡಿಕೇರಿ, ಜು.2 ರಾಷ್ಟ್ರೀಯ ಹೆದ್ದಾರಿಗೆ ಭಾರೀ ಗಾತ್ರದ ಮರ ಬಿದ್ದ ಪರಿಣಾಮ 2 ಗಂಟೆಗಳ ಕಾಲ ರಾಷ್ಟ್ರೀಯ ಹೆದ್ದಾರಿ ಸಂಚಾರ ಸಂಪೂರ್ಣ ಬಂದ್ ಆದ ಘಟನೆ ಸುಂಟಿಕೊಪ್ಪ–ಮಡಿಕೇರಿ ನಡುವಿನ ಕೆದಕಲ್ ಬಳಿ ನಡೆದಿದೆ. ರಾಷ್ಟ್ರೀಯ ಹೆದ್ದಾರಿ 275ರ ಕೆದಕಲ್ ಬಳಿ ಬೆಳಗಿನ ಜಾವ ಮರ ಬಿದ್ದಿದ್ದು, ಕಿ.ಮೀ ಉದ್ದಕ್ಕೂ ವಾಹನಗಳು ಸಾಲು ಗಟ್ಟಿ ನಿಲ್ಲುವಂತಾಯಿತು. ಬಳಿಕ ಸ್ಥಳಕ್ಕಾಗಮಿಸಿದ ಅಗ್ನಿ ಶಾಮಕ ದಳದ ಸಿಬ್ಬಂದಿಗಳು ಮತ್ತು ಸ್ಥಳೀಯರು ಮರ ತೆರವು ಕಾರ್ಯಾಚರಣೆ ನಡೆಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿ ಕೊಟ್ಟಿದ್ದಾರೆ. ಹೆದ್ದಾರಿ ಬಂದ್ ಆಗಿದ್ದ ಪರಿಣಾಮ ಪ್ರಯಾಣಿಕರು ಪರದಾಡುತ್ತಿದ್ದ ದೃಶ್ಯಗಳು ಕಂಡು ಬಂತು.

ಬೀದಿನಾಯಿಗಳ ದಾಳಿಗೆ ಕುರಿಗಳ ಬಲಿ

ಮಡಿಕೇರಿ: ಬೀದಿ ನಾಯಿಗಳ ದಾಳಿಗೆ ತುತ್ತಾಗಿ ಎರಡು ಕುರಿಗಳು ಮೃತಪಟ್ಟ ಘಟನೆ ಕುಶಾಲನಗರದಲ್ಲಿ ನಡೆದಿದೆ. ಕುಶಾಲನಗರದ ಇಂದಿರಾ ಬಡಾವಣೆಯ ಖಲೀಲ್ ಎಂಬುವರಿಗೆ ಸೇರಿದ 2 ಕುರಿಗಳ ಮೇಲೆ 10ಕ್ಕೂ ಅಧಿಕ ಬೀದಿ ನಾಯಿಗಳು ದಾಳಿ ನಡೆಸಿ ಕೊಂದು ಹಾಕಿವೆ.

20 ಸಾವಿರ ರೂ. ಬೆಲೆ ಬಾಳುವ ಕುರಿಗಳ ಸಾವಿಗೆ ಮಾಲೀಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ನಾಯಿಗಳ ಹಾವಳಿಯಿಂದ ಮಕ್ಕಳು ಹೊರಗೆ ಅಡ್ಡಾಡಲು ಆತಂಕದ ವಾತಾವರಣ ಸೃಷ್ಟಿಯಾಗಿದೆ ಎಂದು ಸ್ಥಳೀಯರು ಅಳಲು ತೋಡಿಕೊಂಡಿದ್ದಾರೆ.

ಯಳಂದೂರಲ್ಲಿ ಎಸ್‌ಐಆರ್ ಕುರಿತ ಜಾಗೃತಿ ಜಾಥಾ



ಯಳಂದೂರಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ–2026ರ (ಎಸ್‌ಐಆರ್) ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಗುರುವಾರ ಜಾಗೃತಿ ಜಾಥಾ ನಡೆಸಲಾಯಿತು.

ಯಳಂದೂರು: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ–2026ರ (ಎಸ್‌ಐಆರ್) ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಯಳಂದೂರು ಪಟ್ಟಣದಲ್ಲಿ ಗುರುವಾರ ಜಾಗೃತಿ ಜಾಥಾ ನಡೆಸಲಾಯಿತು.

ಭಾರತ ಚುನಾವಣಾ ಆಯೋಗ ಹಾಗೂ ಕರ್ನಾಟಕ ಮುಖ್ಯ ಚುನಾವಣಾಧಿಕಾರಿ ಕಚೇರಿ ನಿರ್ದೇಶನದನ್ವಯ ಯಳಂದೂರಿನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಸ್ವೀಪ್ ಸಮಿತಿ ಸಹಯೋಗದಲ್ಲಿ ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್ ನೇತೃತ್ವದಲ್ಲಿ ಎಸ್.ಐ.ಆರ್ ಬಗ್ಗೆ ಜನಜಾಗೃತಿ ಜಾಥಾ ನಡೆಸಲಾಯಿತು.

ಯಳಂದೂರು ತಾಲೂಕು ಪಂಚಾಯತ್ ಮುಂಭಾಗದ ಆವರಣದಿಂದ ಆರಂಭವಾದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಜಾಥಾಗೆ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ವೇಣು ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಸುಬ್ರಮಣ್ಯ ಚಾಲನೆ ನೀಡಿದರು.

ಜಾಥಾದಲ್ಲಿ ತಾಲೂಕು ಪಂಚಾಯತ್, ಗ್ರಾಮ ಪಂಚಾಯತ್ ಹಾಗೂ ಇತರೆ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಮತ್ತು ಎನ್.ಆರ್.ಎಲ್.ಎಂ. ಸದಸ್ಯರು ಮತದಾರರ ಪಟ್ಟಿ ವಿಶೇಷ ಸಮಗ್ರ (ಎಸ್.ಐ.ಆರ್) ಪರಿಷ್ಕರಣೆ–2026ರ ಮಹತ್ವದ ಬಗ್ಗೆ ಪ್ಲೇ–ಕಾರ್ಡ್‌ಗಳನ್ನು ಪ್ರದರ್ಶಿಸಿ, ಜಾಗೃತಿ ಘೋಷಣೆಗಳನ್ನು ಮೊಳಗಿಸಿದರು.

ತಾಲೂಕು ಪಂಚಾಯತ್ ಆವರಣದಿಂದ ಪ್ರಾರಂಭವಾದ ಜಾಗೃತಿ ಜಾಥಾವು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಾಗಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ತಲುಪಿತು. ಅಲ್ಲಿಯೂ ಸಹ ಮತದಾರರ ಪಟ್ಟಿಗೆ ಸೇರ್ಪಡೆ ಸಂಬಂಧ ನಾಗರಿಕರಿಗೆ ಅರಿವು ಮೂಡಿಸಿ ಧ್ವನಿವರ್ಧಕದ ಮೂಲಕ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಉತ್ತೇಜಿಸಲಾಯಿತು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ಪ್ರಕ್ರಿಯೆ ಕುರಿತು ವೇಳಾಪಟ್ಟಿಯ ಅಂಶಗಳ ಬಗ್ಗೆ ಅರಿವು ಮೂಡಿಸುವ ಭಿತ್ತಿ ಫಲಕಗಳನ್ನು ಜಾಥಾದಲ್ಲಿ ಪ್ರದರ್ಶಿಸಲಾಯಿತು. ಅಲ್ಲದೆ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ಬಸ್‌ಗಳಲ್ಲಿದ್ದ ಸಾರ್ವಜನಿಕರಿಗೂ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್.ಐ.ಆರ್) ಬಗ್ಗೆ ಜಾಗೃತಿ ಮೂಡಿಸಲಾಯಿತು.

ತಾಪಂ ಸಹಾಯಕ ನಿರ್ದೇಶಕ ರವೀಂದ್ರ, ತಾಲೂಕು ಮಟ್ಟದ ಅಧಿಕಾರಿಗಳು, ತಾಪಂ ಮತ್ತು ಗ್ರಾಪಂ ಅಧಿಕಾರಿಗಳು ಮತ್ತು ಸಿಬ್ಬಂದಿ ಜಾಥಾದಲ್ಲಿ ಪಾಲ್ಗೊಂಡಿದ್ದರು.

ವಿಶ್ವಕ್ಕೆ ಅಂಬೇಡ್ಕರ್ ಸಂವಿಧಾನ ಶ್ರೇಷ್ಠ


ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು.

ಚಾಮರಾಜನಗರ: ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಬರೆದಿರುವ ಸಂವಿಧಾನ ಇಡೀ ವಿಶ್ವಕ್ಕೆ ಶ್ರೇಷ್ಠವಾಗಿದ್ದು, ಏಕತೆ, ಸಾರ್ವಭೌಮತ್ವ ಹಾಗೂ ಅಖಂಡತೆ ಹೊಂದಿದೆ ಎಂದು ಮಾಜಿ ಸಚಿವ ಬಿ.ಸೋಮಶೇಖರ್ ತಿಳಿಸಿದರು.

ನಗರದ ಡಾ.ರಾಜ್‌ಕುಮಾರ್ ರಂಗ ಮಂದಿರದಲ್ಲಿ ದಲಿತ ಸಂಘಟನೆಗಳ ಸಮನ್ವಯ ಸಮಿತಿಯಿಂದ ನಡೆದ ಡಾ.ಬಾಬಾ ಸಾಹೇಬ್ ಭೀಮರಾವ್ ಅಂಬೇಡ್ಕರ್‌ರವರ 135ನೇ ಜನ್ಮದಿನಾಚರಣೆ ಪ್ರಯುಕ್ತ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ 135 ಮಂದಿ ಸಾಧಕರಿಗೆ ಸನ್ಮಾನ, ದಲಿತ ಕವಿ ನಾಡೋಜ ಡಾ.ಸಿದ್ದಲಿಂಗಯ್ಯ, ಕ್ರಾಂತಿ ಕವಿ ಮುಳ್ಳೂರು ನಾಗರಾಜುರವರ ನೆನಪು ಹಾಗೂ ದಲಿತ ಚಳುವಳಿ–ಸಾಹಿತ್ಯ ಕುರಿತು ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ರಚಿಸಿ ಎಲ್ಲಾ ವರ್ಗದವರಿಗೂ ಸಮಾನವಾಗಿ ಅಧಿಕಾರ ಹಂಚಿಕೆ ಆಗಬೇಕು ಎಂಬ ಉದ್ದೇಶ ಹೊಂದಿದ್ದರು. ಅವರು ಶಿಕ್ಷಣ, ಸಂಘಟನೆ, ಹೋರಾಟಕ್ಕೆ ಒತ್ತು ನೀಡಿದ್ದರು. ಶಿಕ್ಷಣದಿಂದ ಮಾತ್ರ ಪ್ರಗತಿ ಸಾಧ್ಯ ಎಂಬುದನ್ನು ಅರಿತಿದ್ದರು. ಶಿಕ್ಷಣ ಪಡೆದವರು ಮುಂದಿನ ದಿನಗಳಲ್ಲಿ ಅಧಿಕಾರ ನಡೆಸುವ ಜಾಗದಲ್ಲಿ ಕೂರುತ್ತಾರೆ ಎಂಬ ವಿಶ್ವಾಸವನ್ನು ಹೊಂದಿದ್ದರು. ಇದನ್ನು ಸಾಕಾರಗೊಳಿಸುವುದು ನಮ್ಮೆಲ್ಲರ ಮೇಲಿದೆ ಎಂದರು. ನಂತರ ಮೈಸೂರಿನ ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಮಾತನಾಡಿ, ಎಲ್ಲಾ ಕಡೆಯು ಅಂಬೇಡ್ಕರ್ ಅವರ ಪುತ್ಥಳಿಗಳು ಎತ್ತರಕ್ಕೆ ಬೆಳೆಯುತ್ತಿವೆ. ಆದರೆ, ಅವರ ಮೌಲ್ಯಗಳು ಕುಸಿಯುತ್ತಿವೆ. ಅವರ ತತ್ವಾದರ್ಶಗಳನ್ನು ಪಾಲನೆ ಮಾಡಿ, ಅವರಂತೆ ನಾವು ಸಹ ಸಾಧನೆ ಮಾಡುವ ಛಲವನ್ನು ಬೆಳೆಸಿಕೊಳ್ಳಬೇಕು ಎಂದರು.

ಬಳಿಕ ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ(ಪಾಪು) ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳು ವಿಶ್ವ ಮಟ್ಟದಕ್ಕೇರಿವೆ. ಅಂಬೇಡ್ಕರ್ ಅವರನ್ನು ಎಲ್ಲಾ ವರ್ಗದ ಜನರು ಅಪ್ಪಿಕೊಳ್ಳುತ್ತಿದ್ದಾರೆ. ಅವರ ಸಂವಿಧಾನದಡಿ ಸವಲತ್ತುಗಳನ್ನು ಪಡೆದುಕೊಂಡು ಅಭಿವೃದ್ಧಿಯಾಗುತ್ತಿದ್ದಾರೆ. ಇಂಥ ಸರ್ವಶ್ರೇಷ್ಠವಾದ ಸಂವಿಧಾನವನ್ನು ಅಂಬೇಡ್ಕರ್ ನಮಗೆ ನೀಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕಲ್ಯಾಣಸಿರಿ ಬಂತೇಜಿ, ರಮಾ ಸಿದ್ದಲಿಂಗಯ್ಯ, ಸಾಹಿತಿ ಸೋಮಶೇಖರ ಬಿಸಲವಾಡಿ, ಮಲ್ಲುಂಡಿ ಮಹದೇವಸ್ವಾಮಿ, ಮುಖಂಡರಾದ ಅರಕಲವಾಡಿ ನಾಗೇಂದ್ರ, ಬಸವಣ್ಣ ಮೂಕಳ್ಳಿ, ಪ್ರಾಧ್ಯಾಪಕ ಗುರುರಾಜು, ಜಿಪಂ ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್, ನಂಜುಂಡಸ್ವಾಮಿ, ಕೆಸಿಆರ್ ರಂಗಸ್ವಾಮಿ, ದೊಡ್ಡಿಂದುವಾಡಿ ಸಿದ್ದರಾಜು, ನಾಗು ರಮೇಶ್, ಡಿಎಸ್‌ಎಸ್ ಶಿವಣ್ಣ ಇತರರಿದ್ದರು.

ಗುಂಡ್ಲುಪೇಟೆಯಲ್ಲಿ ಹಾಡಹಗಲೇ ಮನೆಗಳ್ಳತನ

ಗುಂಡ್ಲುಪೇಟೆ: ಪಟ್ಟಣದ ಕೆ.ಎಸ್.ನಾಗರತ್ನಮ್ಮ ಬಡಾವಣೆಯಲ್ಲಿ ಹಾಡಹಗಲೇ ಮನೆಯೊಂದರ ಬೀಗಮುರಿದು ಚಿನ್ನಾಭರಣ ಕದ್ದೊಯ್ದಿರುವ ಘಟನೆ ಬುಧವಾರ ಮಧ್ಯಾಹ್ನ ಸಂಭವಿಸಿದೆ.

ಬಡಾವಣೆಯ ಸುನಿಲ್ ಎಂಬುವರ ಮನೆಯಲ್ಲಿ ಈ ಕಳ್ಳತನ ಸಂಭವಿಸಿದೆ. ಮನೆಗೆ ಬೀಗ ಹಾಕಿಕೊಂಡು ಮದುವೆಗೆ ಹೋಗಿದ್ದ ಸಂದರ್ಭದಲ್ಲಿ ಬೀಗಮುರಿದು ಒಳ ನುಗ್ಗಿರುವ ಕಳ್ಳ ಬೀರುವಿನಲ್ಲಿ ಇಟ್ಟಿದ್ದ ಉಂಗುರಗಳು ಹಾಗೂ ಚೈನ್ ಸೇರಿದಂತೆ 32 ಗ್ರಾಂ ಚಿನ್ನದ ಆಭರಣಗಳನ್ನು ಕದ್ದೊಯ್ದಿದ್ದಾನೆ. ಸಂಜೆ ಮನೆಗೆ ಹಿಂದುರುಗಿದಾಗ ಕಳ್ಳತನವಾಗಿರುವುದು ಗೊತ್ತಾಗಿದೆ. ಎದುರು ಮನೆಯಲ್ಲಿ ಅಳವಡಿಸಿದ ಸಿಸಿ ಕ್ಯಾಮರಾದ ಪುಟೇಜ್‌ಗಳನ್ನು ಪರಿಶೀಲಿಸಿದಾಗ ಮಧ್ಯಾಹ್ನದ ವೇಳೆ ವ್ಯಕ್ತಿಯೊಬ್ಬ ಅನುಮಾನಾಸ್ಪದವಾಗಿ ಓಡಾಡುತ್ತಿರುವುದು ಕಂಡು ಬಂದಿದೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಪೊಲೀಸ್ ಶ್ವಾನದಳ ಹಾಗೂ ಬೆರಳಚ್ಚು ತಜ್ಞರ ನೆರವಿನಿಂದ ಆರೋಪಿಯ ಪತ್ತೆಗೆ ಕ್ರಮಕೈಗೊಂಡಿದ್ದಾರೆ.

ವೃತ್ತಿಪರತೆ ಹೆಚ್ಚಳಕ್ಕೆ ಕೌಶಲ್ಯ ಅನಿವಾರ್ಯ


ಕೌಶಲ್ಯ ತರಬೇತಿ ಪಡೆದವರಿಗೆ ಎಸ್‌ಪಿ ಮುತ್ತುರಾಜ್ ಪ್ರಮಾಣ ಪತ್ರ ವಿತರಿಸಿದರು.

ಸಂತೇಮರಹಳ್ಳಿ: ವಿದ್ಯೆ ಬುದ್ಧಿಗೆ ತಕ್ಕಂತೆ ಉದ್ಯೋಗ ಸಿಗಬೇಕಾದರೆ ಕೌಶಲ್ಯ ಅಭಿವೃದ್ಧಿ ಅತ್ಯಗತ್ಯ ಎಂದು ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಹೇಳಿದರು.

ಡಿಎಂ ಚಾರಿಟಬಲ್ ಟ್ರಸ್ಟ್ ಗುರುವಾರ ಸಂತೇಮರಹಳ್ಳಿಯಲ್ಲಿ ಏರ್ಪಡಿಸಿದ್ದ ಕೌಶಲ್ಯ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಈಗಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ವಿದ್ಯಾರ್ಹತೆ, ಬುದ್ಧಿ ಇದ್ದರಷ್ಟೆ ಸಾಲದು. ಅದಕ್ಕೆ ತಕ್ಕಂತೆ ಕೌಶಲ್ಯ ಇರಬೇಕು. ಆಗ ನಮ್ಮ ಸೇವೆ ಮತ್ತು ಉತ್ಪನ್ನಗಳಲ್ಲಿ ಮೌಲ್ಯ ಹೆಚ್ಚಾಗಿ ಅದರ ಬೇಡಿಕೆ ಹೆಚ್ಚಾಗುತ್ತದೆ. ಆದ್ದರಿಂದ ಇಂದಿನ ಯುವಕ ಯುವತಿಯರು ವಿದ್ಯಾರ್ಹತೆಗೆ ತಕ್ಕಂತೆ ವಿವಿಧ ಕೌಶಲ್ಯಗಳ ತರಬೇತಿ ಹೊಂದಬೇಕು. ಆಗ ಉದ್ಯೋಗ ಸುಲಭವಾಗಿ ಸಿಗುತ್ತದೆ. ಇಲ್ಲವಾದರೆ ಸರ್ಕಾರಿ ಕೆಲಸವನ್ನೇ ನೆಚ್ಚಿಕೊಂಡು ಕೂರಬೇಕಾಗುತ್ತದೆ. ಅದು ಎಲ್ಲರಿಗೂ ಸಿಗುವುದಿಲ್ಲ ಎಂದು ಅವರು ನುಡಿದರು.

ಒಂದು ಬಟ್ಟೆ ಹೊಲಿಯುವುದಕ್ಕೂ ಅವಕಾಶವಿಲ್ಲದೆ ಪರದಾಡುತ್ತಿದ್ದ ಟೈಲರ್ ಒಬ್ಬ ಕೌಶಲ್ಯ ತರಬೇತಿ ಪಡೆದ ನಂತರ ತನ್ನ ವೃತ್ತಿಪರತೆ ಹೆಚ್ಚಿಸಿಕೊಂಡು ಇಂದು ಲಕ್ಷಾಂತರ ರೂಪಾಯಿ ದುಡಿಯುತ್ತಿರುವ ಪ್ರಸಂಗ ಒಂದನ್ನು ಮುತ್ತುರಾಜ್ ಅವರು ಉದಾಹರಣೆ ಸಹಿತ ತೆರೆದಿಟ್ಟರು.

ಇಂತಹ ಅನೇಕ ವೃತ್ತಿಪರರನ್ನು ಬಿತ್ತಿ ಬೆಳೆಸುತ್ತಿರುವ ಸಂತೇಮರಹಳ್ಳಿಯ ಡಿ.ಎಂ. ಚಾರಿಟಬಲ್ ಟ್ರಸ್ಟ್ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದು ಅವರು ಹೇಳಿದರು.

ತೋಟಗಾರಿಕೆ ಇಲಾಖೆ, ಜಂಟಿ ನಿರ್ದೇಶಕ ಬಿ.ಆರ್.ಗಿರೀಶ್ ಮಾತನಾಡಿ, ತೋಟಗಾರಿಕೆ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳಾಗಿದ್ದು ಕೌಶಲ್ಯ ತರಬೇತಿಗಳನ್ನು ಪಡೆದರೆ ಬದಲಾದ ಪೈಪೋಟಿಗೆ ತಕ್ಕಂತೆ ಉದ್ಯೋಗ ಅವಕಾಶಗಳು ಲಭಿಸುತ್ತವೆ. ಹಾಗೆಯೇ ಸ್ವಯಂ ಉದ್ಯೋಗಕ್ಕೂ ಸಾಕಷ್ಟು ಅವಕಾಶಗಳಿವೆ. ಇದನ್ನು ಯುವಜನತೆ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಮೊಬೈಲ್ ದುರ್ಬಳಕೆಯಿಂದಾಗುವ ಸಮಸ್ಯೆಗಳನ್ನು ವಿವರಿಸಿದ ಜಿಲ್ಲಾ ಸಾರ್ವಜನಿಕ ಶಿಕ್ಷಣ ಅಧಿಕಾರಿ ಚಂದ್ರ ಪಾಟೀಲ್ ಅವರು ರೀಲ್ಸ್ ನೋಡುವ ಚಟ ಯುವ ಜನತೆಯಲ್ಲಿ ಹೆಚ್ಚಾಗಿದ್ದು, ಇದರಿಂದ ಮೊಬೈಲಿಂದಾಗಿರುವ ದುಷ್ಪರಿಣಾಮ ವಿಪರೀತವಾಗಿದೆ ಎಂದರು. ಮೊಬೈಲ್ ಸದ್ಬಳಕೆ ಕುರಿತು ಅನೇಕ ಸಲಹೆಗಳನ್ನು ಅವರು ನೀಡಿದರು.

ವಲಯ ಅರಣ್ಯಾಧಿಕಾರಿ ಮಂಜುನಾಥ್ ಓಣಿಕೇರಿ ಮಾತನಾಡಿ, ಉತ್ತಮ ಕೌಶಲ್ಯ ರೂಡಿಸಿಕೊಂಡರೆ ಅರಣ್ಯ ಮತ್ತು ಕೃಷಿ ಸಂಪತ್ತನ್ನು ಸದ್ಬಳಕೆ ಮಾಡಿಕೊಳ್ಳಬಹುದು. ಈ ನಿಟ್ಟಿನಲ್ಲಿ ಈ ಭಾಗದ ಜನತೆ ಡಿಎಂ ಚಾರಿಟಬಲ್ ಟ್ರಸ್ಟ್ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಬೇಕಿದೆ ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಸರ್ಕಾರಿ ಶಾಲೆ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ನಾಳೆ ಕಣ್ಣಿನ ಉಚಿತ ತಪಾಸಣೆ ಶಿಬಿರ

ಗುಂಡ್ಲುಪೇಟೆ: ಪಟ್ಟಣದ ಮಡಹಳ್ಳಿ ರಸ್ತೆಯಲ್ಲಿರುವ ಸರ್ಕಾರಿ ನೌಕರರ ಭವನದಲ್ಲಿ ಜು.4ರ ಶನಿವಾರ ಕೊಯಮತ್ತೂರಿನ ಅರವಿಂದ ಕಣ್ಣಾಸ್ಪತ್ರೆಯ ತಜ್ಞ ವೈದ್ಯರಿಂದ ಕಣ್ಣಿನ ಉಚಿತ ತಪಾಸಣೆ ಶಿಬಿರ ಆಯೋಜಿಸಲಾಗಿದೆ. ಸುರಾನಾ ಕಾಲೇಜು, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಎಸ್.ಎನ್.ಎಲೆಕ್ಟ್ರಾನಿಕ್ಸ್ ಹಾಗೂ ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘಗಳ ಸಹಯೋಗದಲ್ಲಿ ಆಯೋಜಿಸಿರುವ ಶಿಬಿರ ಶನಿವಾರ ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ನಡೆಯಲಿದೆ. ಶಸ್ತ್ರಚಿಕಿತ್ಸೆ ಅಗತ್ಯವಿರುವ ರೋಗಿಗಳನ್ನು ಕೊಯಮತ್ತೂರಿಗೆ ಕರೆದೊಯ್ದು ಉಚಿತವಾಗಿ ಚಿಕಿತ್ಸೆ ನೀಡಲಾಗುವುದು.

ಹೈನುಗಾರಿಕೆಯಿಂದ ಸ್ವಾವಲಂಬಿ ಜೀವನ



ಗುಂಡ್ಲುಪೇಟೆ: ಹೈನುಗಾರಿಕೆಯಿಂದ ಸ್ವಾವಲಂಬಿ ಬದುಕು ನಡೆಸಲು ಸಾಧ್ಯ ಎಂದು ಶಾಸಕ ಎಚ್.ಎಂ.ಗಣೇಶ್‌ಪ್ರಸಾದ್ ಹೇಳಿದರು.

ತಾಲೂಕಿನ ಬಸವಾಪುರ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘವನ್ನು ಉದ್ಘಾಟಿಸಿ ಮಾತನಾಡಿದರು. ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ಹಾಗೂ ನೂತನ ಸಂಘದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಈ ಕಾರ್ಯಕ್ರಮದಲ್ಲಿ ಶಾಸಕ ಎಚ್‌ಎಂ ಗಣೇಶ್ ಪ್ರಸಾದ್ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು ಹಾಗೂ ಡಾಕ್ಟರ್ ವರ್ಗೀಸ್ ಕುರಿಯನ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮತ್ತು ಹಾಲನ್ನು ಶೇಖರಣೆ ಮಾಡುವ ಮೂಲಕ ನೂತನ ಡೈರಿಯ ಉದ್ಘಾಟನೆಯನ್ನು ವೇದಿಕೆಯಲ್ಲಿದ್ದ ಗಣ್ಯರೊಡನೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಬಸವಪುರ ಗ್ರಾಮಸ್ಥರು ಶಾಸಕರಿಗೆ ಗ್ರಾಮದ ಮೂಲಭೂತ ಸೌಕರ್ಯಗಳಾದ ರಸ್ತೆ ಚರಂಡಿ ಮತ್ತು ಸಮುದಾಯ ಭವನ ಹಾಗೂ ಶಾಲೆಗೆ ಶೌಚಾಲಯ ಮತ್ತು ಅಡುಗೆ ಮನೆ ವ್ಯವಸ್ಥೆ ಕೋರಿ ಮನವಿಯನ್ನು ಸಲ್ಲಿಸಿದರು.

ಇದಕ್ಕೆ ಸ್ಪಂದಿಸಿ ಮಾತನಾಡಿದ ಶಾಸಕರು ಮುಂದಿನ ವರ್ಷದೊಳಗೆ ಸಮುದಾಯ ಭವನ ಮತ್ತು ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾದ ಅನುದಾನವನ್ನು ಬಿಡುಗಡೆ ಮಾಡುವುದಾಗಿ ಹಾಗೂ ಶಾಲೆಗೆ ಶೌಚಾಲಯ ಮತ್ತು ಕಾಂಪೌಂಡ್ ವ್ಯವಸ್ಥೆ ಮಾಡಿಕೊಡುವುದಾಗಿ ತಿಳಿಸಿದರು.

ಚಾಮರಾಜನಗರ ಜಿಲ್ಲಾ ಸಹಕಾರ ಸಂಘದ ಅಧ್ಯಕ್ಷ ಹಾಗೂ ಚಾಮುಲ್ ನಿರ್ದೇಶಕ ಎಚ್.ಎಸ್.ನಂಜುಂಡ ಪ್ರಸಾದ್ ಮಾತನಾಡಿದರು. ಮುಖಂಡರಾದ ಎಂ.ಪಿ.ಸುನಿಲ್, ಬಿ.ರಾಜಶೇಖರಪ್ಪ, ಎಚ್‌ಎಸ್.ನಂಜಪ್ಪ, ಪಿ.ಎಸ್.ಸುರೇಶ್, ಸಿದ್ದಲಿಂಗೇಶ್ವರ ಕೋರಿ ಮಂಜೇಶ್ ಕುಮಾರ್, ಪುತ್ತನಪುರ ಮತ್ತು ಬಸವಪುರ ಗ್ರಾಮದ ಡೇರಿ ನಿರ್ದೇಶಕರಿದ್ದರು.

■ಸತ್ಯಮೂರ್ತಿ ತೋಳಹುಣಸೆ

30 ವರ್ಷಗಳ ನಂತರ ಮತ್ತೆ ಬರ್ತಿದೆ ಅಮೇರಿಕಾ ಅಮೇರಿಕಾ..

90ರ ದಶಕದ ಜನಪ್ರಿಯ ಚಿತ್ರಗಳಲ್ಲಿ "ಅಮೇರಿಕಾ ಅಮೇರಿಕಾ" ಒಂದಾಗಿದೆ. ಆ ಚಿತ್ರಕ್ಕೆ ನಾಗತಿಹಳ್ಳಿ ಚಂದ್ರಶೇಖರ್ ಆಕ್ಷನ್ ಕಟ್ ಹೇಳಿದ್ದರು. ಈಗ ಅದೇ ಶೀರ್ಷಿಕೆಯಲ್ಲಿ 'ಅಮೇರಿಕಾ ಅಮೇರಿಕಾ 2' ಚಿತ್ರ ನಿರ್ಮಾಣವಾಗಿದೆ. ನಾಗತಿಹಳ್ಳಿ ಚಂದ್ರಶೇಖರ್ ಅವರೇ ಈ ಚಿತ್ರವನ್ನೂ ನಿರ್ದೇಶಿಸಿದ್ದಾರೆ. ನಿರೂಪ್ ಭಂಡಾರಿ, ಸಾನ್ವಿ ಶ್ರೀವಾಸ್ತವ್ ಹಾಗೂ ಪೃಥ್ವಿ ಅಂಬಾರ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಈ ಚಿತ್ರದ ಶೀರ್ಷಿಕೆ ಅನಾವರಣ ಹಾಗೂ ಪತ್ರಿಕಾಗೋಷ್ಠಿ ಇತ್ತೀಚೆಗೆ ನಡೆಯಿತು.

ನಾಗತಿಹಳ್ಳಿ ಚಂದ್ರಶೇಖರ್ ಮಾತನಾಡುತ್ತ ಹಳೇ ಕಥೆಗಳಿಂದಲೇ ಹೊಸ ಕಥೆಗಳು ಹುಟ್ಟೋದು" ಇದು ನಿಜ. ಸಾಮಾನ್ಯವಾಗಿ ಪತ್ರಿಕಾಗೋಷ್ಠಿಗಳಲ್ಲಿ ಎಲ್ಲರೂ ಇದು ಹೊಸಕಥೆ ಎಂದೇ ಹೇಳುತ್ತಾರೆ. ಎಲ್ಲಾ ಹೊಸಕಥೆಗಳು ಹಳೇ ಕಥೆಗಳೇ ಆಗಿರುತ್ತವೆ. ಹಾಗಾಗಿ ಹೊಸತು ಎನ್ನುವುದರ ಹುಡುಕಾಟದಲ್ಲಿ ಎಲ್ಲರೂ ಇದ್ದೇವೆ. ಈಗ ಅದೇ ಹಳೇ ಟೈಟಲ್ ಇಟ್ಟುಕೊಂಡು ಹೊಸ ಚಿತ್ರ ನಿರ್ದೇಶಿಸಿದ್ದೇನೆ, ಅದೇ "ಅಮೇರಿಕಾ ಅಮೇರಿಕಾ 2". ಆದರೆ, ಇದು ಆ ಚಿತ್ರದ ಮುಂದುವರಿದ ಭಾಗವಲ್ಲ. ಈ ಕಥೆಯೇ ಬೇರೆ. ಇಲ್ಲೂ ಮೂರು ಮುಖ್ಯ ಪಾತ್ರಗಳಿವೆ. ಆದರೆ ಅವರು ಸೂರ್ಯ, ಭೂಮಿ, ಶಶಾಂಕ್ ಅಲ್ಲ. ಇದೇ ಬೇರೆ ಪಾತ್ರಗಳು. ಸಹನಾ ವಿಜಯ ಕುಮಾರ್ ಅವರ ಕಾದಂಬರಿ ಆಧಾರಿತ ಸ್ತ್ರೀಪ್ರಧಾನ ಚಿತ್ರವಿದು. ಸಾನ್ವಿ ಶ್ರೀವಾಸ್ತವ್ ಅವರ ಮನೋಜ್ಞ ಅಭಿನಯ ಈ ಚಿತ್ರದಲ್ಲಿದೆ. ಈಗಾಗಲೇ ಚಿತ್ರೀಕರಣ ಮುಗಿದಿದೆ, ನಾಲ್ಕು ಹಾಡುಗಳಿಗೆ ಮನೋಮೂರ್ತಿ ಮ್ಯೂಸಿಕ್ ಮಾಡಿದ್ದಾರೆ. ನಕುಲ್ ಅಭಯಂಕರ್ ಹಿನ್ನೆಲೆ ಸಂಗೀತ, ಎಸ್.ಕೆ.ರಾವ್ ಛಾಯಾಗ್ರಹಣ ಚಿತ್ರಕ್ಕಿದೆ ಎಂದರು.



ನಟ ನಿರೂಪ್ ಭಂಡಾರಿ ಮಾತನಾಡುತ್ತ ಮೂವತ್ತು ವರ್ಷಗಳ ಹಿಂದೆ ಥಿಯೇಟರ್‌ನಲ್ಲಿ ನಾನೀ ಚಿತ್ರವನ್ನು ನೋಡಿದ ನೆನಪು ಇನ್ನೂ ಹಾಗೆ ಇದೆ. ಇದು ಅದರ ಮುಂದುವರಿದ ಭಾಗವಲ್ಲದಿದ್ದರೂ, ಈ ಚಿತ್ರದ ಕಥೆ ಹಾಗೂ ಪಾತ್ರಗಳು ಎಲ್ಲರ ನೆನಪಿನಲ್ಲಿರುವಂತದ್ದು ಎಂದರು.

ನಟ ಪೃಥ್ವಿ ಅಂಬಾರ್ ಮಾತನಾಡುತ್ತ ವಯಸ್ಸಿನಲ್ಲಿ ಹಿರಿಯರಾದರೂ ಉತ್ಸಾಹದಲ್ಲಿ ಯುವಕರಾಗಿರುವ ನಾಗತಿಹಳ್ಳಿ ಚಂದ್ರಶೇಖರ್ ಅವರು ನಮಗೆಲ್ಲಾ ಸ್ಪೂರ್ತಿ. ಅದೇ ನಿರ್ದೇಶಕರು ಜತೆ ಕೆಲಸ ಮಾಡುತ್ತಿರುವುದಕ್ಕೆ ಖುಷಿಯಾಗಿದೆ ಎಂದರು.



ಅಕ್ಟೋಬರ್ 16ಕ್ಕೆ ಗಣೇಶ್ ಅಭಿನಯದ

ಬೃಂದಾವಿಹಾರಿ

ಕಳೆದ ವರ್ಷ ಬಿಡುಗಡೆಯಾಗಿದ್ದ ಗೋಲ್ಡನ್‌ಸ್ಟಾರ್ ಗಣೇಶ್, ನಿರ್ದೇಶಕ ಶ್ರೀನಿವಾಸರಾಜು ಕಾಂಬಿನೇಶನ್‌ನ 'ಕೃಷ್ಣಂ ಪ್ರಣಯ ಸಖಿ' ಸೂಪರ್ ಹಿಟ್ ಆಗಿತ್ತು. ಇದೀಗ ಅದೇ ಕಾಂಬಿನೇಶನ್‌ನ ಮತ್ತೊಂದು ಚಿತ್ರ 'ಬೃಂದಾವಿಹಾರಿ' ಬಿಡುಗಡೆಗೆ ಸಿದ್ದವಾಗಿದೆ. ಗೋಲ್ಡನ್ ಸ್ಟಾರ್ ಗಣೇಶ್ ನಾಯಕರಾಗಿ ನಟಿಸಿರುವ ಈ ಚಿತ್ರವನ್ನು ಸಮೃದ್ಧಿ ವಿ. ಮಂಜುನಾಥ್ ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ. ಅಲ್ಲದೆ ಶ್ರೀನಿವಾಸರಾಜು ನಿರ್ದೇಶನ ಮಾಡಿದ್ದಾರೆ. ಮತ್ತೊಂದು ನವಿರಾದ ಪ್ರೇಮ ಕಥಾನಕದೊಂದಿಗೆ ಮೂಡಿ ಬರುತ್ತಿರುವ 'ಬೃಂದಾವಿಹಾರಿ' ಚಿತ್ರ ಅಕ್ಟೋಬರ್ 16ರಂದು ಬಿಡುಗಡೆಯಾಗುತ್ತಿದೆ. ನಾಯಕನಟ ಗಣೇಶ್ ಅವರ ಹುಟ್ಟುಹಬ್ಬದ ವಿಶೇಷವಾಗಿ ಹೊಸ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಚಿತ್ರತಂಡ ಬಿಡುಗಡೆ ದಿನಾಂಕವನ್ನು ಘೋಷಿಸಿದೆ.

ಸದಭಿರುಚಿಯ ಚಿತ್ರಗಳ ನಿರ್ಮಾಪಕ ಎನಿಸಿಕೊಂಡ ಸಮೃದ್ಧಿ ಮಂಜುನಾಥ್ ಅವರು ಚಿತ್ರದ ಅದ್ದೂರಿತನಕ್ಕೆ ಯಾವುದೇ ಕೊರತೆ ಬಾರದ ಹಾಗೆ ನಿರ್ಮಾಣ ಮಾಡಿದ್ದಾರೆ. ಈಗಾಗಲೇ ಬಿಡುಗಡೆಯಾಗಿರುವ ಹಾಡುಗಳು ಸಂಗೀತ ಪ್ರಿಯರನ್ನು ಸೆಳೆದಿದ್ದು, ಗಣೇಶ್ ಅಭಿಮಾನಿಗಳು ಚಿತ್ರ ಬಿಡುಗಡೆಗೆ ಕಾಯುತ್ತಿದ್ದಾರೆ. ಹೇಶಮ್ ಅಬ್ದುಲ್ ವಹಾಬ್ ಅವರ ಸಂಗೀತ ನಿರ್ದೇಶನ ಹಾಗೂ ವೆಂಕಟ್ ಪ್ರಸಾದ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಗಣೇಶ್ ಜತೆ ನಾಯಕಿಯರಾಗಿ ದೇವಿಕಾ ಭಟ್ ಹಾಗೂ ಮಾಳವಿಕ ಶರ್ಮ ಅವರು ಅಭಿನಯಿಸಿದ್ದಾರೆ.



ತಂದೆಯ ಕನಸು ನನಸಾಗಿಸಿದ ತನ್ವಿರಾವ್

ರಂಗ್ ಬಿರಂಗಿ', 'ಗುಲಾಬ್ ಗ್ಯಾಂಗ್' ಸೇರಿದಂತೆ ಹಲವಾರು ಚಿತ್ರಗಳಲ್ಲಿ ನಟಿಸಿರುವ ಮುಗುಳುನಗೆ ಸುಂದರಿ ತನ್ವಿರಾವ್ ಕಿರುತೆರೆಯಲ್ಲೂ ಸಕ್ರಿಯ. ಇದೀಗ ಅವರು ತಂದೆಯ ಕನಸನ್ನು ಸಾಕಾರಗೊಳಿಸಲು ಹೋರಾಡುವ ದಿಟ್ಟ ಯುವತಿ ಜನನಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ತಂದೆ ಮಗಳ ಬಾಂಧವ್ಯದ ಜತೆಗೆ ಸಮಾಜದಲ್ಲಿ ವಿವಾಹಿತ ಮಹಿಳೆಯೊಬ್ಬಳು ತನ್ನ ಗುರಿ ಸಾಧಿಸಲು ಏನೆಲ್ಲ ಅಡೆತಡೆಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ನಿರ್ದೇಶಕ ಸಂಪೃಥ್ವಿ ಅವರು ಭಾಗ್ಯವಂತರು ಧಾರಾವಾಹಿಯ ಮೂಲಕ ಹೇಳಹೊರಟಿದ್ದಾರೆ. ನಾಯಕಿಯ ತಂದೆ ಶ್ಯಾಮಸುಂದರ್ ಪಾತ್ರದಲ್ಲಿ ಹಿರಿಯನಟ ಸುಚೇಂದ್ರಪ್ರಸಾದ್ ಕಾಣಿಸಿಕೊಳ್ಳುತ್ತಿದ್ದಾರೆ. ತನ್ನ ಮಗಳು ಕಂಪನಿಯೊಂದರ ಮ್ಯಾನೇಜಿಂಗ್ ಡೈರೆಕ್ಟರ್ ಆಗಬೇಕೆನ್ನುವುದು ಆ ತಂದೆಯ ಕನಸು, ಆ ಕನಸನ್ನು ನನಸಾಗಿಸುವುದೇ ಜನನಿಯ ಗುರಿ. ತಂದೆಯ ಆಶಯದಂತೆ ವಿದ್ಯಾಭ್ಯಾಸದ ಕಡೆ ಹೆಚ್ಚು ಗಮನಹರಿಸುವ ಜನನಿ, ಒಂದು ಸಂದರ್ಭದಲ್ಲಿ ಶ್ರೀಮಂತ ಕುಟುಂಬದ ಯುವಕನನ್ನು ಕೈ ಹಿಡಿಯಬೇಕಾಗುತ್ತದೆ.

ಆಗರ್ಭ ಶ್ರೀಮಂತ ಕುಟುಂಬದ ನಾಲ್ಕನೇ ಸೊಸೆಯಾಗಿ ದೊಡ್ಡ ಮನೆಗೆ ಕಾಲಿಡುವ ಜನನಿ, ನಂತರದ ದಿನಗಳಲ್ಲಿ ಗಂಡನ ಮನೆ ಮತ್ತು ತನ್ನ ಉದ್ದೇಶ ಎರಡನ್ನೂ ನಿಭಾಯಿಸುವುದು ದೊಡ್ಡ ಸವಾಲಾಗುತ್ತದೆ. ಆದರೂ ತನ್ನ ಪ್ರಯತ್ನದಲ್ಲಿ ಹಿಂಜರಿಯದ ಜನನಿ, ಯಾವ ರೀತಿ ಯಶಸ್ವಿಯಾಗುತ್ತಾಳೆ ಎನ್ನುವುದೇ ಭಾಗ್ಯವಂತರು ಕಥಾಹಂದರ.


ಜುಲೈ 6ರಿಂದ ರಾತ್ರಿ 7.30ಕ್ಕೆ ಸನ್ ಉದಯದಲ್ಲಿ ಪ್ರಸಾರವಾಗಲಿರೋ ಭಾಗ್ಯವಂತರು ಸೀರಿಯಲ್‌ನಲ್ಲಿ ತನ್ವಿರಾವ್ ಹಾಗೂ ವಿಕಾಸ್ ನಾಯಕ, ನಾಯಕಿಯಾಗಿ ನಟಿಸುತ್ತಿದ್ದಾರೆ. ಉಳಿದಂತೆ ಆರ್.ಕೆ.ಚಂದನ್, ಶೋಭರಾಜ್, ಸುರೇಶ್ ರೈ, ಸಮೀಕ್ಷಾ, ವರ್ಷಾ, ಶ್ರೀವಾಯು, ಮಧುಸಾಗರ, ಲಕ್ಷ್ಮೀ ಹೆಗ್ಡೆ, ರಿಷಾ, ವಿಠಲ್ ಕಾಮತ್, ಪ್ರಕೃತಿ ಪಾಟೀಲ್ ಮತ್ತು ಜಯಲಕ್ಷ್ಮೀ ಪಟೇಲ್ ಪ್ರಮುಖ ಪಾತ್ರಗಳಲ್ಲಿದ್ದಾರೆ.



ಸಿನಿಪದಬಂಧ-633



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______________________

ವಿಳಾಸ ______________________

____

ದೂರವಾಣಿ ಸಂಖ್ಯೆ ______________________

ಎಡದಿಂದ ಬಲಕ್ಕೆ

1. ಕಾಶೀನಾಥ್ ಅಭಿನಯದಲ್ಲಿ ಭಾರೀ ವ್ಯತ್ಯಾಸವಿದೆ 6
4. ಸುದೀಪ್ ಕವಿಯೊಬ್ಬನನ್ನು ನೆನಪಿಸಿದ್ದಾನೆ 2
5. ಅಂಬರೀಷ್ ಬಿಟ್ಟ ಶರ ರಿವರ್ಸ್ ಆಗಿದೆ 5
6. ಮಾಲೆ ಧರಿಸಿರುವ 'ಮೋಡ' 2
7. ನಿರೂಪ್ ಭಂಡಾರಿ – ಅವಂತಿಕಾ ಶೆಟ್ಟಿ ಅಭಿನಯಕ್ಕೆ ಅನೂಪ್ ಭಂಡಾರಿ ನಿರ್ದೇಶನವಿದೆ 4
9. ಅಕ್ಷಯದಲ್ಲೇ ಲೂಸ್ ಮಾದನ ಚಿತ್ರವಿದೆ 2
11. ವಿನೋದ್ ಪ್ರಭಾಕರ್ 'ಗೂಳಿ' 2
12. ವೈಭವ ತೋರಿದ ಒಂಬತ್ತು ಇರುಳು 4
14. ವಿಷ್ಣುವರ್ಧನ್ – ಸುಮಲತಾ ಅಭಿನಯದಲ್ಲಿ ಬಂದ 'ಹೀರೋ' 5
15. ರಾಮಕೃಷ್ಣನ ಬಂಗಲೆಯಲ್ಲಿ ಗೌರವವಿದೆ 6
17. ಮನೆದೇವ್ರು ಚಿತ್ರದ ಹಾಡೊಂದರ ಸಾಲು 7

ಮೇಲಿನಿಂದ ಕೆಳಕ್ಕೆ

1. ಉದಯ್ ಕುಮಾರ್ – ಜಯಂತಿ ಅಭಿನಯಕ್ಕೆ ಎಂ. ಎನ್. ಪ್ರಸಾದ್ ನಿರ್ದೇಶಕ 10
2. ಎಸ್. ಮಹೇಂದರ್ – ಶೃತಿ ಮದುವೆಯಲ್ಲಿ ಜೋರಾಗಿ ನುಡಿಸಿದ ವಾದ್ಯ 4
3. ಕಾಳಿಂಗ ಚಿತ್ರದ ನಾಯಕಿ 6
4. ರವಿಚಂದ್ರನ್ ಯುದ್ಧಕ್ಕಿಳಿದ ಶೂರ 4
8. 'ಜಗದೀಶನಾಡುವ _ _ _ _ _ _ _ _ _ 8
10. ಚೋಮನ ದುಡಿಯ ಕರ್ತೃ 7
13. ಗುರುಬ್ರಹ್ಮ ಚಿತ್ರ ನಟಿ ಒಳ್ಳೆಯ ಹೆಣ್ಣು 3
16. ಕೆಸರಿನ ಪುಷ್ಪ 3


ಸಿನಿ ಪದಬಂಧ 632ರ ಉತ್ತರ

ಮ	ಧು	ರ	ಸಂ	ಗ	ಮ	■	■	■	ವಿ	ಷ್ಣು
ಕ್ಕ	■	ಣ	■	■	ಹಾ	ವಿ	ನ	ದ್ವೇ	ಷ	■
ಳಿ	■	ರಂ	ಭಾ	■	ಪ್ರ	■	■	■	ಕಾ	■
ರ	■	ಗ	■	■	ಚಂ	■	ಅ	ಮೇ	ರಿ	ಕಾ
ಲ	ವ್	■	ಒ	■	ಡ	ಚಂ	■	ಲೆ	■	■
ವ್ವ	■	ಬಾ	ಲ	ಕ	ರು	■	■	ಮೂ	■	ಗ
ಮ	■	■	ವಿ	■	■	ಮೈ	ಸೂ	ರು	ಟಾಂ	ಗ
ನೆ	ನ	ಪಿ	ನ	ದೋ	ಣಿ	■	■	ಕ	■	ನ
ತುಂ	■	■	ಆ	■	■	ಮೋ	■	ರಿ	■	■
ಬ	■	ಹೊ	ಸ	ಕ	ಳ್ಳ	ಹ	ಳೆ	ಕು	ಳ್ಳ	■
■	■	■	ರೆ	■	■	ನ್	■	ರಿ	■	■

ವಿಜೇತರು: ಜಗದೀಶ್, ನಂ.151, ಗಾಯತ್ರಿಪುರಂ ಎರಡನೇ ಹಂತ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮೊಬೈಲ್ ಎಂಬ 'ಸರ್ವಾಂತರ್ಯಾಮಿ' ಕಥೆ



ಸರ್ವಾಂತರ್ಯಾಮಿ' ಹೀಗೊಂದು ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ. 'ಎಲ್ಲರ ಕೈಯಲ್ಲೂ ನಾನೇ ಸ್ವಾಮಿ' ಎಂಬ ಅಡಿ ಬರಹವಿರುವ ಈ ಚಿತ್ರದಲ್ಲಿ ಇಂದಿನ ಮಕ್ಕಳು ಮತ್ತು ಯುವ ಜನಾಂಗ ಅತಿಯಾದ ಮೊಬೈಲ್ ಬಳಕೆಯಿಂದ ಏನೆಲ್ಲಾ ಆರೋಗ್ಯ ತೊಂದರೆಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ನಿರ್ದೇಶಕ ರಂಗಸ್ವಾಮಿ ಕಪನಿಪಾಳ್ಯ ಅವರು ಹೇಳಹೊರಟಿದ್ದಾರೆ. ಇವರ ಮಗಳು ಹಿತ ಆರ್.ಗೌಡ ನಿರ್ಮಾಣದ ಜವಾಬ್ದಾರಿ ಹೊತ್ತಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟ್ರೇಲರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ಜುಲೈ 17ರಂದು ತೆರೆಗೆ ಬರಲಿರುವ ಈ ಚಿತ್ರಕ್ಕೆ ಸಾಹಿತಿ ಕೆ.ರಾಮ್ ನಾರಾಯಣ್ ಬೆನ್ನೆಲುಬಾಗಿ ನಿಂತಿದ್ದಾರೆ.

ನಿರ್ದೇಶಕ ರಂಗಸ್ವಾಮಿ ಮಾತನಾಡಿ, ಇಂದಿನ ಕಾಲದಲ್ಲಿ ಮೊಬೈಲ್ ಎನ್ನುವುದು. ಜೀವನದ ಅವಿಭಾಜ್ಯ ಅಂಗವೇ ಆಗಿದೆ. ಅದರಿಂದ ನಮಗೆ ಎಷ್ಟು ಉಪಯೋಗವಿದೆಯೋ ಅಷ್ಟೇ ಅಪಾಯವೂ ಇದೆ. ಹೆಚ್ಚು ಮೊಬೈಲ್ ಬಳಕೆಯಿಂದ ಆಗುವ ದುಷ್ಪರಿಣಾಮಗಳನ್ನು ಜನರಿಗೆ ತಿಳಿಸುವ ಮೂಲಕ ಜಾಗೃತಿ ಮೂಡಿಸಬೇಕೆನ್ನುವುದು ನಮ್ಮ ಉದ್ದೇಶ. ಚಲನಚಿತ್ರಗಳಿಗೆ ಸೆನ್ಸಾರ್ ಇದೆ. ಆದರೆ ಮೊಬೈಲ್‌ಗೆ ಯಾವ ನಿರ್ಬಂಧವೂ ಇಲ್ಲ. ಅದರಿಂದ ಹೆಚ್ಚಿನ ಮಕ್ಕಳ ಜೀವನ ಹಾಳಾಗುತ್ತಿದೆ. ಮಕ್ಕಳು ಮಾತ್ರವಲ್ಲದೆ, ದೊಡ್ಡವರ ಮೇಲೂ ಇದರ ಪರಿಣಾಮ ಸಾಕಷ್ಟಿದೆ. ಹಾಗಾಗಿ ಕೆಲವುಕಡೆ ಕೀಪ್ಯಾಡ್ ಮೊಬೈಲ್ ಬಳಸಲು ನಿರ್ಧಾರ ಮಾಡಿದ್ದಾರೆ. ಇನ್ನೂ ಕೆಲವೆಡೆ ಮೊಬೈಲ್ ನೋಡಲು ಸಮಯ ನಿಗದಿ ಮಾಡಿಕೊಂಡಿದ್ದಾರೆ. ಇಂತಹ ನಿರ್ಧಾರಗಳು ಎಲ್ಲಾ ಕಡೆ ಜಾರಿಯಾಗಲಿ ಎನ್ನುವುದೇ ನಮ್ಮ ಚಿತ್ರದ ಉದ್ದೇಶ. ಜುಲೈ 17ರಂದು ನಮ್ಮ ಚಿತ್ರ ತೆರೆಗೆ ಬರಲಿದೆ ಎಂದರು.

ನಿರ್ಮಾಪಕಿ ಹಿತಾ ಮಾತನಾಡುತ್ತ ಚಿತ್ರನಿರ್ದೇಶನ ಮಾಡಬೇಕೆಂಬ ಅಪ್ಪನ ಆಸೆಗೆ ನಾವು ಸಪೋರ್ಟ್ ಮಾಡಿದ್ದೇವೆ, ನಮ್ಮ ಚಿತ್ರದಲ್ಲಿ ಸಮಾಜಕ್ಕೊಂದು ಮೆಸೇಜ್ ಇದೆ ಚಿತ್ರ ಚೆನ್ನಾಗಿ ಮೂಡಿಬಂದಿದೆ ಎಂದರು. ನಾಯಕನ ಪಾತ್ರ ಮಾಡಿರುವ ಆಟೋನಾಗರಾಜ್ ಮಾತನಾಡಿ ನನ್ನ ಅಭಿನಯದ 65ನೇ ಚಿತ್ರವಿದು. ಅಪ್ಪ – ಮಗಳ ಬಾಂಧವ್ಯದ ಕಥೆ ಚಿತ್ರದಲ್ಲಿದೆ, ನಾನು ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ರಂಗಸ್ವಾಮಿ ಅವರು ಒಂದೊಳ್ಳೆ ಕಥೆ ಮಾಡಿದ್ದಾರೆ ಎಂದರು. ಉಳಿದಂತೆ ಚಿತ್ರದಲ್ಲಿ ನಟಿಸಿರುವ ತೇಜಸ್ವಿನಿ, ಮೈರಾ, ಅಮೂಲ್ಯ ನಾರಾಯಣ್, ಸೂರ್ಯ ಪ್ರವೀಣ್, ಸಂಜನಾ ತಮ್ಮ ಪಾತ್ರಗಳ ಕುರಿತಂತೆ ಮಾತನಾಡಿದರು.

ರಕ್ಕಿ ಸ್ಟೈಲಿಶ್ ಗ್ಯಾಂಗ್‌ಸ್ಟರ್

ಕ್ರೈಂ ಥ್ರಿಲ್ಲರ್ ಜತೆಗೆ ಫ್ಯಾಮಿಲಿ ಎಂಟರ್‌ಟೈನರ್ ಕಥೆ ಇಟ್ಟುಕೊಂಡು ನಿರ್ದೇಶಕ ವೆಂಕಟ್ ಭಾರದ್ವಾಜ್ ರಕ್ಕಿ ಚಿತ್ರವನ್ನು ನಿರ್ದೇಶಿಸಿದ್ದಾರೆ. ಸಾಲಿಗ್ರಾಮ ಸುರೇಶ್ ನಿರ್ಮಾಣದ ಈ ಚಿತ್ರದಲ್ಲಿ ಅವರಪುತ್ರ ರಕ್ಕಿ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟ್ರೇಲರನ್ನು ಅಶ್ವಿನಿ ಪುನೀತ್ ರಾಜಕುಮಾರ್ ಬಿಡಗಡೆಗೊಳಿಸಿ ಶುಭ ಹಾರೈಸಿದರು.

ಈ ವೇಳೆ ಮಾತನಾಡಿದ ನಿರ್ದೇಶಕರು ಸದ್ಯ ಜರ್ಮನಿಯಲ್ಲಿ ನೆಲೆಸಿರುವ ಸಾಲಿಗ್ರಾಮ ಸುರೇಶ್ ನನ್ನ ಇಪ್ಪತ್ತು ವರ್ಷಗಳ ಸ್ನೇಹಿತರು. ನಾನು ಸುರೇಶ್‌ಬಳಿ ಎರಡು ಕಥೆ ಹೇಳಿದ್ದೆ. ಅವರು ಅಶ್ವಿನಿ ಮೇಡಂ ಒಪ್ಪಿದ ಕಥೆಯನ್ನ ಸಿನಿಮಾ ಮಾಡೋಣ ಅಂದರು. ಅದರಲ್ಲಿ 'ರಕ್ಕಿ' ಕಥೆ ಫೈನಲ್ ಆಗಿ ಚಿತ್ರೀಕರಣ ಮುಗಿಸಿಕೊಂಡು ಬಿಡುಗಡೆಗೆ ಸಿದ್ದವಾಗಿದೆ ಎಂದರು.

ನಾಯಕ ರಕ್ಕಿ ಮಾತನಾಡುತ್ತ ನನ್ನ ಹೆಸರು ಹಾಗೂ ಚಿತ್ರದ ಹೆಸರು ಎರಡೂ ಒಂದೇ ಆಗಿರುವುದು ವಿಶೇಷ. ಇದೊಂದು ಕ್ರೈಮ್ ಥ್ರಿಲ್ಲರ್ ಚಿತ್ರ ನಾನೊಬ್ಬ ಸ್ಟೈಲಿಷ್ ಗ್ಯಾಂಗ್‌ಸ್ಟರ್ ಆಗಿ ಕಾಣಿಸಿಕೊಂಡಿದ್ದೇನೆ. ಅದೇ ಚಿತ್ರದ ವಿಶೇಷ. ವಯಸ್ಸಿನ ಮಿತಿಇಲ್ಲದೆ ಎಲ್ಲರೂ ನೋಡಬಹುದಾದ ಚಿತ್ರವಿದು. ಜರ್ಮನಿಯಲ್ಲಿ ಅಭಿನಯಕ್ಕೆ ಬೇಕಾದ ತಯಾರಿ ಮಾಡಿಕೊಂಡು ಇಲ್ಲಿ ಬಂದು ಪರೀಕ್ಷೆ ಬರೆದಿದ್ದೇನೆ. ಜುಲೈ 10 ರಂದು ಫಲಿತಾಂಶ ಬರಲಿದೆ ಎಂದರು.

ನಿರ್ಮಾಪಕ ಸಾಲಿಗ್ರಾಮ ಸುರೇಶ್ ಮಾತನಾಡುತ್ತ ನಾನು ಮೂಲತಃ ಸಾಲಿಗ್ರಾಮದವನಾದರೂ ಬಹಳ ವರ್ಷಗಳಿಂದ ಜರ್ಮನಿಯಲ್ಲೇ ನೆಲೆಸಿದ್ದೇನೆ. ನನ್ನ ತಂದೆ ರಾಜಶೇಖರ್, ಡಾ॥ರಾಜಕುಮಾರ್ ಅವರ ಜತೆ 'ಹೊಸಬೆಳಕು' ಚಿತ್ರ ನಿರ್ಮಿಸಿದ್ದರು. ನಾನೂ ಒಂದು ಸಿನಿಮಾ ನಿರ್ಮಾಣ ಮಾಡಬೇಕೆಂಬ ಆಸೆಯಿತ್ತು, ಅದು ಈ ಚಿತ್ರದಿಂದ ಈಡೇರಿದೆ. ನನ್ನ ಮಗನೇ ಚಿತ್ರದ ನಾಯಕ. ನಮ್ಮ ಕುಟುಂಬದ ಆತ್ಮೀಯರಾದ ಅಶ್ವಿನಿ ಪುನೀತ್ ರಾಜಕುಮಾರ್ ಅವರು ಚಿತ್ರಕ್ಕೆ ತುಂಬಾ ಸಹಕಾರ ನೀಡಿದ್ದಾರೆ. ಸದ್ಯ ಕನ್ನಡ ಸಿನಿಮಾ ಇಂಡಸ್ಟ್ರಿ ಸ್ಥಿತಿ ಹೇಗಿದೆ ಅಂತ ಗೊತ್ತು. ನಮ್ಮ ಸಿನಿಮಾದಿಂದಲೇ ಅದು ಮತ್ತೆ ಮೇಲಕ್ಕೆ ಏರಬಹುದು, ಪ್ರೇಕ್ಷಕರ ಕೊಟ್ಟ ಹಣಕ್ಕೆ ಮೋಸವಾಗಲ್ಲ ಎಂದರು.

ಚಿತ್ರದ ಇಬ್ಬರು ನಾಯಕಿಯರಾದ ಆಶಿಕಾ ಸೋಮಶೇಖರ್, ಪಲ್ಲವಿ ಮಂಜುನಾಥ್ ತಮ್ಮ ಪಾತ್ರಗಳ ಬಗ್ಗೆ ಮಾತನಾಡಿದರು.



ಹಸಿದ ಹೊಟ್ಟೆಗೆ ಅನ್ನ ಬಡಿಸುವ ಮೂಲಕ

ದಾಸೋಹದ ಮಹತ್ವ ತಿಳಿಸಿಕೊಟ್ಟ ಶ್ರೀಗುರು ಮಲ್ಲೇಶ್ವರರು

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ

ನಂಜನಗೂಡು, ಜು.2– ಹಸಿದ ಹೊಟ್ಟೆಗೆ ಅನ್ನ ಬಡಿಸುವ ಮೂಲಕ ದಾಸೋಹದ ಮಹತ್ವವನ್ನು ಸಮಾಜಕ್ಕೆ ತಿಳಿಸಿಕೊಟ್ಟ ಶ್ರೀಗುರು ಮಲ್ಲೇಶ್ವರರು ತಮ್ಮ ಪವಾಡಗಳ ಮೂಲಕ ಬಡವರು ಹಾಗೂ ನಿರ್ಗತಿಕರಿಗೆ ನೆರವಾಗಿದ್ದರು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ತಾಲೂಕಿನ ದೇವನೂರಿನಲ್ಲಿ ಶ್ರೀಗುರು ಮಲ್ಲೇಶ್ವರರ 127ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಗುರುವಾರ ನಡೆದ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ವೀರಶೈವ ಲಿಂಗಾಯತ ಮಠ ಮಾನ್ಯಗಳ ಸೇವೆ ಒಂದು ಜಾತಿಗೆ ಸೀಮಿತವಾಗಿಲ್ಲ. ಸಮಾಜದ ಎಲ್ಲಾ ವರ್ಗದ ಜನರಿಗೆ ಶಿಕ್ಷಣ, ಆರೋಗ್ಯ ಹಾಗೂ ದಾಸೋಹ ಸೇವೆಯನ್ನು ಜಾತಿ, ಮತ ಹಾಗೂ ಧರ್ಮದ ಯಾವುದೇ ಬೇಧಭಾವ ತೋರದೆ ಸಮಾನವಾಗಿ ನೀಡುವ ಮೂಲಕ ಬಸವಣ್ಣನವರ ಆಶಯದ ಸಮಾಜ ನಿರ್ಮಾಣಕ್ಕೆ ಮುಂದಾಗಿವೆ ಎಂದರು.

ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದ ವೇಳೆ ಚಾಮರಾಜನಗರ ಭಾಗದ ಜನರ ಬಹುದಿನಗಳ ಬೇಡಿಕೆಯಾಗಿದ್ದ ಕೆರೆಗಳಿಗೆ ನದಿ ಮೂಲದಿಂದ ನೀರು ತುಂಬಿಸುವ ಯೋಜನೆಗೆ ಚಾಲನೆ ನೀಡುವ ಮೂಲಕ ರೈತರಿಗೆ ನೆರವಾಗಿದ್ದರು. ಹೀಗಾಗಿ ಇಂದಿಗೂ ಈ ಭಾಗದ ಜನರು ಯಡಿಯೂರಪ್ಪನವರನ್ನು ನೆನೆಯುತ್ತಾರೆ. ರಾಜ್ಯದ ಕಬಿನಿ, ಕಾವೇರಿ ಹಾಗೂ ಹೇಮಾವತಿ ಅಣೆಕಟ್ಟೆಗಳು ಬರಿದಾಗಿದ್ದು, ರೈತರು ಭವಿಷ್ಯದ ಕೃಷಿ ಚಟುವಟಿಕೆ ಬಗ್ಗೆ ಆತಂಕಕ್ಕೊಳಗಾಗಿದ್ದಾರೆ. ಆದ್ದರಿಂದ ಮಹಾತ್ಮ ಶ್ರೀಗುರು ಮಲ್ಲೇಶ್ವರರ ಪುಣ್ಯಾರಾಧನೆ ಸಮಯದಲ್ಲಿ ಉತ್ತಮ ಮಳೆಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದ್ದು, ಮುಂದಿನ ದಿನಗಳಲ್ಲಿ ತಾವೆಲ್ಲರೂ ಹೆಮ್ಮೆ ಪಡುವಂತೆ ಪಕ್ಷ ಸಂಘಟಿಸುವ ಮೂಲಕ ಜನರ ನಿರೀಕ್ಷೆಯಂತೆ ಕಾರ್ಯ ನಿರ್ವಹಿಸುವುದಾಗಿ ತಿಳಿಸಿದರು.



ಸಾಂಸ್ಕೃತಿಕ ಕಾರ್ಯಕ್ರಮವನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಿದರು.

ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ಗುರು ಮಲ್ಲೇಶ್ವರರು ಕಂತೆ ಭಿಕ್ಷೆ ಮಾಡಿ ಮಠಕ್ಕೆ ಬರುವ ಭಕ್ತರಿಗೆ ಅನ್ನ, ಅಕ್ಷರ ದಾಸೋಹ ಮಾಡುವ ಮೂಲಕ ಬಸವಾದಿ ಶರಣರ ತತ್ವಾದರ್ಶಗಳನ್ನು ಅನುಸರಿಸಿ ಸಾಮಾನ್ಯ ಜನರ ಬದುಕನ್ನು ಹಸನು ಮಾಡಲು ಮುಂದಾಗಿದ್ದರು. ಈಗಲೂ ಶ್ರೀಮಠ ದಾಸೋಹಕ್ಕೆ ಹೆಸರಾಗಿದೆ ಎಂದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರದ ಬಿಜೆಪಿ ಸರ್ಕಾರ ಬಡವರಿಗಾಗಿ ನೀಡುತ್ತಿರುವ 10 ಕೆಜಿ ಅಕ್ಕಿಯನ್ನು ತನ್ನ ಕಾರ್ಯಕ್ರಮವೆಂದು ಅನ್ನಭಾಗ್ಯದಡಿ ಅಕ್ಕಿ ಕೊಡುತ್ತಿರುವುದಾಗಿ ಫೋಟೋ ಹಾಕಿಕೊಂಡು ಪ್ರಚಾರ ಪಡೆಯುತ್ತಾರೆ. ಆದರೆ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರು ವಿದ್ಯಾರ್ಥಿಗಳಿಗೆ ಸೈಕಲ್, ಹೆಣ್ಣು ಮಕ್ಕಳಿಗೆ ನೀಡಿದ ಭಾಗ್ಯಲಕ್ಷ್ಮಿ ಯೋಜನೆ ಸಾರ್ವಜನಿಕರಿಗೆ ಅನುಕೂಲವಾಗಿದೆ. ನಮ್ಮ ಭಾಗದ ಚಾಮರಾಜನಗರ, ನಂಜನಗೂಡು ಕ್ಷೇತ್ರಗಳಲ್ಲಿ ಕೆರೆಗಳನ್ನು ತುಂಬಿಸಿ, ರೈತರಿಗಾಗಿ ರೈತ ಬಜೆಟ್ ಮಂಡಿಸಿ ರೈತ ನಾಯಕ ಎನಿಸಿಕೊಂಡರು. ಬಸವಾದಿ ಶರಣರ ಆದರ್ಶ, ತತ್ವಗಳನ್ನು ಅಳವಡಿಸಿಕೊಂಡ ಯಡಿಯೂರಪ್ಪನವರನ್ನು ನೋಡಿ ಕಲಿಯಬೇಕು. ತಂದೆಯ ಹಾದಿಯಲ್ಲಿ ನಡೆಯುತ್ತಿರುವ ಬಿ.ವೈ.ವಿಜೇಂದ್ರರಿಗೆ ನಿಮ್ಮ ಆಶೀರ್ವಾದವಿರಲಿ ಎಂದು ಹೇಳಿದರು.

> ಪವಾಡ ಪುರುಷ ಶ್ರೀಗುರು ಮಲ್ಲೇಶ್ವರರು ಹಳೇ ಮೈಸೂರು ಪ್ರಾಂತ್ಯದಲ್ಲಷ್ಟೇ ಪ್ರಸಿದ್ಧರಲ್ಲ. ನಾಡಿನಾದ್ಯಂತ ಕೋಟ್ಯಾಂತರ ಭಕ್ತರ ಆರಾಧ್ಯ ದೈವವಾಗಿರುವ ಶ್ರೀಗುರು ಮಲ್ಲೇಶ್ವರರಿಗೆ ಪೂಜೆ ಸಲ್ಲಿಸಿ 2018ರ ವಿಧಾನಸಭೆ ಚುನಾವಣೆಯಲ್ಲಿ ವರುಣ ಕ್ಷೇತ್ರದಿಂದ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ಮುಂದಾಗಿದ್ದೆ. ಆದರೆ ಬದಲಾದ ಸನ್ನಿವೇಶದಲ್ಲಿ ಚುನಾವಣಾ ಸ್ಪರ್ಧೆಗೆ ಅವಕಾಶ ಲಭ್ಯವಾಗಲಿಲ್ಲ. ಇದೇ ಸಂದರ್ಭ ರಾಜಕೀಯವಾಗಿ ನಾಯಕತ್ವದ ಅವಕಾಶ ವರುಣ ಕ್ಷೇತ್ರದಿಂದಲೇ ನನಗೆ ಲಭ್ಯವಾಯಿತು. ಹೀಗಾಗಿ ಈ ಭಾಗದ ಜನರು ನನಗೆ ನೀಡಿದ ಬೆಂಬಲವನ್ನು, ನಾನು ಎಂದಿಗೂ ಮರೆಯುವುದಿಲ್ಲ.
> – ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ.

ಶ್ರೀ ಗುರುಮಲ್ಲೇಶ್ವರ ದಾಸೋಹ ಮಹಾ ಸಂಸ್ಥಾನ ಮಠಾಧ್ಯಕ್ಷ ಶ್ರೀಮಹಾಂತ ಸ್ವಾಮೀಜಿ ಆಶೀರ್ವಚನ ನೀಡಿ ಶ್ರೀಗುರು ಮಲ್ಲೇಶ್ವರರ 127ನೇ ಪುಣ್ಯಾರಾಧನೆಯ ಎರಡೂ ದಿನಗಳ ಕಾರ್ಯಕ್ರಮದಲ್ಲಿ ಭಕ್ತರು ಉತ್ಸಾಹದಿಂದ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಮೂಲಕ ಭಕ್ತಿ ಸಮರ್ಪಣೆ ಮಾಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಾಲೂರು ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಮಾಜಿ ಶಾಸಕರಾದ ಸಿ.ಎಸ್.ನಿರಂಜನ್, ಪರಿಮಳ ಮಾಗಪ್ಪ, ರಾಜ್ಯ ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪ್ರತ್ಯೇಕ ಪ್ರಕರಣ: ಕರಡಿ ದಾಳಿಯಿಂದ ಇಬ್ಬರು ರೈತರಿಗೆ ಗಾಯ

ಯಶಸ್ವಿ ಕಾರ್ಯಾಚರಣೆ: ಕರಡಿ ಸೆರೆ

ಹೆಚ್.ಡಿ.ಕೋಟೆ, ಜು.2– ಪತ್ಯೇಕ ಪ್ರಕರಣಗಳಲ್ಲಿ ಕರಡಿ ದಾಳಿಗೆ ಇಬ್ಬರು ರೈತರು ಗಾಯಗೊಂಡಿರುವ ಘಟನೆ ತಾಲೂಕಿನಲ್ಲಿ ಗುರುವಾರ ನಡೆದಿದೆ.



ತಾಲೂಕಿನ ಚಾಕನಹಳ್ಳಿ ಗ್ರಾಮದ ನಾರಾಯಣ ನಾಯಕ ಹಾಗೂ ಚಕ್ಕೋಡನಹಳ್ಳಿ ಗ್ರಾಮದ ಮರಿಗೌಡ ಗಾಯಗೊಂಡವರು.

ವಿವರ: ಚಾಕನಹಳ್ಳಿ ಗ್ರಾಮದ ನಾರಾಯಣ ನಾಯಕ ಅವರು ವೊಮ್ಮಗನ ಜೊತೆ ಗುರುವಾರ ಮುಂಜಾನೆ ಜಮೀನಿಗೆ ತೆರಳುತ್ತಿದ್ದ ವೇಳೆ ಏಕಾಏಕಿ ಕರಡಿ ದಾಳಿ ನಡೆಸಿ ಗಾಯಗೊಳಿಸಿದೆ. ಈ ವೇಳೆ ಗ್ರಾಮಸ್ಥರು ಕೂಗಾಡಿದ್ದರಿಂದ ಕರಡಿ ಸ್ಥಳದಿಂದ ಪರಾರಿಯಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಆರ್‌ಎಫ್ ರಾಮಾಂಜನೇಯಲು ಹಾಗೂ ಸಿಬ್ಬಂದಿ ಗಾಯಗೊಂಡ ನಾರಾಯಣ ನಾಯಕ ಅವರನ್ನು ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿದರು.

ಬಳಿಕ ಕಾರ್ಯಾಚರಣೆ ಆರಂಭಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಬಾಳೆಹಣ್ಣು, ಹಲಸಿನ ಹಣ್ಣು, ಬೆಲ್ಲವನ್ನು ಬೋನಿನಲ್ಲಿರಿಸಿ ಕರಡಿ ಸೆರೆಗೆ ಕಾದು ಕುಳಿತರು. ಆದರೆ ಚಾಲಾಕಿ ಕರಡಿ ಮಧ್ಯಾಹ್ನ 3 ಗಂಟೆ ವೇಳೆಗೆ ತಾಲೂಕಿನ ಚಕ್ಕೋಡನಹಳ್ಳಿ ಗ್ರಾಮದ ಬಳಿ ತೆರಳಿದ್ದು, ಈ ವೇಳೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತ ಮರಿಗೌಡರ ಮೇಲೆ ದಾಳಿ ನಡೆಸಿ ತೀವ್ರವಾಗಿ ಗಾಯಗೊಳಿಸಿದೆ. ಈ ವೇಳೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಮರಿಗೌಡರನ್ನು ಚಿಕಿತ್ಸೆಗಾಗಿ ದಾಖಲಿಸಿದ್ದಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ ಸೀಮಾ, ಮೈಸೂರು ಪ್ರಾದೇಶಿಕ ವಿಭಾಗದ ಅರಣ್ಯ ಇಲಾಖೆ ಅಧಿಕಾರಿ ಪರಮೇಶ್ ಅವರ ಮಾರ್ಗದರ್ಶನದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಚಕ್ಕೋಡನಹಳ್ಳಿ ಬಳಿ ಕರಡಿ ದಾಳಿ ಮಾಡಿದ ಜಾಗ ಪರಿಶೀಲಿಸಿ ಹೆಜ್ಜೆ ಗುರುತನ್ನು ವೀಕ್ಷಿಸಿ ಡಾ.ರಮೇಶ್ ಅವರು ಕರಡಿ ಇದ್ದ ಜಾಗ ಗುರುತಿಸಿ ಅರವಳಿಕೆ ನೀಡಿದ್ದಾರೆ. ಬಳಿಕ ಕರಡಿಯನ್ನು ರಕ್ಷಣೆ ಮಾಡಿ ಬೋನಿನಲ್ಲಿ ಕರೆದೊಯ್ದು ಅರಣ್ಯಕ್ಕೆ ಬಿಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಸಿಎಫ್‌ಗಳಾದ ಮಧು, ಸುಮಿತ್ರ, ಆರ್‌ಎಫ್‌ಓಗಳಾದ ರಾಮಾಂಜನೇಯಲು, ವಿನೋದ್‌ಗೌಡ, ರಶ್ಮಿ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಹಾಜರಿದ್ದರು. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪರಿಶಿಷ್ಟರ ಎಸ್‌ಸಿಪಿ ಮತ್ತು ಟಿಎಸ್‌ಪಿ

ಅನುದಾನ ದುರ್ಬಳಕೆ ವಿರುದ್ಧ ಹೋರಾಟ ಅಗತ್ಯ

ಮಾಜಿ ಸಚಿವ ಎನ್.ಮಹೇಶ್

ಹುಣಸೂರು, ಜು.2– ಪರಿಶಿಷ್ಟರ ಎಸ್‌ಸಿಪಿ ಮತ್ತು ಟಿಎಸ್‌ಪಿ ಅನುದಾನ ಸಮರ್ಪಕವಾಗಿ ಬಳಕೆಯಾಗಿದ್ದರೆ, 86 ಸಾವಿರ ಪರಿಶಿಷ್ಟ ಕುಟುಂಬಗಳು ಸ್ವಾವಲಂಬಿ ಬದುಕು ಕಟ್ಟಿಕೊಳ್ಳುತ್ತಿದ್ದವು. ಆದರೆ ಅನುದಾನ ದುರ್ಬಳಕೆ ವಿರುದ್ಧ ಜನಾಭಿಪ್ರಾಯ ಸಂಗ್ರಹಿಸಿ ಹೋರಾಟ ರೂಪಿಸುವ ಅಗತ್ಯವಿದೆ ಎಂದು ಮಾಜಿ ಸಚಿವ ಎನ್.ಮಹೇಶ್ ತಿಳಿಸಿದರು.



ಕಾರ್ಯಕ್ರಮವನ್ನು ಮಾಜಿ ಸಚಿವ ಎನ್.ಮಹೇಶ್ ಉದ್ಘಾಟಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ತಾಲೂಕು ಸಮಾನ ಮನಸ್ಕ ಯುವ ಪಡೆ ಆಯೋಜಿಸಿದ್ದ ಭೀಮೋತ್ಸವ ಹಾಗೂ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಪ್ರತಿವರ್ಷ 45 ಸಾವಿರ ಕೋಟಿ ರೂ. ಅನುದಾನ ಬಿಡುಗಡೆಯಾಗುತ್ತದೆ. ಕಳೆದ 3 ವರ್ಷಗಳಲ್ಲಿ 52 ಸಾವಿರ ಕೋಟಿಗಳನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿದ್ದು, ಹೀಗಾದರೆ ಪರಿಶಿಷ್ಟರು ಹೇಗೆ ಉದ್ಧಾರವಾಗುತ್ತಾರೆ ಎಂದ ಅವರು ಮೈಸೂರು ವಿವಿಯಲ್ಲಿ ಪಿಹೆಚ್‌ಡಿ ಮಾಡುತ್ತಿರುವ ಪರಿಶಿಷ್ಟ ವಿದ್ಯಾರ್ಥಿಗಳಿಗೆ 2.23ಕೋಟಿ ರೂ. ಶಿಷ್ಯವೇತನ ನೀಡದೆ ವಂಚಿಸಿರುವುದು ಯಾವ ನ್ಯಾಯ ಎಂದು ಪ್ರಶ್ನಿಸಿದರು.

ಒಳ ಮೀಸಲು ಪಡೆಯಲು ದಾಯಾದಿ ರೀತಿ ಹೋರಾಡಬೇಕಾದ ಸ್ಥಿತಿ ನಿರ್ಮಾಣವಾಗಿದ್ದು, ಪರಿಶಿಷ್ಟರಿಗೆ ಸರ್ಕಾರಿ ಹುದ್ದೆಯಲ್ಲಿ ಶೇ.2 ಹಾಗೂ ಖಾಸಗಿ ಕ್ಷೇತ್ರದಲ್ಲಿ ಶೇ.10ರಷ್ಟು ಉದ್ಯೋಗ ಸಿಗಲಿದೆ. ಇನ್ನುಳಿದ ಶೇ.88 ಮಂದಿಗೆ ಅನುದಾನ ಪೂರ್ಣ ಪ್ರಮಾಣದಲ್ಲಿ ಬಳಕೆಯಾದರೆ ಸ್ವಯಂ ಉದ್ಯೋಗದೊಂದಿಗೆ ನಾವು ಸ್ವಾವಲಂಬಿ ಬದುಕು ಸಾಧಿಸಬಹುದಾಗಿದೆ ಎಂದರು.

ಅಂಬೇಡ್ಕರ್ ಆಶಯದಂತೆ ಶಿಕ್ಷಣದ ಶಕ್ತಿಯಿಂದಾಗಿ 1951ರಲ್ಲಿ ಶೇ.16ರಷ್ಟಿದ್ದ ಸಾಕ್ಷರತೆ 2023ರಲ್ಲಿ ಶೇ.76ಕ್ಕೇರಿದೆ. ಪ್ರಧಾನಿ ಮೋದಿ ಅವರ ವಿಕಸಿತ ಭಾರತ ಯೋಜನೆಗಳಿಂದಾಗಿ 2047ಕ್ಕೆ ಶೇ.100ರಷ್ಟು ಸಾಕ್ಷರತೆ ಸಾಧಿಸಲಿದ್ದೇವೆ. ಪರಿಶಿಷ್ಟರ ಮಕ್ಕಳು ಪದವಿ ಗಳಿಸಿದರೇ ಸಾಲದು. ಕಂಪ್ಯೂಟರ್ ತರಬೇತಿ, ಸ್ಪೋಕನ್ ಇಂಗ್ಲಿಷ್ ಕಲಿಕೆ ಸೇರಿದಂತೆ ಎಲ್ಲಾ ರೀತಿಯ ಸಂವಹನ ಕೌಶಲಗಳನ್ನು ಪಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಹೆಚ್ಚು ಅಂಕಗಳಿಸಿದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಜೆಡಿಎಸ್ ಮುಖಂಡ ದೇವರಾಜ್ ಒಡೆಯರ್, ಭಲರಾಮ ಮಹಾಸಭಾ ಮುಖಂಡ ರಾಜು, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಬಸವಲಿಂಗಯ್ಯ, ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್, ದಸಂಸ ಮುಖಂಡ ನಿಂಗರಾಜ ಮಲ್ಲಾಡಿ, ತಾಲೂಕು ನಾಯಕರ ಸಂಘದ ಅಧ್ಯಕ್ಷ ಅಣ್ಣಯ್ಯ ನಾಯಕ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಡಿ.ಕೆ.ಕುನ್ನೇಗೌಡ, ಬಿಎಸ್‌ಪಿ ತಾಲೂಕು ಅಧ್ಯಕ್ಷ ಪ್ರಸನ್ನ, ದಲಿತ ಮುಖಂಡ ರಾಜು ಮಾತನಾಡಿದರು.

ನಗರಸಭೆ ಮಾಜಿ ಅಧ್ಯಕ್ಷ ಹೆಚ್.ವೈ.ಮಹದೇವು, ಸಂತೋಷ್, ನಾಗೇಶ್, ಪುಟ್ಟಮಾದಯ್ಯ, ಹೊನ್ನಪ್ಪ, ಕಿರಣ್, ಮನು, ವಾಸು, ಅಭಿಲಾಷ್, ವರದರಾಜು, ಮಹದೇವಮ್ಮ, ಭರತ್‌ಗೌಡ ಇನ್ನಿತರರಿದ್ದರು.

ವಿದ್ಯುತ್ ಖಾಸಗೀಕರಣ, ಬಿಡದಿ ಟೌನ್‌ಶಿಪ್ ಯೋಜನೆ ಕೈ ಬಿಡಲು ಆಗ್ರಹಿಸಿ

ತಿ.ನರಸೀಪುರದಲ್ಲಿ ರಾಜ್ಯ ರೈತ ಸಂಘದಿಂದ ಪ್ರತಿಭಟನೆ

ತಿ.ನರಸೀಪುರ, ಜು.2– ವಿದ್ಯುತ್ ಖಾಸಗೀಕರಣ ಪ್ರಸ್ತಾವನೆ ಕೈ ಬಿಡಬೇಕು ಹಾಗೂ ರಾಮನಗರ ಜಿಲ್ಲೆಯ ಬಿಡದಿ ಟೌನ್‌ಶಿಪ್ ಯೋಜನೆ ರದ್ದುಗೊಳಿಸಬೇಕು ಎಂದು ಆಗ್ರಹಿಸಿ ರಾಜ್ಯ ರೈತ ಸಂಘ ಹಸಿರು ಸೇನೆ (ರಿ) ತಾಲೂಕು ಘಟಕದಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ತಹಸೀಲ್ದಾರ್ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ಕೆಲಕಾಲ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಜಿಲ್ಲಾಧ್ಯಕ್ಷ ಸತೀಶ್ ರಾಜ್ ಮಾತನಾಡಿ, ವಿದ್ಯುತ್ ಜನಸಾಮಾನ್ಯರ ಮೂಲಭೂತ ಅಗತ್ಯ ಸೇವೆಯಾಗಿದ್ದು, ಅದನ್ನು ಖಾಸಗಿ ಕಂಪನಿಗಳ ಕೈಗೆ ಒಪ್ಪಿಸುವುದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ. ಮುಂಬೈನ ಟಾಟಾ ಪವರ್ ಕಂಪನಿ ಲಿಮಿಟೆಡ್ ರಾಜ್ಯದ ವಿದ್ಯುತ್ ವಿತರಣಾ ಪ್ರದೇಶಗಳಲ್ಲಿ ಸಮನಾಂತರ ವಿದ್ಯುತ್ ವಿತರಣೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿರುವುದು ಆತಂಕಕಾರಿ ಬೆಳವಣಿಗೆ. ಖಾಸಗೀಕರಣದಿಂದ ರೈತರು, ಬಡವರು ಹಾಗೂ ಮಧ್ಯಮ ವರ್ಗದವರ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಬೀಳುವ ಸಾಧ್ಯತೆ ಇದ್ದು, ಸರ್ಕಾರ ಈ ಅರ್ಜಿಯನ್ನು ತಿರಸ್ಕರಿಸಬೇಕು ಎಂದು ಒತ್ತಾಯಿಸಿದರು.



ವಿದ್ಯುತ್ ಖಾಸಗೀಕರಣ, ಬಿಡದಿ ಟೌನ್‌ಶಿಪ್ ಯೋಜನೆ ಕೈ ಬಿಡುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ಅವರು ವಿದ್ಯುತ್, ನೀರು ಹಾಗೂ ಇತರೆ ಸಾರ್ವಜನಿಕ ಸೇವೆಗಳು ಸರ್ಕಾರದ ನಿಯಂತ್ರಣದಲ್ಲಿರಬೇಕು ಎಂಬ ದೂರದೃಷ್ಟಿಯ ಪರಿಕಲ್ಪನೆ ಪ್ರತಿಪಾದಿಸಿದ್ದರು. ಜನಸೇವೆ ಉದ್ದೇಶದಿಂದ ಸ್ಥಾಪನೆಯಾದ ವಿದ್ಯುತ್ ವ್ಯವಸ್ಥೆಯನ್ನು ಲಾಭದ ಉದ್ದೇಶ ಹೊಂದಿರುವ ಖಾಸಗಿ ಸಂಸ್ಥೆಗಳಿಗೆ ಒಪ್ಪಿಸುವುದು ಜನವಿರೋಧಿ ನೀತಿಯಾಗಿದ್ದು, ಸರ್ಕಾರ ಇದಕ್ಕೆ ಅವಕಾಶ ನೀಡಬಾರದು ಎಂದು ಆಗ್ರಹಿಸಿದರು.

ತಾಲೂಕು ಅಧ್ಯಕ್ಷ ಆಲಗೂಡು ಮಹದೇವ ಮಾತನಾಡಿ, ಬಿಡದಿ ಟೌನ್‌ಶಿಪ್ ಯೋಜನೆಯಡಿ 9 ಸಾವಿರ ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳಲು ಮುಂದಾಗಿರುವ ಕ್ರಮ ಖಂಡಿಸಿದರು. ಈ ಯೋಜನೆಯಿಂದ ಕಬ್ಬು, ಭತ್ತ, ರಾಗಿ, ಜೋಳ, ರೇಷ್ಮೆ ಸೇರಿದಂತೆ ವಿವಿಧ ಆಹಾರ ಮತ್ತು ವಾಣಿಜ್ಯ ಬೆಳೆಗಳು ಬೆಳೆಯುವ ಕೃಷಿ ಭೂಮಿ ನಾಶವಾಗಲಿದ್ದು, ಲಕ್ಷಾಂತರ ಮರಗಳು ಸಹ ನಾಶವಾಗುವ ಅಪಾಯವಿದೆ. ರೈತರ ಬದುಕಿನ ಆಧಾರವಾಗಿರುವ ಭೂಮಿಯನ್ನು ಬಲವಂತವಾಗಿ ವಶಪಡಿಸಿಕೊಂಡು ವಾಣಿಜ್ಯ ಉದ್ದೇಶಕ್ಕೆ ಬಳಸುವುದು ರೈತ ವಿರೋಧಿ ಕ್ರಮವಾಗಿದ್ದು, ಸರ್ಕಾರ ಕೂಡಲೇ ಬಿಡದಿ ಟೌನ್‌ಶಿಪ್ ಯೋಜನೆ ಕೈ ಬಿಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ತಾಲೂಕು ಗೌರವಾಧ್ಯಕ್ಷ ಮುಡಕನಪುರ ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಶಿವನಂಜು, ರಾಜ್ಯ ರೈತ ಮುಖಂಡ ಕೆಜಿ.ಶಿವಪ್ರಸಾದ್, ರಾಜೇಂದ್ರ ಪ್ರಸಾದ್, ಮೂಗೂರು ಹೋಬಳಿ ಅಧ್ಯಕ್ಷ ಶಾಂತ ನಾಗರಾಜು, ಜಿಲ್ಲಾ ಗೌರವಾಧ್ಯಕ್ಷ ಮಹದೇವಸ್ವಾಮಿ, ಟೌನ್ ಅಧ್ಯಕ್ಷ ಶಾಂತರಾಜು, ಬನ್ನೂರು ಹೋಬಳಿ ಅಧ್ಯಕ್ಷ ಜಗದೀಶ್, ತಲಕಾಡು ಹೋಬಳಿ ಅಧ್ಯಕ್ಷ ಚೆಲುವರಾಜು, ಸೋಸಲೆ ಹೋಬಳಿ ಅಧ್ಯಕ್ಷ ಎನ್.ಮಹೇಶ್, ತಾಲೂಕು ಮಹಿಳಾ ಅಧ್ಯಕ್ಷೆ ಎಂ.ವಿ.ಬೇಬಿ, ವರಲಕ್ಷ್ಮಿ ಸೇರಿದಂತೆ ರೈತರು ಭಾಗವಹಿಸಿದ್ದರು.

ವಿದ್ಯಾರ್ಥಿಗಳು ಮಾದಕ ವಸ್ತುಗಳಿಂದ ದೂರವಿರಿ

ಸರಗೂರು, ಜು.2– ವಿದ್ಯಾರ್ಥಿಗಳು ಮಾದಕ ವಸ್ತುಗಳಿಂದ ದೂರವಿದ್ದು, ಉನ್ನತ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನ ಹರಿಸಬೇಕು ಎಂದು ಎಸ್‌ಐ ಕಿರಣ್ ಸಲಹೆ ನೀಡಿದರು.

ಪಟ್ಟಣದ ಪ್ರಗತಿ ವಿದ್ಯಾಸಂಸ್ಥೆಯಲ್ಲಿ ಆಯೋಜಿಸಿದ್ದ ಮಾದಕ ವಸ್ತುಗಳ ದುಷ್ಪರಿಣಾಮ, ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಮಕ್ಕಳ ವಿರುದ್ಧದ ಲೈಂಗಿಕ ಅಪರಾಧ ಕುರಿತ ಕಾನೂನು ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಧೂಮಪಾನ, ಮದ್ಯಪಾನ, ಗಂಜಾ, ಅಫೀಮು ಸೇರಿದಂತೆ ಇನ್ನಿತರ ಮಾದಕ ವಸ್ತುಗಳ ಸೇವನೆಯಿಂದ ದೂರ ಇರಬೇಕು. ಮದ್ಯ ವ್ಯಸನ ಹಾಗೂ ಬಾಲ್ಯ ವಿವಾಹ ನಿರ್ಮೂಲನೆಗೆ ಪ್ರತಿಯೊಬ್ಬರ ಸಹಕಾರ ಅಗತ್ಯ. 18 ವರ್ಷಕ್ಕಿಂತ ಮುನ್ನ ಹೆಣ್ಣು ಮಕ್ಕಳಿಗೆ ವಿವಾಹ ಮಾಡುವುದು ಅಪರಾಧ. ಮಕ್ಕಳ ವಿರುದ್ಧದ ಲೈಂಗಿಕ ಅಪರಾಧಗಳ ಬಗ್ಗೆ ಪ್ರತಿಯೊಬ್ಬರೂ ಎಚ್ಚರ ವಹಿಸಬೇಕು. ಕಾಲೇಜು ಬಳಿ ಕಾನೂನು ಮೀರಿ ಧೂಮಪಾನ, ಮದ್ಯಪಾನ ಮಾಡುವುದು ಅಪರಾಧ ವಿದ್ಯಾರ್ಥಿಗಳು ಡ್ರೈವಿಂಗ್ ಲೈಸೆನ್ಸ್ ಮಾಡಿಸದೆ ದ್ವಿಚಕ್ರ ವಾಹನ ಚಾಲನೆ ಮಾಡಬಾರದು. ಅಲ್ಲದೇ ಮನೆಯ ಸದಸ್ಯರು ದ್ವಿಚಕ್ರ, ನಾಲ್ಕು ಚಕ್ರದ ವಾಹನಗಳಲ್ಲಿ ಸಂಚರಿಸುವಾಗ ಎಚ್ಚರಿಕೆ ವಹಿಸುವಂತೆ ತಿಳಿಸಬೇಕು. ಅಲ್ಲದೇ ವಾಹನಗಳಿಗೆ ವಿಮೆ ಮಾಡಿಸಬೇಕು. ಅವಧಿ ಮುಗಿದಿದ್ದರೆ ಕಡ್ಡಾಯವಾಗಿ ನವೀಕರಣ ಮಾಡಿಸಬೇಕು. ಹೆಲ್ಮೆಟ್ ಹಾಕಬೇಕು. ಸೀಟ್ ಬೆಲ್ಟ್ ಅನ್ನು ಚಾಚು ತಪ್ಪದೇ ಬಳಸಬೇಕು. ಇಲ್ಲವಾದಲ್ಲಿ ಅದಕ್ಕೆ ತಕ್ಕ ದಂಡ ತೆರಬೇಕಾಗುತ್ತದೆ ಎಂಬುದನ್ನು ಮನದಟ್ಟು ಮಾಡಬೇಕು ಎಂದು ತಿಳಿಸಿದರು.



ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಎಸ್‌ಐ ಕಿರಣ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಎಂಎಂಕೆ ಕಾಲೇಜು ಪ್ರಾಂಶುಪಾಲ ಎಸ್.ಪಿ.ಪ್ರಕಾಶ್, ಪ್ರಗತಿ ವಿದ್ಯಾಸಂಸ್ಥೆ ಪ್ರಾಂಶುಪಾಲ ಮಂಜುಳ, ಶಾಲಾ ಕಾಲೇಜು ಶಿಕ್ಷಕ ವೃಂದ, ಪೊಲೀಸ್ ಸಿಬ್ಬಂದಿಗಳಾದ ಇಮ್ರಾನ್ ಅಹಮದ್, ಆನಂದ್, ರಾಜು, ಶಾಲಾ ಮಕ್ಕಳು ಉಪಸ್ಥಿತರಿದ್ದರು.

ರಸ್ತೆ ಒತ್ತುವರಿ ತೆರವುಗೊಳಿಸುವ ಕಾರ್ಯಕ್ಕೆ ಚಾಲನೆ

ತಿ.ನರಸೀಪುರ, ಜು.2– ಸ್ಮಶಾನಕ್ಕೆ ತೆರಳುವ ರಸ್ತೆ ಅಳತೆ ಮಾಡಿಸಿ ಒತ್ತುವರಿ ತೆರವುಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ಮಾರ್ಗ) ತಾಲೂಕು ಸಮಿತಿಯವರು ಮನವಿ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಕಂದಾಯ ಇಲಾಖೆ ಹಾಗೂ ಗ್ರಾಪಂ ವತಿಯಿಂದ ಒತ್ತುವರಿ ತೆರವುಗೊಳಿಸುವ ಕಾರ್ಯಕ್ಕೆ ಚಾಲನೆ ನೀಡಲಾಯಿತು.



ತಾಲೂಕಿನ ತಲಕಾಡು ಹೋಬಳಿ ಮಾರನಪುರ ಗ್ರಾಮದ ಸರ್ವೇ ನಂ.15ರಲ್ಲಿ 0.16 ಗುಂಟೆ ಜಮೀನು ದಲಿತರ ಸ್ಮಶಾನಕ್ಕೆ ಸೇರಿದ ಸ್ವತ್ತಾಗಿದೆ. ಈ ಸ್ಮಶಾನಕ್ಕೆ ರಸ್ತೆ ಇರುವುದಿಲ್ಲ. ಸ್ಮಶಾನದ ಜಮೀನು ಮತ್ತು ಸರ್ವೇ ನಂ.12, 13, 14ರ ಜಮೀನುಗಳ ನಡುವೆ ಓಣಿ ಇದ್ದು, ಈ ಓಣಿಯನ್ನು ಜಮೀನಿನವರು ಒತ್ತುವರಿ ಮಾಡಿಕೊಂಡಿದ್ದಾರೆ. ಇದರಿಂದ ಸಾರ್ವಜನಿಕರು ಸ್ಮಶಾನಕ್ಕೆ ಹೋಗಿ ಶವಸಂಸ್ಕಾರ ಇತರೆ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಲು ತುಂಬಾ ತೊಂದರೆಯಾಗಿದೆ. ಆದ್ದರಿಂದ ಒತ್ತುವರಿ ಮಾಡಿಕೊಂಡಿರುವ ಓಣಿ ಸ್ವತ್ತನ್ನು ಅಳತೆ ಮಾಡಿಸಿ ಒತ್ತುವರಿ ತೆರವುಗೊಳಿಸಿ ಸ್ಮಶಾನಕ್ಕೆ ಹೋಗಲು ರಸ್ತೆಯನ್ನು ಬಿಡಿಸಿ ಕೊಡಬೇಕೆಂದು ಕದಸಂಸ (ಅಂಬೇಡ್ಕರ್ ಮಾರ್ಗ) ವತಿಯಿಂದ ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಗಿತ್ತು.

ಈ ವೇಳೆ ಆರ್‌ಐ ನಾಗೇಂದ್ರ, ಹೆಮ್ಮಿಗೆ ಗ್ರಾಪಂ ಪಿಡಿಓ ಚಿದಾನಂದ, ಸರ್ವೇಯರ್ ಚಂದ್ರಶೇಖರ್, ದಸಂಸ ಜಿಲ್ಲಾ ಸಂಚಾಲಕ ಕೆಂಪಯ್ಯನಹುಂಡಿ ರಾಜು, ವಿಭಾಗೀಯ ಸಂಚಾಲಕ ಕನ್ನಾಯಕನಹಳ್ಳಿ ಮರಿಸ್ವಾಮಿ, ತಾಲೂಕು ಸಂಚಾಲಕ ನಿಲಸೋಗೆ ಕುಮಾರ್, ತೊಟ್ಟವಾಡಿ ರಾಜಪ್ಪ, ಕಾರ್ಯಕಾರಿಣಿ ಸಮಿತಿ ಸದಸ್ಯ ಮಾರನಪುರ ಕೇಶವಮೂರ್ತಿ ಸೇರಿದಂತೆ ಇನ್ನಿತರರಿದ್ದರು.

ಆದಿವಾಸಿ ಯುವಕ ಆತ್ಮಹತ್ಯೆ

ಹೆಚ್.ಡಿ.ಕೋಟೆ, ಜು.2– ಆದಿವಾಸಿ ಯುವಕ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಮಳಲಿ ಸೇತುವೆ ಬಳಿ ನಡೆದಿದೆ.



ತಾಲೂಕಿನ ಪಡುಕೋಟೆ ಕಾವಲ್ ಗ್ರಾಪಂ ವ್ಯಾಪ್ತಿಯ ಮಲಬಾರ್ ಶೆಡ್ಡು ಅರಳಿಕಟ್ಟೆ ಹಾಡಿ ನಿವಾಸಿ ಸತೀಶ್(28) ಆತ್ಮಹತ್ಯೆ ಮಾಡಿಕೊಂಡವರು. ಈತ ಬುಧವಾರ ತಾಲೂಕಿನ ಮಾರನಹಾಡಿಯಲ್ಲಿರುವ ತಂಗಿ ಮನೆಗೆ ತೆರಳಿ ವಾಪಸ್ ಬರುವ ವೇಳೆ ಮಳಲಿ ಗ್ರಾಮದ ಸೇತುವೆ ಬಳಿ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗುರುವಾರ ಬೆಳಗ್ಗೆ ರಸ್ತೆ ಬದಿ ತೆರಳುತ್ತಿದ್ದ ಪಾದಚಾರಿಗಳು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ಗಮನಿಸಿ ಅಂತರ ಸಂತೆ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ ಶವವನ್ನು ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದ್ದಾರೆ. ಈ ಸಂಬಂಧ ಅಂತರಸಂತೆ ಠಾಣೆ ಎಸ್‌ಐ ಚಂದ್ರಹಾಸ್ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಮಡುವಿನಹಳ್ಳಿಯಲ್ಲಿ ಹುಲಿ ಪ್ರತ್ಯಕ್ಷ: ಆತಂಕ

ಮಲ್ಕುಂಡಿ, ಜು.2– ಇಲ್ಲಿಗೆ ಸಮೀಪದ ಮಡುವಿನಹಳ್ಳಿಯಲ್ಲಿ ಹುಲಿ ಪ್ರತ್ಯಕ್ಷವಾಗಿದೆ. ಗ್ರಾಮದ ನಿವಾಸಿ ಶಿವಪ್ಪ ಅವರ ತೆಂಗಿನ ತೋಟದಲ್ಲಿ ಬುಧವಾರ ಮಧ್ಯಾಹ್ನ ಹುಲಿ ಕಾಣಿಸಿಕೊಂಡಿದ್ದು, ಗ್ರಾಮಸ್ಥರು ಆತಂಕಗೊಂಡು ಹುಲಿ ಸೆರೆಗೆ ಆಗ್ರಹಿಸಿದ್ದಾರೆ.



ಫೈಲ್ ಚಿತ್ರ

ಹೆಡಿಯಾಲ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಮಂಜುನಾಥ್ ಮಾತನಾಡಿ, ಪ್ರಸ್ತುತ ಮುಂಗಾರು ಆರಂಭವಾಗಿರುವುದರಿಂದ ಜಮೀನಿನಲ್ಲಿ ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಆದರೆ ಗ್ರಾಮದಲ್ಲಿ ಹುಲಿ ಪ್ರತ್ಯಕ್ಷವಾಗಿರುವುದರಿಂದ ರೈತರು ಜಮೀನಿಗೆ ತೆರಳಲು ಭಯಗೊಂಡಿದ್ದಾರೆ. ಹೀಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಕೂಡಲೇ ಹುಲಿ ಸೆರೆಗೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹೆಡಿಯಾಲ ವಿಭಾಗದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಬಳಿಕ ಹುಲಿ ಸೆರೆಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಇಂದಿರಾ ಗಾಂಧಿ ವಸತಿ ಶಾಲೆ ಬೇರೆಡೆ ಸ್ಥಳಾಂತರ ಖಂಡಿಸಿ

ಮಾಜಿ ಸಚಿವ ಸಾ.ರಾ.ಮಹೇಶ್ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ

ಭೇರ್ಯ, ಜು.2– ಸಾಲಿಗ್ರಾಮ ತಾಲೂಕಿನ ಮಿರ್ಲೆ ಹೋಬಳಿ ಕುಪ್ಪಹಳ್ಳಿಗೆ ಮಂಜೂರಾಗಿದ್ದ ಇಂದಿರಾ ಗಾಂಧಿ ವಸತಿ ಶಾಲೆಯನ್ನು ಬೇರೆಡೆಗೆ ಸ್ಥಳಾಂತರಿಸುವುದನ್ನು ಖಂಡಿಸಿ ಮಾಜಿ ಸಚಿವ ಸಾ.ರಾ.ಮಹೇಶ್ ನೇತೃತ್ವದಲ್ಲಿ ಕುಪ್ಪಳ್ಳಿ, ಮುದುಗುಪ್ಪೆ, ಮೇಲೂರು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಸಾಲಿಗ್ರಾಮ ತಾಲೂಕು ಕಚೇರಿ ಎದುರು ಗುರುವಾರ ಬೃಹತ್ ಪ್ರತಿಭಟನೆ ನಡೆಸಿದರು.

ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿ, ಕುಪ್ಪಳ್ಳಿ ಸರ್ವೇ ನಂ.49ರಲ್ಲಿ ಇಂದಿರಾ ಗಾಂಧಿ ವಸತಿ ಶಾಲೆಗೆ 10 ಎಕರೆ ಭೂಮಿ ಮಂಜೂರು ಮಾಡಿಸಲಾಗಿದೆ. ಆದರೆ ಉದ್ದೇಶಿತ ಜಾಗದಲ್ಲಿ ಬೃಹತ್ ಕಟ್ಟಡ ನಿರ್ಮಾಣ ಮಾಡದೇ ಇಂದಿರಾ ಗಾಂಧಿ ವಸತಿ ಶಾಲೆಯನ್ನು 15 ಕೋಟಿ ವೆಚ್ಚದಲ್ಲಿ ಮುಂಜನಹಳ್ಳಿ ಸಮೀಪದ ಅರಕೆರೆ ಗ್ರಾಮದಲ್ಲಿ (ಈಗಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಪಕ್ಕದಲ್ಲಿ) ನಿರ್ಮಾಣ ಮಾಡಲು ಸರ್ಕಾರ ಮತ್ತು ಶಾಸಕರು ಮುಂದಾಗಿರುವುದು ಎಷ್ಟು ಸರಿ ಎಂದು ಖಂಡಿಸಿದರು.



ಇಂದಿರಾ ಗಾಂಧಿ ವಸತಿ ಶಾಲೆ ಸ್ಥಳಾಂತರ ವಿರೋಧಿಸಿ ಪ್ರತಿಭಟನೆ ನಡೆಸಲಾಯಿತು.

ಕಾನೂನಿನಲ್ಲಿ ಅವಕಾಶವಿದ್ದರೂ, ಅರಣ್ಯ ಜಾಗ ಎಂಬ ನೆಪವೊಡ್ಡಿ ಬೇರೊಂದು ಜಾಗಕ್ಕೆ ಈ ವಸತಿ ಶಾಲೆ ಸ್ಥಳಾಂತರಿಸುತ್ತಿರುವುದು ಸರಿಯಲ್ಲ. ಇದಕ್ಕೆ ಈ ಭಾಗದ ಜನರ ವಿರೋಧವಿದೆ ಎಂದ ಅವರು ನಾನು ಶಾಸಕನಾಗಿದ್ದ ವೇಳೆ ಹೋಬಳಿಗೆ ಒಂದರಂತೆ ವಸತಿ ಶಾಲೆಗಳನ್ನು ಮಂಜೂರು ಮಾಡಿಸಿದ್ದೆ. ಗಡಿ ಭಾಗವಾದ ಕುಪ್ಪಳ್ಳಿ ಗ್ರಾಮಕ್ಕೆ ವಸತಿ ಶಾಲೆ ಮಂಜೂರಾಗಿದ್ದರಿಂದ ತಾತ್ಕಾಲಿಕವಾಗಿ ಕುಪ್ಪಳ್ಳಿಯಲ್ಲಿ ಶಾಲೆ ಆರಂಭಿಸಲಾಯಿತು.

ಅರಣ್ಯ ಜಾಗದಲ್ಲಿ ಈಗಾಗಲೇ ಪ್ರೌಢ ಶಾಲೆ ಇರುವುದರಿಂದ ಅದೇ ಶಾಲೆಯ ಕಟ್ಟಡದ ಪಕ್ಕದಲ್ಲಿ ಇದ್ದ 10 ಎಕರೆ ಸರ್ಕಾರಿ ಜಾಗವನ್ನು ಖಾಯಂ ವಸತಿ ಶಾಲೆ ಕಟ್ಟಡ ನಿರ್ಮಾಣಕ್ಕೆ ಭೂಮಿ ಮಂಜೂರು ಮಾಡಿಸಿದ್ದೆ. ಈಗ ಏಕಾಏಕಿ ಅರಣ್ಯ ಇಲಾಖೆಯು ಜಾಗ ತನ್ನದೆಂದು ತಗಾದೆ ತೆಗೆದಿದೆ. ಹಾಲಿ ಶಾಸಕರು ಈ ಸಮಸ್ಯೆ ಬಗೆಹರಿಸಬಹುದು. ಅವರಿಗೆ ಕಾನೂನಿನ ಪರಿಜ್ಞಾನ ಇಲ್ಲ ಎಂದು ಕಿಡಿಕಾರಿದರು.

> ಶಿಕ್ಷಣ ಇಲಾಖೆಗೆ ಮೀಸಲಿಟ್ಟ ಸ್ಥಳವನ್ನು ಅರಣ್ಯ ಇಲಾಖೆಗೆ ಬಿಡುವ ಬದಲು ಈಗ ವಸತಿ ಶಾಲೆಯನ್ನು ನಿರ್ಮಿಸಲು ಉದ್ದೇಶಿಸಿರುವ ಸ್ಥಳವನ್ನು ಅರಣ್ಯ ಇಲಾಖೆಗೆ ಬಿಟ್ಟುಕೊಟ್ಟು ಈ ಹಿಂದೆ ಮಂಜೂರಾದ ಸ್ಥಳದಲ್ಲಿಯೇ ಇಂದಿರಾ ಗಾಂಧಿ ವಸತಿ ಶಾಲೆ ನಿರ್ಮಿಸಬೇಕು. ಈ ಸ್ಥಳವನ್ನು ಇಂದಿರಾಗಾಂಧಿ ವಸತಿ ಶಾಲೆಗೆ ಉಳಿಸಿಕೊಳ್ಳಲು ಹಲವು ಮಾರ್ಗಗಳಿವೆ. ಇಲಾಖೆ ಹೆಸರಲ್ಲಿರುವ 10 ಎಕರೆ ಸ್ಥಳವನ್ನು ಸರ್ವೇ ಮಾಡಿಸಿ ಅಲ್ಲಿರುವ ಮಾಹಿತಿಯನ್ನು ನೀಡಿ ಹಾಗೂ ಕೇಂದ್ರ ಕಾಯ್ದೆ ಪ್ರಕಾರ ಯಾವ ಸ್ಥಳ 12 ವರ್ಷಗಳು ಶಾಲಾ – ಕಾಲೇಜು ವಶದಲ್ಲಿದೆಯೋ ಆ ಸ್ಥಳವನ್ನು ಉಳಿಸಿಕೊಳ್ಳಲು ಅವಕಾಶವಿದೆ ಅದನ್ನು ಬಳಸಿಕೊಳ್ಳಿ.
> – ಸಾ.ರಾ.ಮಹೇಶ್, ಮಾಜಿ ಸಚಿವ.

ಅದೇ ಜಾಗದಲ್ಲಿ ವಸತಿ ಶಾಲೆ ನಿರ್ಮಾಣಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಉದ್ದೇಶಿತ ಜಾಗದಲ್ಲೇ ವಸತಿ ಶಾಲೆ ನಿರ್ಮಾಣ ಮಾಡದಿದ್ದರೆ ಹೋರಾಟ ಮಾಡಲಾಗುವುದೆಂದು ಎಚ್ಚರಿಕೆ ನೀಡಿದ ಮಾಜಿ ಸಚಿವ ಸಾ.ರಾ.ಮಹೇಶ್ ಅವರು ಸ್ಥಳೀಯ ಶಾಸಕರು ಕುಪ್ಪಳ್ಳಿಯಲ್ಲಿ ವಸತಿ ಶಾಲೆ ನಿರ್ಮಾಣಕ್ಕಾಗಿ ಇಚ್ಛಾಸಕ್ತಿಯಿಂದ ಕೆಲಸ ಮಾಡಬೇಕು. ನಿಯಮಾವಳಿಗಳಲ್ಲಿ ಅದೇ ಜಾಗದಲ್ಲಿ ವಸತಿ ಶಾಲೆ ಕಟ್ಟಡ ಕಟ್ಟಲು ಅವಕಾಶ ಇರುವುದರಿಂದ ಕಂದಾಯ, ಅರಣ್ಯ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಂಟಿಯಾಗಿ ಪರಿಶೀಲನೆ ಮಾಡಬೇಕು. ಕುಪ್ಪಳ್ಳಿಯಲ್ಲಿ ವಸತಿ ಶಾಲೆ ಕಟ್ಟಡ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಒತ್ತಾಯಿಸಿದ ಅವರು ಇದೇ ಜಾಗದಲ್ಲಿ ಶಾಲೆ ನಿರ್ಮಾಣವಾದರೆ ತಾಲೂಕಿನ ಗಡಿ ಗ್ರಾಮವಾಗಿರುವ ಕುಪ್ಪಳ್ಳಿ ಹಾಗೂ ಸುತ್ತಮುತ್ತಲ ಗ್ರಾಮಗಳ ಅಭಿವೃದ್ಧಿಗೆ ಅನುಕೂಲವಾಗಲಿದೆ ಎಂದರು.

ಪ್ರತಿಭಟನೆಯಲ್ಲಿ ಕುಪ್ಪಳ್ಳಿ, ದೇವಿತಂದ್ರೆ, ಬಸವರಾಜಪುರ, ಮುದುಗುಪ್ಪೆ ಮೇಲೂರು, ತಂದ್ರೆ ಅಂಕನಹಳ್ಳಿ, ಮಿರ್ಲೆ, ಸಾಲಿಗ್ರಾಮ ಸಾರ್ವಜನಿಕರು ಹಾಗೂ ಜೆಡಿಎಸ್ ಮುಖಂಡರು ಇದ್ದರು. ತಹಸೀಲ್ದಾರ್ ರುಕಿಯಾ ಬೇಗಂ, ವಲಯ ಅರಣ್ಯಾಧಿಕಾರಿ ಮಂಜುನಾಥ್, ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಿಸ್ತರಣಾಧಿಕಾರಿ ಮೇಘನಾ ಸ್ಥಳದಲ್ಲಿದ್ದರು.

ಮೈಸೂರಲ್ಲಿ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿಯವರ ಸ್ಮರಣೆ

ಶ್ರೀಯುತರ ಸಾಧನೆ ಸುವರ್ಣಾಕ್ಷರಗಳಲ್ಲಿ ದಾಖಲು: ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ನಮನ

ಮೈಸೂರು, ಜು.2(ಎಂಕೆ)– ಗ್ರಾಮದಿಂದ ಗ್ರಾಮಕ್ಕೆ ಸಂಚರಿಸಿ ಸಾವಿರಾರು ವಚನಗಳನ್ನು ಸಂಗ್ರಹಿಸಿ, ಅವುಗಳನ್ನು ಅಮೂಲ್ಯ ಪರಂಪರೆಯನ್ನಾಗಿ ಉಳಿಸಿದ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಅವರ ಸಾಧನೆ ಕನ್ನಡ ಇತಿಹಾಸದ ಸುವರ್ಣಾಕ್ಷರಗಳಲ್ಲಿ ದಾಖಲಾಗಿದೆ ಎಂದು ಮೈಸೂರು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಸ್ಮರಿಸಿದರು.

ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಪಾಲಿಕೆ ಹಾಗೂ ಡಾ.ಫ.ಗು.ಹಳಕಟ್ಟಿಯವರ ಜಯಂತ್ಯೋತ್ಸವ ಸಮಿತಿ, ಮೈಸೂರು ಬಸವ ಬಳಗಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ 'ಡಾ.ಫ.ಗು.ಹಳಕಟ್ಟಿಯವರ ಜನ್ಮದಿನ, ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಚನ ಚಳವಳಿ, ವಚನ ಸಂತತಿ ಮಾತ್ರವಲ್ಲದೆ ಜ್ಞಾನವನ್ನು ಗೌರವಿಸುವುದಕ್ಕಾಗಿ ಡಾ.ಫ.ಗು.ಹಳಕಟ್ಟಿ ಅವರ ಜಯಂತಿ ಆಚರಿಸಲಾಗುತ್ತಿದೆ ಎಂದರು.

'ವಿದ್ಯಾಧನಂ ಸರ್ವಧನ ಪ್ರಧಾನಂ' ಎಂಬ ಸುಭಾಷಿತವು ಜ್ಞಾನದ ಮಹತ್ವವನ್ನು ಸಾರಿದರೆ, 'ಕಾಯಕವೇ ಕೈಲಾಸ' ಎಂಬ ಬಸವಾದಿ ಶರಣರ ಸಂದೇಶವು ಬದುಕಿನ ಮಾರ್ಗ ತೋರುತ್ತದೆ. ಈ ಎರಡೂ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿ ಕೊಂಡು ಕನ್ನಡದ ಜ್ಞಾನ ಸಂಪತ್ತನ್ನು ಮುಂದಿನ ಪೀಳಿಗೆಗೆ ಉಳಿಸಿ ಕೊಟ್ಟ ಮಹನೀಯ ಡಾ.ಫ.ಗು.ಹಳಕಟ್ಟಿ ಅವರು, ಕೇವಲ ಸಂಶೋಧಕರಾಗಿರದೆ ಕನ್ನಡದ ಆತ್ಮವನ್ನು ಮುಂದಿನ ತಲೆಮಾರಿಗೆ ತಲುಪಿಸುವ ಸಾಂಸ್ಕೃತಿಕ ಸೇತುವೆಯಾಗಿ ಕೆಲಸ ಮಾಡಿದ್ದಾರೆ ಎಂದು ನೆನೆದರು.

ಹಾಗೆಯೇ ವಿದ್ಯಾರ್ಥಿಗಳು ಓದುವ ಹವ್ಯಾಸವನ್ನಿಟ್ಟುಕೊಳ್ಳಬೇಕು. ಸಾಹಿತ್ಯದ ಮೇಲೆ ಅಭಿಮಾನ ಬೆಳೆಸಿಕೊಳ್ಳಬೇಕು. ಜ್ಞಾನದಾನವೆಂಬುದು ಕೇವಲ ಪುಸ್ತಕಗಳನ್ನು ನೀಡುವುದಲ್ಲ. ಮನಸ್ಸನ್ನು ಆಲೋಚಿಸುವಂತೆ ಮಾಡುವುದು, ಪ್ರಶ್ನಿಸುವ ಧೈರ್ಯವನ್ನು ತುಂಬಿ, ಉತ್ತಮ ಸಮಾಜವನ್ನು ನಿರ್ಮಿಸುವುದಾಗಿದೆ ಎಂದು ತಿಳಿಸಿದರು.



ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಡಾ.ಫ.ಗು.ಹಳಕಟ್ಟಿಯವರ ಜನ್ಮದಿನ, ವಚನ ಸಾಹಿತ್ಯ ಸಂರಕ್ಷಣಾ ದಿನ ಆಚರಿಸಲಾಯಿತು. ಗಾವಡಗೆರೆ ಶ್ರೀ ಗುರುಲಿಂಗಜಂಗಮ ದೇವರ ಮಠದ ಶ್ರೀ ನಟರಾಜ ಸ್ವಾಮೀಜಿ, ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ, ಮೈಸೂರು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಮತ್ತಿತರರಿದ್ದರು.

ಕನ್ನಡ ಸಾಹಿತ್ಯ ಲೋಕದ ಧ್ರುವತಾರೆ: ಡಾ.ಮಹೇಂದ್ರ ಮೂರ್ತಿ ದೇವನೂರು ರಚಿತ 'ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಜೀವನ ಸಾಧನೆ' ಕೃತಿ ಬಿಡುಗಡೆ ಮಾಡಿದ ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ ಮಾತನಾಡಿ, ಕನ್ನಡ ಸಾಹಿತ್ಯ ಲೋಕದ ಧ್ರುವತಾರೆ, 12ನೇ ಶತಮಾನದ ಶರಣರ ಚಿಂತನೆಗಳನ್ನು ನಮಗೆ ಮರಳಿ ತಂದುಕೊಟ್ಟ ಮಹಾಪುರುಷ ಡಾ. ಫಕೀರಪ್ಪ ಗುರುಬಸಪ್ಪ ಹಳಕಟ್ಟಿ (ಫ. ಗು. ಹಳಕಟ್ಟಿ) ಇವರನ್ನು ಇಡೀ ನಾಡು ಅತ್ಯಂತ ಪ್ರೀತಿ ಮತ್ತು ಗೌರವದಿಂದ 'ವಚನ ಪಿತಾಮಹ' ಎಂದು ಕರೆಯುತ್ತದೆ ಎಂದರು.

ಜಾಗತಿಕ ಮಟ್ಟದಲ್ಲಿ ಕೀರ್ತಿ: 12ನೇ ಶತಮಾನದಲ್ಲಿ ಬಸವಣ್ಣನವರು, ಅಕ್ಕಮಹಾದೇವಿ, ಅಲ್ಲಮಪ್ರಭುಗಳಂತಹ ನೂರಾರು ಶರಣರು ರಚಿಸಿದ ವಚನಗಳು ಕಾಲಗರ್ಭದಲ್ಲಿ ಮರೆಯಾಗಿದ್ದವು. ಮಠಗಳ ಕತ್ತಲೆ ಕೋಣೆಗಳಲ್ಲಿ, ಮನೆಗಳ ಮೂಲೆಗಳಲ್ಲಿ ತಾಳೆಗರಿಗಳ ಗದ್ದಲು ಹಿಡಿಯುತ್ತಿದ್ದವು. ಇವುಗಳನ್ನು ಸಂಗ್ರಹಿಸಿ, ತಮ್ಮ 'ಶಿವಾನುಭವ' ಪತ್ರಿಕೆ ಮೂಲಕ ವಚನ ಸಾಹಿತ್ಯವನ್ನು ಮನೆಮನೆಗೆ ತಲುಪಿಸಿದರು. ಬಸವಣ್ಣನವರ ವಚನಗಳನ್ನು ಇಂಗ್ಲಿಷ್‌ಗೆ ಅನುವಾದಿಸಿ ಜಾಗತಿಕ ಮಟ್ಟದಲ್ಲೂ ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಇಂತಹ ಮಹಾನ್ ಚೇತನದ ದೇಶಭಕ್ತಿ, ಭಾಷಾಭಿಮಾನ ಮತ್ತು ತ್ಯಾಗದ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದು ಹೇಳಿದರು.

ಅಭಿನಂದನೆ: ಶರಣ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಮ.ಗು.ಸದಾನಂದಯ್ಯ, ಡಾ.ಹೆಳವರಹುಂಡಿ ಸಿದ್ದಪ್ಪ, ಪ್ರೊ.ಚಂದ್ರಶೇಖರಯ್ಯ, ಡಾ.ಲತಾ ರಾಜಶೇಖರ್, ಪ್ರೊ.ಎಸ್.ಶಿವರಾಜಪ್ಪ, ಶ್ರೀಮತಿ ಶಕುಂತಲ ಜಯದೇವ್, ಎಲ್.ಶಿವಲಿಂಗಪ್ಪ, ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಶರಣೆ ಎಂ.ಎ.ನೀಲಾಂಬಿಕೆ, ಡಿ.ಎನ್.ಲೋಕಪ್ಪ, ವಚನ ಕುಮಾರಸ್ವಾಮಿ, ಚೌಹಳ್ಳಿ ಲಿಂಗರಾಜಪ್ಪ, ಕಲ್ಲಳ್ಳಿ ನಟರಾಜು ಹಾಗೂ ವಚನ ಚೂಡಾಮಣಿ ಅವರನ್ನು ಅಭಿನಂದಿಸಲಾಯಿತು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಹೆಚ್.ವಿ.ಬಸವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಮೈಸೂರು ಕೈಗಾರಿಕಾ ಮತ್ತು ವಾಣಿಜ್ಯ ಸಂಘದ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು, ಮೈಸೂರು ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಮೆರವಣಿಗೆ ಸಮಿತಿ ಅಧ್ಯಕ್ಷ ಕೆ.ವಿ.ಮಲ್ಲೇಶ್, ಪ್ರಧಾನ ಕಾರ್ಯದರ್ಶಿ ಎ.ಪಿ.ವಿರೂಪಾಕ್ಷ, ಕೋಶಾಧ್ಯಕ್ಷ ಜೀವಾರಹಳ್ಳಿ ಜೈಶಂಕರ್, ಪ್ರಧಾನ ಸಂಚಾಲಕ ದೇವರಾಜ ಪಿ.ಚಿಕ್ಕಹಳ್ಳಿ ಮತ್ತಿತರರು ಉಪಸ್ಥಿತರಿದ್ದರು.

> ಹರಿದ ಬಟ್ಟೆಯಲ್ಲೇ ತಮ್ಮ ಬಡತನವನ್ನು ಕಳೆದಂತಹ ಹಳಕಟ್ಟಿಯವರು, ಇಂದು ಹರಿದು ಹಂಚಿ ಹೋಗಿರುವ ಮನಸ್ಸುಗಳನ್ನು ಒಂದುಗೂಡಿಸುವ ಶ್ರೇಷ್ಠ ಸಿದ್ಧಾಂತವನ್ನು ನಮಗೆ ಕೊಟ್ಟು ಹೋಗಿದ್ದಾರೆ. ಅವರ ಬದುಕು ಮತ್ತು ಬರಹ ಎರಡೂ ಅವರ ದಿವ್ಯ ಜೀವನದ ಉದಾತ್ತತೆಗೆ ಸಾಕ್ಷಿಯಾಗಿವೆ. ಹಾಗೆಯೇ ವಚನಗಳು ಕೇವಲ ಒಂದು ಧರ್ಮಕ್ಕೆ ಸೀಮಿತವಲ್ಲ, ಅವು ಇಡೀ ಮಾನವ ಕುಲವನ್ನು ಒಂದುಗೂಡಿಸುವ ಶಕ್ತಿ ಹೊಂದಿವೆ.
> – ಶ್ರೀ ನಟರಾಜ ಸ್ವಾಮೀಜಿ,
> ಶ್ರೀ ಗುರುಲಿಂಗಜಂಗಮ ದೇವರ ಮಠ, ಗಾವಡಗೆರೆ

ರಘು ಕೌಟಿಲ್ಯ ಪ್ರಮಾಣ ವಚನ ಸ್ವೀಕಾರ





ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಗುರುವಾರ ನಡೆದ ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯರಾಗಿ ರಘು ಕೌಟಿಲ್ಯ ಪ್ರಮಾಣವಚನ ಸ್ವೀಕರಿಸಿದರು. ಈ ವೇಳೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಇತರರು ಆರ್.ರಘು ಕೌಟಿಲ್ಯ ಅವರನ್ನು ಅಭಿನಂದಿಸಿ (ಎಡಚಿತ್ರ) ಶುಭ ಕೋರಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾ ಇಂಟಿ ಬಂಗಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಬಲರಾಮನ ಆ ದಿನಗಳು (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಅಲ್ಪಾ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ನಾಗಬಂಧನಂ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಗಟ್ಟಾ ಕುಸ್ತಿ (ತೆ)	4 ಪ್ರದರ್ಶನಗಳು
ಸಂಗಂ	
ನಾಗಬಂಧನಂ (ಕ)	4 ಪ್ರದರ್ಶನಗಳು
ಲಿಡೋ	
ಡೆಡ್ಲಿ ಕಿಲ್ಲರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಅಪರಾಧಿ ನಾನಲ್ಲ (ಕ)	4 ಪ್ರದರ್ಶನಗಳು

ಈಗ ಮೈಸೂರಿನ ಮಾನಸ ಗಂಗೋತ್ರಿಯಲ್ಲೂ ಫ್ಲೆಕ್ಸ್‌ಗಳ ಹಾವಳಿ

ಮೈಸೂರು, ಜು.2(ಎಂಟಿವೈ)– ಮೈಸೂರಿನ ಸೌಂದರ್ಯಕ್ಕೆ ಧಕ್ಕೆಯುಂಟು ಮಾಡುತ್ತಿರುವ ಫ್ಲೆಕ್ಸ್ ಹಾವಳಿಗೆ ಕಡಿವಾಣ ಹಾಕುವಂತೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಆಗ್ರಹ ಕೇಳಿ ಬರುತ್ತಿರುವ ಸಂದರ್ಭದಲ್ಲಿಯೇ ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿ ಆವರಣದ ದೊಡ್ಡ ಗಡಿಯಾರ ಸೇರಿದಂತೆ ವಿವಿಧೆಡೆ ಫ್ಲೆಕ್ಸ್‌ಗಳು ರಾರಾಜಿಸುತ್ತಿದ್ದು ಪ್ರಜ್ಞಾವಂತರು ತೀವ್ರ ಆಕ್ಷೇಪ ವ್ಯಕ್ತವಾಗುತ್ತಿದೆ.



ಶತಮಾನದ ಇತಿಹಾಸವುಳ್ಳ ಮೈಸೂರು ವಿಶ್ವವಿದ್ಯಾನಿಲಯ ತನ್ನದೇ ಆದ ಮಹತ್ವ ಮತ್ತು ಪರಂಪರೆಯಿಂದ ದೇಶ–ವಿದೇಶಗಳಲ್ಲಿ ಗಮನ ಸೆಳೆದಿದೆ. ಉತ್ತಮ ಪರಿಸರ, ವಿಶಾಲ ಕ್ಯಾಂಪಸ್‌ನಿಂದ ಕಂಗೊಳಿಸುತ್ತಿದ್ದ ಮೈಸೂರು ವಿವಿ ಆವರಣದಲ್ಲಿ ಇತ್ತೀಚೆಗೆ ಕಾಣಿಸಿಕೊಳ್ಳುತ್ತಿರುವ ಫ್ಲೆಕ್ಸ್ ಹಾವಳಿ ವಿವಿ ಸೌಂದರ್ಯವನ್ನು ಹಾಳು ಮಾಡುತ್ತಿದೆಯಲ್ಲದೆ, ಶಿಕ್ಷಣ ಸುಧೆ ಹರಿಸಬೇಕಾದ ವಿವಿಯ ಬಗ್ಗೆ ಅಸಮಾಧಾನ ವ್ಯಕ್ತವಾಗುತ್ತಿದೆ.

ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಹಲವು ವರ್ಷ ಸೇವೆ ಸಲ್ಲಿಸಿ ನಿವೃತ್ತರಾದ ಪ್ರಾಧ್ಯಾಪಕರಿಗೆ ಬೀಳ್ಕೊಡುವ ಸಂದರ್ಭದಲ್ಲಿ ವಿವಿಧೆಡೆ ಫ್ಲೆಕ್ಸ್ ಹಾಕಲಾಗಿದೆ. ಕಾರ್ಯಕ್ರಮ ಮುಗಿದು 3–4 ದಿನವಾದರೂ ಶುಭಕೋರುವ ಫ್ಲೆಕ್ಸ್‌ಗಳನ್ನು ತೆರವು ಮಾಡದೇ ಇರುವುದಕ್ಕೆ ಶಿಕ್ಷಣ ತಜ್ಞರು, ಸಾಹಿತಿಗಳು ಹಾಗೂ ಸಾರ್ವಜನಿಕ ವಲಯದಲ್ಲಿ ಅಸಮಾಧಾನ ವ್ಯಕ್ತವಾಗಿದೆ.

ಅದರಲ್ಲೂ ಶತಮಾನೋತ್ಸವ ನೆನಪಿನಲ್ಲಿ ನಿರ್ಮಿಸಿರುವ ದೊಡ್ಡಗಡಿಯಾರಕ್ಕೆ ಬೃಹತ್ ಫ್ಲೆಕ್ಸ್ ಹಾಕಲಾಗಿದೆ. ಇದರಿಂದ ದೊಡ್ಡಗಡಿಯಾರದ ಸೌಂದರ್ಯಕ್ಕೆ ಧಕ್ಕೆಯಾಗುತ್ತಿದೆ. ಕಾರ್ಯಕ್ರಮ ಮುಗಿದ ಬಳಿಕ ಫ್ಲೆಕ್ಸ್ ಹಾಕಿದ್ದವರು ಅದನ್ನು ಗೌರವ ಯುತವಾಗಿ ತೆರವುಗೊಳಿಸಬೇಕಾಗಿತ್ತು. ಆದರೆ, 3–4 ದಿನವಾದರೂ ಫ್ಲೆಕ್ಸ್ ಅಲ್ಲಿಯೇ ಇದೆ. ಈ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಘನತೆ ಎತ್ತಿ ಹಿಡಿಯುವಂತೆ ಹಾಗೂ ಅಲ್ಲಿನ ಸೌಂದರ್ಯಕ್ಕೆ ಧಕ್ಕೆಯಾಗುವಂತಹ ಫ್ಲೆಕ್ಸ್‌ಗಳನ್ನು ಹಾಕದೆ ಇರಲು ವಿವಿಯ ಎಲ್ಲಾ ಬೋಧಕ, ಬೋಧಕೇತರರು, ವಿದ್ಯಾರ್ಥಿಗಳು ಹಾಗೂ ಆಡಳಿತ ವರ್ಗ ಸ್ವಯಂ ಪ್ರೇರಣೆಯಿಂದ ಮುಂದಾಗಬೇಕು ಎಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

ಜು.5ಕ್ಕೆ ಡಿ.ಬನುಮಯ್ಯನವರ ಜಯಂತಿ: ಉಚಿತ ಆರೋಗ್ಯ ತಪಾಸಣೆ



ವಿವಿಧ ಕಾರ್ಯಕ್ರಮಗಳ ಪೋಸ್ಟರ್ ಅನ್ನು ಶಾಸಕ ಟಿ.ಎಸ್.ಶ್ರೀವತ್ಸ ಬಿಡುಗಡೆ ಮಾಡಿದರು.

ಮೈಸೂರು, ಜು.2– ಧರ್ಮ ಪ್ರಕಾಶ್ ರಾವ್ ಬಹುದ್ದೂರ್ ಡಿ.ಬನುಮಯ್ಯ ಯುವ ಬ್ರಿಗೇಡ್ ವತಿಯಿಂದ ಡಿ.ಬನುಮಯ್ಯ ಅವರ 166ನೇ ಜಯಂತಿ ಅಂಗವಾಗಿ ಜುಲೈ 5ರಂದು ಅರ್ಥಪೂರ್ಣ ಕಾರ್ಯಕ್ರಮಗಳೊಂದಿಗೆ ಹಮ್ಮಿಕೊಳ್ಳಲಾಗಿದೆ.

ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಡಿ.ಬನುಮಯ್ಯ ಕಾಲೇಜಿನ ಆವರಣದಲ್ಲಿ ಅಂದು ಮಧ್ಯಾಹ್ನ 12 ಗಂಟೆಗೆ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್ ವಿತರಣೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಇದೇ ವೇಳೆ ನವನೀತ್ ನೇತ್ರಾಲಯ ವತಿಯಿಂದ ಕಣ್ಣಿನ ತಪಾಸಣೆ, ಸುಯೋಗ್ ಮಲ್ಟಿಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಹಾಗೂ ಜೀವದಾರ ರಕ್ತ ನಿಧಿ ಕೇಂದ್ರದ ಸಹಯೋಗದೊಂದಿಗೆ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ.

ಈ ಕಾರ್ಯಕ್ರಮಗಳ ಪೋಸ್ಟರ್ ಅನ್ನು ಕೆ.ಆರ್.ಮೊಹಲ್ಲಾದಲ್ಲಿರುವ ಶ್ರೀ ಕೊಲ್ಲಾಪುರದ ಮಹಾಲಕ್ಷ್ಮಿ ದೇವಸ್ಥಾನದ ಮುಂಭಾಗ ಬಿಡುಗಡೆಗೊಳಿಸಿದ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಈಗಿನ ಪರಿಸ್ಥಿತಿಯಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ. ನಾನಾ ವೈರಸ್, ಹವಾಮಾನ ವೈಪರೀತ್ಯಗಳಿಂದ ನಾನಾ ಕಾಯಿಲೆಗಳು ಬಾಧಿಸುತ್ತಿವೆ. ಇಂತಹ ಸಂದರ್ಭದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರಗಳು ಸಹಕಾರಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರದೀಪ್ ಕುಮಾರ್, ರವಿ, ದೀಪಕ್, ಸುರೇಶ್, ಶಿವಣ್ಣ, ಪ್ರಕಾಶ್, ಭಾರತಿ, ಮಹಾಲಕ್ಷ್ಮೀ, ಹೇಮಾ, ತಾಯಮ್ಮ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ನೂತನ ಪದಾಧಿಕಾರಿಗಳ ಆಯ್ಕೆ



ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್‌ನ ನೂತನ ಪದಾಧಿಕಾರಿಗಳನ್ನು ನಿಕಟಪೂರ್ವ ತಂಡದ ವತಿಯಿಂದ ಅಭಿನಂದಿಸಲಾಯಿತು.

ಮೈಸೂರು, ಜು.2– ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್(ಎಂಟಿಎ)ಗೆ ನೂತನ ಪದಾಧಿಕಾರಿಗಳು ಆಯ್ಕೆಯಾಗಿದ್ದಾರೆ.

ಇತ್ತೀಚೆಗೆ ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್‌ನ 2025–26ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ನಂತರ 2026–28ನೇ ಅವಧಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಸಿ.ಎ.ಜಯ ಕುಮಾರ್, ಉಪಾಧ್ಯಕ್ಷರಾಗಿ ಸಮರ್ಥ್ ವೈದ್ಯ, ಕಾರ್ಯದರ್ಶಿ ಅಭಿನಂದನ್ ಸಾಲಿಗ್ರಾಮ, ಖಜಾಂಚಿಯಾಗಿ ಅರುಣ್ ಕುಮಾರ್, ಜಂಟಿ ಕಾರ್ಯದರ್ಶಿಯಾಗಿ ಬಿ.ಪಿ.ಪ್ರಜ್ವಲ್, ಜನಸಂಪರ್ಕ ಅಧಿಕಾರಿ (ಪಿಆರ್‌ಒ)ಯಾಗಿ ಎಸ್.ಜೆ.ಅಶೋಕ್ ಅವಿರೋಧವಾಗಿ ಆಯ್ಕೆಯಾದರು.

ಇನ್ನು ಸಾಂಸ್ಕೃತಿಕ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಎ.ಸಿ.ರವಿ, ವಿನೋದ್, ರಾಘವೇಂದ್ರ, ಚಂದ್ರು ಗೌಡ, ರವೀಂದ್ರ ಕುಮಾರ್, ಪುನೀತ್ ಕುಮಾರ್ ಜೈನ್ ಆಯ್ಕೆಯಾಗಿದ್ದು, ನೂತನ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಿಗೆ ನಿಕಟಪೂರ್ವ ತಂಡ ಶುಭಕೋರಿತು.


ವಿದ್ಯುತ್ ಸರಬರಾಜಿನಲ್ಲಿ ಬದಲಾವಣೆ

ಮೈಸೂರು, ಜು.2– ಕಡಕೊಳ ಸ್ವೀಕರಣಾ ಕೇಂದ್ರದಲ್ಲಿ ತುರ್ತು ಕಾಮಗಾರಿ ನಿಮಿತ್ತ ಹೆಚ್.ಡಿ.ಕೋಟೆ ಉಪವಿಭಾಗದ ಹಂಪಾಪುರ ಶಾಖಾ ವ್ಯಾಪ್ತಿಯ ಯರಹಳ್ಳಿ–ಹ್ಯಾಂಡ್ ಪೋಸ್ಟ್ ವಿದ್ಯುತ್ ವಿತರಣಾ ಕೇಂದ್ರಗಳ ಐ.ಪಿ ವಿದ್ಯುತ್ ಮಾರ್ಗಗಳ ವಿದ್ಯುತ್ ಸರಬರಾಜನ್ನು ಜುಲೈ 3 ರಂದು ಹಗಲಿನಲ್ಲಿ ನೀಡುವ ವಿದ್ಯುತ್‌ನ್ನು ಜುಲೈ 2 ರಂದು ರಾತ್ರಿ ವೇಳೆಯಲ್ಲಿ ಐ.ಪಿ ವಿದ್ಯುತ್ ಮಾರ್ಗಗಳಿಗೆ ವಿದ್ಯುತ್ ಸರಬರಾಜನ್ನು ನೀಡಲಾಗುವುದು.

ಹಂಪಾಪುರ 66/11ಕೆವಿ ವಿದ್ಯುತ್ ವಿತರಣಾ ಕೇಂದ್ರದ ಐ.ಪಿ ಮಾರ್ಗಗಳು: ಕಂಚಮಳ್ಳಿ ಐ.ಪಿ, ಬಾಚೇಗೌಡನಹಳ್ಳಿ ಐ.ಪಿ. ಮಾದಾಪುರ ಐ.ಪಿ. ಮಲಾರದಹುಂಡಿ ಐ.ಪಿ. ಚಿಕ್ಕನಂದಿ ಐ.ಪಿ ವಿದ್ಯುತ್ ಮಾರ್ಗಗಳು.

ಯರಹಳ್ಳಿ–ಹ್ಯಾಂಡ್‌ಪೋಸ್ಟ್ 66/11ಕೆವಿ ವಿದ್ಯುತ್ ವಿತರಣಾ ಕೇಂದ್ರದ ಐ.ಪಿ ಮಾರ್ಗಗಳು: ಕೋಳಗಾಲ ಐ.ಪಿ. ಶಿರಮಳ್ಳಿ ಐ.ಪಿ. ವಿಶ್ವೇಶ್ವರ ಐ.ಪಿ, ಮಲಾರ ಐ.ಪಿ ವಿದ್ಯುತ್ ಮಾರ್ಗಗಳಲ್ಲಿ ವಿದ್ಯುತ್ ಸರಬರಾಜು ನೀಡಲಾಗುವುದು ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ವಿಭಾಗದ ನೂತನ ಪದಾಧಿಕಾರಿಗಳ ಪದಗ್ರಹಣ



ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ವಿಭಾಗದ ನೂತನ ಪದಾಧಿಕಾರಿಗಳು.

ಮೈಸೂರು, ಜು.2– ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ವಿಭಾಗದ ನೂತನ ಪದಾಧಿಕಾರಿಗಳ ಪದಗ್ರಹಣ ನೆರವೇರಿತು.

ಮೈಸೂರಿನಲ್ಲಿ ನಡೆದ 2025–26ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ 2026–28ನೇ ಅವಧಿಗೆ ಅಧ್ಯಕ್ಷರಾಗಿ ಎಸ್.ಜೆ.ಅಶೋಕ್, ಉಪಾಧ್ಯಕ್ಷರಾಗಿ ಎಂ.ಎಲ್.ನಾಗೇಶ್, ಕಾರ್ಯದರ್ಶಿಯಾಗಿ ಸಮರ್ಥ್ ಜಿ. ವೈದ್ಯ, ಖಜಾಂಚಿಯಾಗಿ ಆರ್.ಆದರ್ಶ್ ಹಾಗೂ ಪಿಆರ್ ಡೈರೆಕ್ಟರ್ ಆಗಿ ಎಂ.ಪಿ.ಧಾತ್ರಿ ಭಾರದ್ವಾಜ್ ಅವಿರೋಧವಾಗಿ ಆಯ್ಕೆಯಾಗಿ, ಅಧಿಕಾರ ಸ್ವೀಕರಿಸಿದರು. ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರಿನ ನಿಕಟಪೂರ್ವ ಅಧ್ಯಕ್ಷ ಸಿ.ಎ.ಜಯಕುಮಾರ್ ನೂತನ ತಂಡಕ್ಕೆ ಅಧಿಕೃತವಾಗಿ ಅಧಿಕಾರ ಹಸ್ತಾಂತರ ಮಾಡಿದರು. ಈ ವೇಳೆ ಸಂಸ್ಥೆಯ ಸದಸ್ಯರು ಉಪಸ್ಥಿತರಿದ್ದರು.

'ಸ್ಕಾಲ್ ಇಂಟರ್‌ನ್ಯಾಷನಲ್' ಅಂತಾರಾಷ್ಟ್ರೀಯ ಪ್ರವಾಸೋದ್ಯಮ ಒಕ್ಕೂಟದ ಸ್ಥಳೀಯ ವಿಭಾಗವಾದ ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ಸಂಸ್ಥೆಯು ಪ್ರವಾಸೋದ್ಯಮ, ಆತಿಥ್ಯ ಕ್ಷೇತ್ರದ ಅಭಿವೃದ್ಧಿ, ಪ್ರವಾಸೋದ್ಯಮಿಗಳ ಶ್ರೇಯೋಭಿವೃದ್ಧಿ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಮೈಸೂರಿನ ಬಗ್ಗೆ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಮಾಡುವ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಮೈಸೂರು, ಕೊಡಗು ಭಾಗದ ಪ್ರವಾಸೋದ್ಯಮಿಗಳು ಈ ಸಂಸ್ಥೆಯ ಭಾಗವಾಗಿದ್ದಾರೆ.

ವೈದ್ಯಕೀಯ ಸೌಲಭ್ಯ ಇನ್ನು ಬಡವರಿಗೆ ಸಮರ್ಪಕವಾಗಿ ತಲುಪುತ್ತಿಲ್ಲ

ನಿವೃತ್ತ ಮುಖ್ಯ ಮಾಹಿತಿ ಆಯುಕ್ತರಾದ ಜಿ.ಸತ್ಯವತಿ ವಿಷಾದ

ಮೈಸೂರು, ಜು.2(ವಿವಿಹೆಚ್)– ಇಂದು ಭಾರತದಲ್ಲಿ ಸಾರ್ವಜನಿಕ ಆರೋಗ್ಯ ಒಂದು ದೊಡ್ಡ ಸವಾಲಾಗಿದೆ. ವೈದ್ಯಕೀಯ ಸೌಲಭ್ಯಗಳು ಮತ್ತು ತಂತ್ರಜ್ಞಾನದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದ್ದರೂ ಅದರ ಪ್ರಯೋಜನ ಸಮಾಜದ ಬಡವರು ಮತ್ತು ಸಾಮಾನ್ಯ ಜನರಿಗೆ ಸಮರ್ಪಕವಾಗಿ ತಲುಪುತ್ತಿಲ್ಲ ಎಂದು ನಿವೃತ್ತ ಮುಖ್ಯ ಮಾಹಿತಿ ಆಯುಕ್ತರಾದ ಜಿ.ಸತ್ಯವತಿ ಅಭಿಪ್ರಾಯಪಟ್ಟರು.



ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿಯಲ್ಲಿ ನಡೆದ 'ಸಮವರ್ತನಾ–4' ಕಾರ್ಯಕ್ರಮದಲ್ಲಿ ಪದವೀಧರ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ನಗರದ ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿಯ ರಾಜೇಂದ್ರ ಸಭಾಂಗಣದಲ್ಲಿ ಗುರುವಾರ ನಡೆದ 'ಸಮವರ್ತನಾ–4' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸಾರ್ವಜನಿಕ ಆರೋಗ್ಯ ಎಂದರೆ ಕೇವಲ ವೈದ್ಯರು ಮತ್ತು ವೈದ್ಯಕೀಯ ಇಲಾಖೆ ಜವಾಬ್ದಾರಿಯಲ್ಲ. ಔಷಧ ತಜ್ಞರು, ಔಷಧ ಕಂಪನಿಗಳು, ಸಂಶೋಧಕರು, ಕಟ್ಟಕಡೆಯ ಸಿಬ್ಬಂದಿ ಪಾತ್ರವೂ ಅಷ್ಟೇ ಮುಖ್ಯ ಎಂದು ತಿಳಿಸಿದರು.

ಸರ್ಕಾರಿ ಆಸ್ಪತ್ರೆಗಳು ಮತ್ತು ಆರೋಗ್ಯ ಸೇವೆಗಳು ಹಗಲಿರುಳು ದುಡಿಯುತ್ತಿದ್ದರೂ ಹಲವು ಸವಾಲುಗಳಿವೆ. ವೈದ್ಯರ ಕೊರತೆ ಇದೆ. ಅನೇಕರು ಗ್ರಾಮೀಣ ಪ್ರದೇಶಗಳಲ್ಲಿ ಅಥವಾ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ಮುಂದೆ ಬರುವುದಿಲ್ಲ. ಹೀಗೆ ನಾನಾ ಸಮಸ್ಯೆಗಳ ನಡುವೆ ವೈದ್ಯಕೀಯ ಸೌಲಭ್ಯ ದೊರೆಯುವಂತೆ ಮಾಡಲು ಅವಿರತ ಶ್ರಮಿಸಲಾಗುತ್ತಿದೆ ಎಂದರು.

ಭಾರತ ಒಂದು ಭಾಗ್ಯಶಾಲಿ ದೇಶ. ಔಷಧಿಗಳ ಬೆಲೆ ವಿಶ್ವದ ಅನೇಕ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಅತ್ಯಂತ ಕಡಿಮೆ. ಅಮೆರಿಕದಂತಹ ದೇಶಗಳಲ್ಲಿ ಬಹುತೇಕ ಔಷಧಿಗಳನ್ನು ವೈದ್ಯರ ಚೀಟಿ ಇಲ್ಲದೆ ಖರೀದಿಸಲು ಸಾಧ್ಯವಿಲ್ಲ. ಆದರೆ ಭಾರತದಲ್ಲಿ ಅನೇಕ ಔಷಧಿಗಳು ಸುಲಭವಾಗಿ ದೊರೆಯುತ್ತವೆ ಎಂದರು.


ಇಂದು ಕೃತಕ ಬುದ್ಧಿಮತ್ತೆ (ಎಐ), ಗೂಗಲ್, ಗೂಗಲ್ ಜೆಮಿನಿ, ಚಾಟ್‌ಜಿಪಿಟಿ ಮುಂತಾದ ತಂತ್ರಜ್ಞಾನಗಳ ಮೂಲಕ ಜನರು ಯಾವುದೇ ಔಷಧಿಯ ಬಗ್ಗೆ ಕ್ಷಣಾರ್ಧದಲ್ಲಿ ಮಾಹಿತಿ ಪಡೆಯುತ್ತಿದ್ದಾರೆ. ಇದರ ಪರಿಣಾಮವಾಗಿ ಪ್ರತಿಯೊಂದು ಮನೆಯಲ್ಲೂ ಒಬ್ಬ 'ಅನಧಿಕೃತ ವೈದ್ಯ' ಇದ್ದಂತಾಗಿದೆ. ಆದರೆ ವೈದ್ಯರ ಸಲಹೆಯಿಲ್ಲದೆ ಔಷಧಿಗಳನ್ನು ಬಳಸುವುದು ಅಪಾಯಕಾರಿ ಎಂದು ತಿಳಿಸಿದರು.

ಇಂದು ಸಾಮಾನ್ಯ ಜನರು ಗೂಗಲ್‌ನಲ್ಲಿ ಔಷಧಿಗಳ ಬಗ್ಗೆ ಮಾಹಿತಿ ಹುಡುಕುತ್ತಾರೆ. ಅದರ ಅಡ್ಡ ಪರಿಣಾಮಗಳು, ಬಳಸುವ ವಿಧಾನ ಎಲ್ಲವನ್ನೂ ತಿಳಿದುಕೊಳ್ಳುತ್ತಾರೆ. ತಂತ್ರಜ್ಞಾನ ಬಹಳ ಮುಂದುವರೆದಿದೆ. ಆದರೆ ಅಂತಿಮವಾಗಿ ಗೆಲ್ಲುವುದು ಮಾನವನ ಬುದ್ಧಿವಂತಿಕೆ. ತಂತ್ರಜ್ಞಾನಕ್ಕಿಂತ ಮಾನವನ ಮೆದುಳು ಹೆಚ್ಚು ಶಕ್ತಿಶಾಲಿ ಎಂದು ವಿವರಿಸಿದರು.

ಪದವಿ ಪಡೆದ ವಿದ್ಯಾರ್ಥಿಗಳು ಔಷಧ ಶಾಸ್ತ್ರ ಕ್ಷೇತ್ರಕ್ಕೆ ಕಾಲಿಡುತ್ತಿರುವವರು. ಕೆಲವರು ಔಷಧ ಕಂಪನಿಗಳಲ್ಲಿ ಕೆಲಸ ಮಾಡಬಹುದು, ಕೆಲವರು ಸಂಶೋಧಕರಾಗಬಹುದು, ಕೆಲವರು ಉದ್ಯಮಿಗಳಾಗಬಹುದು ಅಥವಾ ಮೆಡಿಕಲ್ ಸ್ಟೋರ್‌ಗಳ ಸರಪಳಿಯನ್ನು ಆರಂಭಿಸಬಹುದು. ಯಾವ ಕ್ಷೇತ್ರದಲ್ಲೇ ಇದ್ದರೂ ಸಮಾಜದ ಆರೋಗ್ಯ ರಕ್ಷಣೆಯಲ್ಲಿ ನಿಮ್ಮ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದರು.

ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟ್ಸೂರ್‌ಮಠ್, ಉಪ ಕುಲಪತಿ ಡಾ.ಬಿ.ಸುರೇಶ್, ಕುಲಪತಿ ಡಾ.ಹೆಚ್.ಬಸವನಗೌಡಪ್ಪ, ರಿಜಿಸ್ಟ್ರಾರ್ ಡಾ.ಬಿ.ಮಂಜುನಾಥ್, ಪ್ರಾಂಶುಪಾಲ ಡಾ.ಟಿ.ಎಂ.ಪ್ರಮೋದ್ ಕುಮಾರ್ ಉಪಸ್ಥಿತರಿದ್ದರು.

ಪತಿಯಿಂದ ಪತ್ನಿ ಹತ್ಯೆ



ಶ್ರೀರಂಗಪಟ್ಟಣ, ಜು.2– ಪತಿಯೇ ಪತ್ನಿಯನ್ನು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ತಾಲೂಕಿನ ಆಲಗೂಡು ಗ್ರಾಮದಲ್ಲಿ ಬುಧವಾರ ರಾತ್ರಿ ನಡೆದಿದೆ. ಗ್ರಾಮದ ನಿವಾಸಿ ರಶ್ಮಿ (36), ತನ್ನ ಪತಿ ರಮೇಶ್‌ನಿಂದ ಹತ್ಯೆಗೊಳಗಾದವರು. ಕಳೆದ 12 ವರ್ಷಗಳ ಹಿಂದೆ ರಶ್ಮಿ ಮತ್ತು ರಮೇಶ್‌ಗೆ ಮದುವೆಯಾಗಿದ್ದು, ಆರಂಭದಲ್ಲಿ ಇಬ್ಬರೂ ಅನ್ಯೋನ್ಯವಾಗಿದ್ದರು. ಆದರೆ ರಶ್ಮಿ ಮೇಲೆ ಆಗಾಗ್ಗೆ ಅನುಮಾನ ವ್ಯಕ್ತಪಡಿಸಿ ರಮೇಶ್ ಮನೆಯಲ್ಲಿ ಗಲಾಟೆ ಮಾಡುತ್ತಿದ್ದ ಎನ್ನಲಾಗಿದೆ. ಹಿರಿಯರು ಹಲವು ಬಾರಿ ಬುದ್ಧಿಮಾತು ಹೇಳಿದ್ದರು. ಮನೆಯಲ್ಲಿ ಜಗಳ ನಿಂತಿರಲಿಲ್ಲ. ಕಳೆದ ರಾತ್ರಿ ರಶ್ಮಿ ಮತ್ತು ರಮೇಶ್ ನಡುವೆ ಜಗಳ ಆರಂಭವಾಗಿ ಕೊಲೆಯಲ್ಲಿ ಅಂತ್ಯವಾಗಿದೆ. ರಮೇಶ್ ಕಬ್ಬಿಣದ ರಾಡಿನಿಂದ ಪತ್ನಿ ತಲೆಗೆ ಬಲವಾಗಿ ಹೊಡೆದ ಪರಿಣಾಮ, ಆಕೆ ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಘಟನೆ ಸಂಬಂಧ ಅರಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ. ಘಟನಾ ಸ್ಥಳಕ್ಕೆ ಎಸ್ಪಿ ಡಾ.ವಿ.ಜೆ.ಶೋಭಾರಾಣಿ, ಡಿವೈಎಸ್ಪಿ ಕೃಷ್ಣಕುಮಾರ್, ಸಿಪಿಐ ವಿವೇಕಾನಂದ ಭೇಟಿ ನೀಡಿ ಪರಿಶೀಲಿಸಿದ್ದಾರೆ.